ಲಿಂಗಭೇದ ಸಮಸ್ಯೆ

ಮತ್ತು

ನವ್ಯೋತ್ತರ ಕಾದಂಬರಿಗಳು

(ಮುಖ್ಯ ಕಾದಂಬರಿಗಳನ್ನು ಅನುಲಕ್ಷಿಸಿ)

ಎಂ.ಫಿಲ್. ಪದವಿಯ ಆಂಶಿಕ ಅವಶ್ಯಕತೆಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಪ್ರಬಂಧ

ಸಂಶೋಧಕ

ಖಾಜಾವಲಿ ಈಚನಾಳ

ಮಾರ್ಗದರ್ಶಕರು

ಡಾ. ವಿಠಲರಾವ್ ಗಾಯಕ್ವಾಡ್

ಪ್ರವಾಚಕರು

ಭಾಷಾಂತರ ವಿಭಾಗ

51 A

ಭಾಷಾ ನಿಕಾಯ

ಭಾಷಾಂತರ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ

ಸೆಪ್ಟೆಂಬರ್ ೧೯೯೭

ಲಿಂಗಭೇದ ಸಮಸ್ಯೆ
ಮತ್ತು
ನವ್ಯೋತ್ತರ ಕಾದಂಬರಿಗಳು

(ಮುಖ್ಯ ಕಾದಂಬರಿಗಳನ್ನು ಅನುಲಕ್ಷಿಸಿ)

ಎಂ.ಫಿಲ್. ಪದವಿಯ ಆಂಶಿಕ ಅವಶ್ಯಕತೆಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಪ್ರಬಂಧ

ಕನ್ನಡ ವಿಶ್ವವಿದ್ಯಾಲಯ, ಹಂಪಿ
ಗ್ರಂಥಾಲಯ.

ಸಂಶೋಧಕರು

ಖಾಜಾವಲಿ ಈಚನಾಳ

AKSHARA GRANTHALAYA
ACCN NO:042161

ಮಾರ್ಗದರ್ಶಕರು

ಡಾ. ವಿಠಲರಾವ್ ಗಾಯಕ್ವಾಡ್

ಪ್ರವಾಚಕರು

ಭಾಷಾಂತರ ವಿಭಾಗ

ಭಾಷಾ ನಿಕಾಯ

ಭಾಷಾಂತರ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ

ಸೆಪ್ಟೆಂಬರ್ ೧೯೯೭

042161

8KO.9
ECH

ಪ್ರಮಾಣ ಪತ್ರ

''ಲಿಂಗಭೇದ ಸಮಸ್ಯೆ ಮತ್ತು ಸ್ವಾತಂತ್ರ್ಯೋತ್ತರ ಕಾದಂಬರಿಗಳು'' ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು ಎಂ.ಫಿಲ್.ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಡಾ. ವಿಠಲರಾವ್ ಗಾಯಕ್ವಾಡ್ ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಈ ಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ದಿನಾಂಕ: ೨೦-೦೯-೧೯೯೭

ಸ್ಥಳ: ವಿದ್ಯಾರಣ್ಯ

೨೦/೯/೯೭

ಖಾಜಾವಲಿ ಈಚನಾಳ
ಎಂ.ಫಿಲ್.ವಿದ್ಯಾರ್ಥಿ
ಭಾಷಾಂತರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ, ಕಮಲಾಪುರ-೫೮೩ ೨೨೧

ದೃಢೀಕರಣ ಪತ್ರ

ಶ್ರೀ ಶಾಜಾವಲಿ ಈಚಪಾಳ ಇವರು ''ಲಿಂಗಭೇದ ಸಮಸ್ಯೆ ಮತ್ತು ನವ್ಯೋತ್ತರ ಕಾದಂಬರಿಗಳು'' ಎಂಬ ಶೀರ್ಷಿಕೆಯ ಈ ಸಂಶೋಧನ ಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತಾರೆ. ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಈ ಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಎಲ್ಲಿಯೂ ಯಾವುದೇ ಪದವಿಗಾಗಲಿ ಸಲ್ಲಿಸಿರುವುದಿಲ್ಲ ಎಂದು ಈ ಮೂಲಕ ದೃಢೀಕರಿಸಲಾಗಿದೆ.

ದಿನಾಂಕ: ೨೦-೦೯-೧೯೯೭

ಸ್ಥಳ: ವಿದ್ಯಾರಣ್ಯ

ಡಾ. ವಿಠಲರಾವ್ ಗಾಯಕ್ವಾಡ
ಮಾರ್ಗದರ್ಶಕರು
ಭಾಷಾಂತರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ, ಕಮಲಾಪುರ-೫೮೩ ೨೨೧

ಕೃತಜ್ಞತೆಗಳು

ಕನ್ನಡ ವಿಶ್ವವಿದ್ಯಾಲಯದಲ್ಲಿ ಎಂ. ಫಿಲ್. ಅಧ್ಯಯನಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟ ಮಾನ್ಯ ಕುಲಪತಿಗಳಾದ ಡಾ. ಚಂದ್ರಶೇಖರ ಕಂಬಾರ ಅವರಿಗೆ ಹಾಗೂ ಮಾನ್ಯ ಕುಲಸಚಿವರಾದ ಡಾ. ಕೆ.ಎಂ.ಸುರೇಶ್ ಅವರಿಗೆ,

ಅಧ್ಯಯನಾಂಗದ ನಿರ್ದೇಶಕರಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಅವರಿಗೆ, ಭಾಷಾಂತರ ವಿಭಾಗದ ಮುಖ್ಯಸ್ಥ-ರಾಗಿರುವ ಡಾ. ಕರೀಗೌಡ ಬೀಚನಹಳ್ಳಿ ಅವರಿಗೆ ಗೌರವ ಪೂರ್ವಕ ಕೃತಜ್ಞತೆಗಳು.

ಅಧ್ಯಯನದ ತಾತ್ವಿಕತೆಯನ್ನು ಕುರಿತು ಅರ್ಥಪೂರ್ಣ ಚರ್ಚೆ ನಡೆಸಿ ನನ್ನನ್ನು ಹೊಸ ಚಿಂತನೆಗೆ ತೊಡಗಿಸಿದ ಡಾ. ಮೋಹನ ಕುಂಟಾರ, ಡಾ. ವಿರೇಶ ಬಡಿಗೇರ, ಡಾ. ಎಚ್.ಟಿ. ಹಳ್ಳಿಕೇರಿ, ಡಾ. ಡಿ. ಪಾಂಡುರಂಗಬಾಬು ಅವರಿಗೆ,

ಆಸಕ್ತಿಯ ವಿಷಯಗಳನ್ನು ವೈಚಾರಿಕ ನೆಲೆಯಲ್ಲಿ ಅಧ್ಯಯನಕ್ಕೆ ತೊಡಗಲು ಪ್ರೇರೇಪಿಸಿದ ಡಾ. ಪುರುಷೋತ್ತಮ ಬಿಳಿಮಲೆ, ಡಾ. ರಹಮತ ತರೀಕೆರೆ, ಡಾ. ಕೆ.ವಿ.ನಾರಾಯಣ ಅವರಿಗೆ,

ಎಲ್ಲಕ್ಕೂ ಮಿಗಿಲಾಗಿ ಅಧ್ಯಯನಕ್ಕೆ ಪೂರಕವಾಗುವಂತೆ ಚಿಂತನೆಗೆ ಹಚ್ಚಿ, ಬರವಣಿಗೆಯ ಓರೆ-ಕೋರೆಗಳನ್ನು ಸಹನೆಯಿಂದ ತಿದ್ದಿ-ತೀಡಿ ಆತ್ಮೀಯತೆಯಿಂದ ಸಹಕರಿಸಿ ಮಾರ್ಗದರ್ಶನ ಮಾಡಿದ ಪ್ರೀತಿಯ ಗುರುಗಳಾದ ಡಾ. ವಿಠಲರಾವ ಗಾಯಕ್ವಾಡ ಅವರಿಗೆ,

ನನ್ನ ಅಧ್ಯಯನ ಕುರಿತು ವಿಚಾರಿಸುತ್ತಿದ್ದ ಪ್ರೊ. ಹನುಮಣ್ಣನಾಯಕ ದೊರೆ ಹಾಗೂ ಆತ್ಮೀಯರಾದ ಶ್ರೀ ಅಮರೇಶ ನುಗಡೋಣಿ ಅವರಿಗೆ,

ನನ್ನ ಎಂ.ಫಿಲ್. ಅಧ್ಯಯನಕ್ಕೆ ಪ್ರೋತ್ಸಾಹಿಸಿದ ಆತ್ಮೀಯ ಹಿತೈಷಿಗಳಾದ ಶ್ರೀ ಅಮರೇಶ ಕುಂಬಾರ ಮತ್ತು ಸಲೀಂ ಪಾಷ ಹಾಗೂ ನನ್ನ ಒಲವಿನ ಸ್ನೇಹ ಜೀವಿಗಳಾದ ಹುಲಗಯ್ಯ, ಶಶಿಕಾಂತ, ನಿರ್ಮಲ ಪಾಟೀಲ, ಬಸು ಅವರಿಗೆ,

ನನ್ನನ್ನು ಅಕ್ಷರ ಲೋಕಕ್ಕೆ ಪರಿಚಯಿಸಿದ ತಂದೆ-ತಾಯಿಗಳಿಗೆ ಪ್ರೀತಿಯ ಚಿಕ್ಕಪ್ಪ ನಬಿಸಾಬ ಮತ್ತು ನನ್ನ ಬೆನ್ನ ಹಿಂದಿನ ಪ್ರೀತಿಯ ಸಹೋದರ-ಸಹೋದರಿಯರಿಗೆ,

ಅಧ್ಯಯನದ ಸಂದರ್ಭದಲ್ಲಿ ವಿಚಾರಗಳನ್ನು ಹಂಚಿಕೊಂಡ ಸಹ ಸಂಶೋಧನ ಸಂಗಾತಿಗಳಿಗೆ ಹಾಗೂ ಪಿಎಚ್.ಡಿ., ಒಲವಿನ ಗೆಳೆಯರಿಗೆ,

ಕನ್ನಡ ವಿಶ್ವವಿದ್ಯಾಲಯದ ಎಲ್ಲ ವಿದ್ವನ್ಮಣಿಗಳಿಗೆ, ಅಕ್ಷರ ಗ್ರಂಥಾಲಯದ ಸಿಬ್ಬಂದಿ ವರ್ಗದವರಿಗೆ ಮತ್ತು ಸಂಪ್ರಬಂಧವನ್ನು ಅಚ್ಚುಕಟ್ಟಾಗಿ ಗಣಕಯಂತ್ರಕ್ಕೆ ಅಳವಡಿಸಿದ ಎ.ಎಂ.ಕೃಪಾಶಂಕರ, ಗಾಯತ್ರಿ, ಸ್ಫೂರ್ತಿಯ ಶ್ರೀಮತಿ ರೇಣುಕಾ ಅವರಿಗೆ ನನ್ನ ಕೃತಜ್ಞತೆಗಳು.

ಖಾಜಾವಲಿ ಈಚನಾಳ

ಪರಿವಿಡಿ:

ಅಧ್ಯಾಯ-ಒಂದು

ಅಧ್ಯಯನದ ಉದ್ದೇಶ, ಅವಶ್ಯಕತೆ, ವ್ಯಾಪ್ತಿ ಮತ್ತು ಅಧ್ಯಯನದ ಹಿಂದಿನ ನಿಲುವುಗಳು

ಅ. ಅಧ್ಯಯನದ ಉದ್ದೇಶ:

ಕನ್ನಡದಲ್ಲಿ ಈ ಹೊತ್ತು ಅನೇಕ ಕೃತಿಗಳು ಅಗಾಧ ಪ್ರಮಾಣದಲ್ಲಿ ಹೊರಬರುತ್ತಲಿವೆ. ಜೊತೆಗೆ ಸಂಶೋಧನ ಕ್ಷೇತ್ರವೂ ವಿಸ್ತೃತವಾಗುತ್ತಲಿದೆ. ಇಂದು ಸಂಶೋಧನೆಯು ಹೊಸ ಹೊಸ ಮಾದರಿಗಳಲ್ಲಿ ಹೊಸ ಹೊಸ ಜಾಡಿನಲ್ಲಿ ಮುಂದುವರಿಯುತ್ತಲಿದೆ. ಒಂದೇ ಕೃತಿಯನ್ನು ವಿವಿಧ ಮಗ್ಗಲುಗಳಲ್ಲಿ ನೋಡುತ್ತಲಿರುವ ಅಂಶವನ್ನು ಕಾಣಬಹುದು. ಚಿಂತನಾಕ್ರಮವು, ಅಧ್ಯಯನ ಮಾದರಿಗಳು ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗಿರುತ್ತವೆ.

ನಾನು ನನ್ನ ಅಧ್ಯಯನಕ್ಕೆ ಆಯ್ದುಕೊಂಡ ಪ್ರಮುಖ ಕಾದಂಬರಿಗಳಲ್ಲಿ ಪ್ರಬಂಧದ ತಲೆಬರಹಕ್ಕೆ ಅನುಗುಣವಾಗಿ ಸ್ತ್ರೀಯನ್ನು ಹೇಗೆ ನಿರ್ವಚಿಸಲಾಗಿದೆ? ಅವಳನ್ನು ಹಾಗೆ ನಿರ್ವಚಿಸಲು ಮತ್ತು ಆ ಸ್ಥಿತಿಯಲ್ಲಿ ಇಡಲು ಕಾರಣವಾದ ಅಂಶಗಳು ಯಾವುವು ಎಂಬುದನ್ನು ಕಂಡುಕೊಳ್ಳುವುದು ನನ್ನ ಅಧ್ಯಯನದ ಮುಖ್ಯ ಉದ್ದೇಶವಾಗಿದೆ. ಪ್ರಬಂಧ ರಚನೆಗೆ ಇಟ್ಟುಕೊಂಡ ಕಾದಂಬರಿಗಳಲ್ಲಿ ಸ್ತ್ರೀ-ಪುರುಷರಲ್ಲಿ ಉಂಟಾದ ಬಿರುಕುಗಳು ಮತ್ತು ಪುರುಷ ಮಹಿಳೆಯನ್ನು ಶೋಷಿಸುತ್ತ ಬಂದ ಬಗೆಯನ್ನು ಕೂಲಂಕಷವಾಗಿ ನೋಡುತ್ತ, ಜೊತೆಗೆ ಶೋಷಣಾ ಚಕ್ರಕ್ಕೆ ಸಿಲುಕಿದ ಪರಿಯನ್ನು ಕುರಿತು ಅಧ್ಯಯನ ಮಾಡುವುದು ನನ್ನ ಮುಖ್ಯ ಪ್ರಯತ್ನವಾಗಿದೆ.

ನವ್ಯೋತ್ತರದ ಸಂದರ್ಭದಲ್ಲಿ ಹುಟ್ಟಿಕೊಂಡ ಕಾದಂಬರಿಗಳಲ್ಲಿ ಅಧ್ಯಯನಕ್ಕೆ ಎತ್ತಿಕೊಂಡ ಕಾದಂಬರಿಗಳ ಜೊತೆಗೆ ಅಂದಿನ ಸಮಕಾಲೀನ ಬರಹಗಾರರ ಕೃತಿಗಳನ್ನು ಪೂರಕವಾಗಿ ಅಧ್ಯಯನ ಮಾಡಲು ಉದ್ದೇಶಿಸಲಾಗಿದೆ. ಸಂಶೋಧನೆಯು ಅಂತರ ಶಿಸ್ತೀಯ ಮತ್ತು ಬಹುಮುಖಿ ನೆಲೆಯಲ್ಲಿ ನಡೆಯುತ್ತಿರುವ ಈ ಸಂದರ್ಭದಲ್ಲಿ ಅಧ್ಯಯನಕ್ಕೆ ತೆಗೆದುಕೊಂಡ ಕಾದಂಬರಿಗಳನ್ನು ಸ್ತ್ರೀವಾದಿ ನೆಲೆಯಿಂದ ಅಧ್ಯಯಿಸುವುದಕ್ಕೆ ಇಲ್ಲಿ ಪ್ರಯತ್ನಿಸಲಾಗಿದೆ. ಸಂಶೋಧನಾ ಕ್ಷೇತ್ರ ಅತ್ಯಂತ ವ್ಯಾಪಕವಾದುದು. ಜೊತೆಗೆ ಅದರಲ್ಲಿ ಹೊಸತನವು ಮೂಡಿಬರುತ್ತಲೇ ಇರುತ್ತದೆ. ಅದಕ್ಕಾಗಿ ಈ ಅಧ್ಯಯನವೇ ಅಂತಿಮವೆಂದು ಹೇಳಲಾಗದು. ನನಗೆ ದಕ್ಕಿದ, ನನ್ನ ಗ್ರಹಿಕೆಗೆ ನಿಲುಕಿದ ಕೆಲ ವಿಚಾರಗಳನ್ನು ಇಲ್ಲಿ ಚರ್ಚಿಸಿದ್ದೇನೆ. ಇನ್ನು ಈ ದಿಕ್ಕಿನಲ್ಲಿ ಸಂಶೋಧನೆಯು ನಡೆಯಬೇಕಾಗಿದೆ, ಹೊಸ ಹೊಳಹುಗಳನ್ನು ನೀಡಬೇಕಾಗಿದೆ.

ಆ. ಅಧ್ಯಯನದ ಅವಶ್ಯಕತೆ:

೧೯೪೭ರಲ್ಲಿ ಬ್ರಿಟಿಷ್ ದಾಸ್ಯದಿಂದ ಬಿಡುಗಡೆಗೊಂಡ ಸ್ವತಂತ್ರ ಭಾರತ ನೂರಾರು ಸಮಸ್ಯೆಗಳ ಆಗರವಾಗಿದೆ. ಆಹಾರ ಸಮಸ್ಯೆ,ಜನಸಂಖ್ಯೆ ಸಮಸ್ಯೆ, ದಾರಿದ್ರ್ಯದ ಸಮಸ್ಯೆ, ವಸತಿ ಸಮಸ್ಯೆ ಮುಂತಾದವುಗಳು ಭಾರತದ ಅನಭಿವೃದ್ಧಿಗೆ ಮುಖ್ಯಕಾರಣವಾಗಿವೆ. ಮಾನವೀಯ ನೆಲೆಯಿಂದ ನೋಡುವುದಾದರೆ ಇವೆಲ್ಲಕ್ಕಿಂತ ಪ್ರಧಾನವಾದುದು ಲಿಂಗಭೇದ ಸಮಸ್ಯೆ! ಈ ಸಮಸ್ಯೆ ಇಂದು ನಿನ್ನೆಯದಲ್ಲ. ಇತಿಹಾಸದಿಂದಲೂ ಈ ಲಿಂಗಭೇದ ಸಮಸ್ಯೆಯನ್ನು ಪೋಷಿಸಿಕೊಂಡು ಬಂದುದು ನಮ್ಮ ದೇಶದ ಬಹುದೊಡ್ಡ ದುರಂತ! ಇದಕ್ಕೆ ಪೂರಕವಾದ ಆಧಾರವೊಂದು ಹೀಗಿದೆ.

ಭಾರತೀಯ ಚರಿತ್ರೆ ಸ್ಪಷ್ಟವಾಗಿ ಆರಂಭವಾಗುತ್ತಿರುವುದು ಕ್ರಿ.ಪೂ.೧೫ ಋಗ್ವೇದದಿಂದ ಎಂದು ಉಲ್ಲೇಖಗಳಿವೆ. ಈ ದೇಶಕ್ಕೆ ಹೆಸರು ಬಂದಿರುವುದೂ ಪುರುಷರಿಂದಲೇ. ಶಕುಂತಲೆಯ ಮಗ ಭರತ, ತಾನು ಕೈಹಿಡಿದ ಮೂವರು ಹೆಂಡತಿಯರಿಂದ ಪಡೆದ ಮಕ್ಕಳು ತನ್ನನ್ನು ಹೋಲುವದಿಲ್ಲ ಎಂಬ ಆಕ್ಷೇಪವೆತ್ತುತ್ತಾನೆ. ಮನನೊಂದ ಆ ತಾಯಂದಿರು ತಾವು ಹೆತ್ತ ಮಕ್ಕಳನ್ನು ತಾವೇ ಕೊಂದು ಹಾಕುತ್ತಾರೆ. ಇಂಥ ಪುರುಷರ ಈ ಬಗೆಯ ದುಷ್ಕೃತ್ಯಗಳನ್ನು ಮುಚ್ಚಿಟ್ಟು ಅವರ ಯುದ್ಧ, ಸಾಹಸ, ಕೀರ್ತಿಗಳ ವೈಭವೀಕರಣವೇ ನಮ್ಮ ದೇಶದ ಚರಿತ್ರೆಯಾಗಿದೆ ಎಂದು ಹೇಳಲಾಗುತ್ತದೆ.

ಇಂದಿಗೂ ಸಮಾಜದಲ್ಲಿ ಮಹಿಳೆ ಎದುರಿಸುವ ಸಮಸ್ಯೆಗಳಲ್ಲಿ ಏನೇನೂ ಭಿನ್ನತೆಯಿಲ್ಲ. ಪುರುಷ ಸ್ತ್ರೀಯ ಮೇಲೆ ಅನ್ಯಾಯ ಅತ್ಯಾಚಾರ, ಶೋಷಣೆಗಳನ್ನು ನಿರಂತರವಾಗಿ ನಡೆಸುತ್ತಲೇ ಬಂದಿದ್ದಾನೆ. ಈ ರೀತಿಯ ಪ್ರವೃತ್ತಿಗೆ ಕಾರಣಗಳೇನು? ಇದರ ಪರಿಹಾರವೇನು? ಎಂಬುದರ ಕುರಿತು ಆಳವಾದ ಅಧ್ಯಯನದ ಅವಶ್ಯಕತೆ ಹಿಂದೆಂದಿಗಿಂತಲೂ ಇಂದು ಜರೂರಾಗಿದೆ.

ಹಿಂದಿನ ಮೂಲ ಬೇರುಗಳನ್ನು ಗುರುತಿಸುವುದೇ ಈ ಅಧ್ಯಯನದ ಅವಶ್ಯಕತೆ. ಈ ಹಿನ್ನಲೆಯಲ್ಲಿ ಸ್ತ್ರೀಪರ ಸಂಘಟನೆಗಳು ಸ್ತ್ರೀಪರ ಚಿಂತಕರು, ಪ್ರಗತಿಪರ ವಿಚಾರವಾದಿಗಳು ಈ ದಿಶೆಯಲ್ಲಿ ಅಧ್ಯಯನಕ್ಕೆ ಮುಂದಾಗ-ಬೇಕಾಗಿದೆ. ಒಂದು ಸಮಾಜದಲ್ಲಿ ಸೃಷ್ಟಿಗೊಳ್ಳುವ ಪ್ರಧಾನ ಸಂಸ್ಕೃತಿಯ ನಂಬಿಕೆಗಳು ಹುಟ್ಟುಹಾಕುವ ಸಂಪ್ರದಾಯ-ಗಳನ್ನು ಮುರಿದು ಕಟ್ಟುವ ನೆಲೆಯಲ್ಲಿ ಅಧ್ಯಯನ ನಡೆಯುವುದು ಅತ್ಯಂತ ಅವಶ್ಯವಾಗಿದೆ.

ಹೋರಾಟದ ಸ್ವರೂಪಗಳು ಎರಡು. ಒಂದು ನೇರ ಮತ್ತೊಂದು ಸೃಜನಶೀಲ. ಮೇಲ್ನೋಟಕ್ಕೆ ಇವೆರಡೂ ಒಂದೇ ಎಂಬಂತೆ ಕಂಡರೂ ಸೂಕ್ಷ್ಮ ಭಿನ್ನತೆಯುಳ್ಳವೆಂಬುದು ಸ್ಪಷ್ಟ. ಸಾಹಿತ್ಯಕ ನೆಲೆ ಕಾಲಾತೀತ ಧ್ವನಿ. ಆಶಯ-ಗಳನ್ನು ಜೀವನದ ಸೂಕ್ಷ್ಮ ಅನುಭವದಿಂದಲೇ ಅಭಿವ್ಯಕ್ತಿಸುತ್ತಿರುತ್ತದೆ. ವಾಲ್ಮೀಕಿಯಿಂದ ಇಂದಿನವರೆಗೂ ಭಾರತೀಯ ಸಾಹಿತ್ಯವನ್ನು ಕುರಿತು ಅಧ್ಯಯನವನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ, ಪುರುಷ-ಸ್ತ್ರೀ ಇಬ್ಬರನ್ನು ವಿಭಿನ್ನ ಘಟಕಗಳಾಗಿ ಕಾಣುತ್ತಬಂದಿರುವುದು ಮನದಟ್ಟಾಗುತ್ತದೆ. 'ಶಕ್ತಿ-ಅಶಕ್ತಿ'ಯ ಸ್ವರೂಪದಲ್ಲಿ 'ಪುರುಷ-ಸ್ತ್ರೀ' ಬದುಕು ಭಿನ್ನದಾರಿಯಲ್ಲಿ ಸಾಗಿದೆ. ಶಕ್ತಿ ಪ್ರಧಾನ ವ್ಯವಸ್ಥೆ ಎಂದು ರೂಪಗೊಂಡಿತೋ ಅಂದಿನಿಂದಲೇ 'ಲಿಂಗಭೇದ ಸಮಸ್ಯೆ' ಹುಟ್ಟಿಕೊಂಡಿತೆಂಬುದರಲ್ಲಿ ಎರಡು ಮಾತಿಲ್ಲ.

ವಿದ್ಯಾಭ್ಯಾಸ ಸಾರ್ವತ್ರಿಕವಾದ ಮೇಲೂ ಸ್ತ್ರೀ ಬದುಕಿನ ಮಾರ್ಗವನ್ನು ಒಂದೇ ಪಿಟ್ಟನಲ್ಲಿ ನೆಲಸುವಂತೆ ಹಾಗೂ ಸಾಗುವಂತೆ ಆದದ್ದು ದುಃಖದಾಯಕ ಸಂಗತಿ. ಎಂತಲೇ 'ಮನುಷ್ಯ ಜಾತಿ ತಾನೊಂದೆ ವಲಂ' ಎಂದು ಒಂದು ಸಾವಿರ ವರ್ಷಗಳ ಹಿಂದೆ ಪಂಪ ದನಿ ಎತ್ತಿದರೂ ನಾವಿನ್ನೂ ಅದನ್ನು ಅರ್ಥಮಾಡಿಕೊಳ್ಳಲಾಗಿಲ್ಲ. ವರ್ಣಾಶ್ರಮ, ವರ್ಗ

ವ್ಯವಸ್ಥೆಯೊಂದಿಗೆ ಗಂಡು-ಹೆಣ್ಣು ಎರಡು ಜಾತಿಗಳು ಎಂದು ಹೇಳುತ್ತಾ ಬಂದಿದ್ದೇವೆ. ಇವು ಜೈವಿಕವೋ, ಭೌತಿಕವೋ ಎಂಬುದನ್ನು ಅರ್ಥಮಾಡಿಕೊಳ್ಳಬೇಕಾದ ಅವಶ್ಯಕತೆ ಇದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಯನವನ್ನು ಸೂಕ್ಷ್ಮವಾಗಿ ವಿಶ್ಲೇಷಿಸಲಾಗಿದೆ.

೩. ಅಧ್ಯಯನದ ವ್ಯಾಪ್ತಿ:

ಕಾದಂಬರಿ ಸಾಹಿತ್ಯ ಅತ್ಯಂತ ಜನಪ್ರಿಯವಾದುದು. 'ಕರತಲ ರಂಗಭೂಮಿ' ಎಂದೇ ಹೆಸರಾದ ಕಾದಂಬರಿಗಳನ್ನು ಓದುವುದೆಂದರೆ ನನಗೆ ಮೊದಲಿನಿಂದಲೂ ತುಂಬಾ ಇಷ್ಟ. ಈ ಕಾರಣದಿಂದಲೇ ನಾನು ಅಧ್ಯಯನಕ್ಕೆ ಕಾದಂಬರಿಗಳನ್ನು ಆಯ್ಕೆಮಾಡಿಕೊಂಡಿರುವೆನು. ನನ್ನ ಪ್ರಬಂಧದ ಶೀರ್ಷಿಕೆ 'ನವ್ಯೋತ್ತರ ಕಾದಂಬರಿ'ಗಳೆಂದು ಇದ್ದರೂ ಅದು ಸೀಮಿತತೆಯನ್ನು ಪಡೆದುಕೊಂಡಿದೆ.

ನವ್ಯೋತ್ತರ ಎಂಬ ಹೆಸರಿನಲ್ಲಿ ಮುಂದುವರೆದು ಅಧ್ಯಯನಕ್ಕೆ ಮುಂದಡಿಯಿಟ್ಟರೆ ತೊಂದರೆಗೆ ಸಿಕ್ಕಿಕೊಳ್ಳ-ಬೇಕಾಗುತ್ತದೆಂದು ಪರಿಭಾವಿಸಿದೆ. ನವ್ಯೋತ್ತರ ಕಾಲಘಟ್ಟದ ಕಾದಂಬರಿಗಳೆಲ್ಲವನ್ನು ಅಧ್ಯಯನದ ವ್ಯಾಪ್ತಿಗೆ ಒಳಗುಮಾಡಿಕೊಂಡಿದ್ದಾದರೆ, ಪಿಎಚ್.ಡಿ. ಅಧ್ಯಯನಕ್ಕೂ ಮೀರಿದ ವಿಷಯವಾಗುತ್ತದೆ. ಹೀಗಾಗಿ ಕೆಲವು ಆಯ್ದ ಮತ್ತು ಪ್ರಾತಿನಿಧಿಕವೆನ್ನಬಹುದಾದ ಕಾದಂಬರಿಗಳನ್ನು ಅಧ್ಯಯನಕ್ಕೆ ಆಯ್ಕೆಮಾಡಿಕೊಂಡಿದ್ದೇನೆ.

ಈ ಒಂದು ಕಾಲಘಟ್ಟದಲ್ಲಿ ಸುಮಾರು ಇಪ್ಪತ್ತಕ್ಕಿಂತಲೂ ಹೆಚ್ಚು ಕಾದಂಬರಿಗಳಿವೆ. ಅವುಗಳಲ್ಲಿ ಪ್ರಮುಖ-ವೆನಿಸಿದ ಚಂದ್ರಶೇಖರ ಕಂಬಾರ ಅವರ 'ಸಿಂಗಾರೆವ್ವ ಮತ್ತು ಅರಮನೆ', ಸಾರಾ ಅಬೂಬಕ್ಕರ್ ಅವರ 'ಚಂದ್ರಗಿರಿಯ ತೀರದಲ್ಲಿ', ಚನ್ನಣ್ಣ ವಾಲೀಕಾರ ಅವರ 'ಹುಲಿಗೆವ್ವ', ಅನುಪಮಾ ನಿರಂಜನ ಅವರ 'ಮಾಧವಿ' ಲಂಕೇಶ ಅವರ 'ಅಕ್ಕ' ಮತ್ತು ವೀಣಾಶಾಂತೇಶ್ವರ ಅವರ 'ಗಂಡಸರು'ಎಂಬ ಈ ಆರು ಕಾದಂಬರಿಗಳನ್ನು ಅಧ್ಯಯನದ ವ್ಯಾಪ್ತಿಗೆ ಒಳಪಡಿಸಲಾಗಿದೆ. ಜೊತೆಗೆ ಉಳಿದ ಕೃತಿಗಳನ್ನು ಅಲ್ಲಲ್ಲಿ ಉಲ್ಲೇಖಿಸಲಾಗಿದೆ.

ನವ್ಯೋತ್ತರ ಕಾಲಘಟ್ಟ (ಹಾಗೆಂದು ಕರೆಯುವುದಕ್ಕೆ ಕೆಲವರು ಆಕ್ಷೇಪಿಸಿದ್ದಾರೆ) ಅತ್ಯಂತ ಸೂಕ್ಷ್ಮವಾದುದು. ನವೋದಯ, ನವ್ಯಕ್ಕಿಂತಲೂ ಭಿನ್ನವಲ್ಲದಿದ್ದರೂ ಅವೆರಡರ ಇತಿಮಿತಿಗಳನ್ನು ದಾಟಿ ಹೊಸ ಘಟ್ಟವೊಂದರತ್ತ ಕೊಂಡೊಯ್ದ ಹಂತ. ಕಾಲದ ಮಿತಿ ಇದ್ದರೂ ಹೊಸಗನ್ನಡ ಸಾಹಿತ್ಯದ ಘಟ್ಟಗಳನ್ನು ಗೆರೆಕೊರೆದು ತೋರಿಸುವುದು ಕಷ್ಟ. ಜೀವನದೊಂದಿಗೆ ಬೆಳೆಯುವ ಸಾಹಿತ್ಯ ಅನುಭವವನ್ನು ಅನುಭಾವವನ್ನಾಗಿಸಿ ಸಮಕಾಲೀನ ಬದುಕನ್ನು ಪ್ರೇರೇಪಿಸುತ್ತದೆ. ಎಂತಲೇ 'ವ್ಯಾಪ್ತಿ'ಯನ್ನು ಒಂದು ನಿಖರ ಚೌಕಟ್ಟಿನಲ್ಲಿ ಗುರುತಿಸುವುದು ಕಷ್ಟ. ಸಾಹಿತ್ಯದ ಸಂಶೋಧನೆಯಲ್ಲಂತೂ ಇದು ಇನ್ನೂ ಕಷ್ಟ ಆದಾಗ್ಯೂ ಇದನ್ನು ಒಂದು ವ್ಯಾಪ್ತಿಯಲ್ಲಿ ಹಿಡಿದಿಡುವ ಅನಿವಾರ್ಯತೆ ಇದೆ. ಪ್ರಪಂಚ ವಿಸ್ತೃತವಾದದ್ದು ಇಂದು ಸಂಕುಚಿತವಾಗಿದೆ. ಭಾಷೆ ತಂದು ಕೊಡುವ ವಿಶ್ವದ ಚಿತ್ರಣ ನಮ್ಮನ್ನು ಸೆರೆ ಪ್ರಭಾವಿಸುತ್ತಲಿದೆ. ಹಾಗಾಗಿಯೇ ಸದಾ ಜೀವಂತವಾಗಿರುವ, ಪ್ರಾಯೋಗಿಕವಾಗಿರುವ ಜೀವನವನ್ನು ಸಾಹಿತ್ಯ ಮೂರ್ತಗೊಳಿಸಿ ಕೊಡುತ್ತಲೇ ಬಂದಿದೆ. ಬದುಕು ದುರ್ಭರ, ಸಂಕೀರ್ಣವಾದಾಗಲೆಲ್ಲ ಸಂಕ್ರಮಣ ಬಂದೇ ಬರುತ್ತದೆ. ಏಕೆಂದರೆ ವ್ಯಕ್ತಿಗೆ ದತ್ತವಾಗುತ್ತಲೇ ಬಂದಿರುವ ಒಂದು 'ವ್ಯಕ್ತಿತ್ವ' ಅಂಥದನ್ನು ರೂಪಿಸುತ್ತದೆ. ಈ ಹಿನ್ನೆಲೆಯಲ್ಲಿ ನವ್ಯೋತ್ತರ ಕಾದಂಬರಿಗಳ ವ್ಯಾಪ್ತಿ ವಿಸ್ತೃತವಾದುದಲ್ಲವಾದರೂ ಕಿರಿದಲ್ಲ. ವಿಕಾಸಶೀಲ ಬದುಕಿನಲ್ಲಿ ಸಮಕಾಲೀನ ಮತ್ತು ಕಾಲಾತೀತ ಅಗತ್ಯಗಳನ್ನು ಇವು ಗುರುತಿಸಿವೆ. ಹಾಗಾಗಿ ಈ ಅಧ್ಯಯನ ಮುಖ್ಯವಾದುದು ಎನಿಸುತ್ತದೆ.

ಈ. ಅಧ್ಯಯನದ ಹಿಂದಿನ ನಿಲುವುಗಳು:

ಸ್ತ್ರೀ ಪುರುಷ ಪರಸ್ಪರ ಭಿನ್ನ ಎಂಬ ಅಂಶ ಸ್ಪಷ್ಟವಾಗಿದ್ದರೂ ವ್ಯಕ್ತಿತ್ವದಿಂದ ಅಲ್ಲವೆಂಬುದರಲ್ಲಿ ಎರಡು ಮಾತಿಲ್ಲ. ಬದುಕು ಕ್ರಿಯಾಶೀಲವಾಗಿರುವಾಗ ಇವರಿಬ್ಬರ ಕ್ರಿಯಾಶೀಲತೆ ವೈಯುಕ್ತಿಕವಾದುದು, ಆದರೂ ಅದು ನಿರಪಮವಾಗಿರಬೇಕು. ಸ್ತ್ರೀ-ಪುರುಷರು ಭಿನ್ನವೆಂಬ ಅಂಶವನ್ನೇ ಮುಖ್ಯವಾಗಿಟ್ಟುಕೊಂಡು ಸ್ತ್ರೀಯು ಕೀಳೆಂದು ಭಾವಿಸುವುದು ಸರ್ವಥಾ ಸರಿಯಲ್ಲ.

ಗಂಡು-ಹೆಣ್ಣಿನ ನಡುವಿನ ದೈಹಿಕ ವ್ಯತ್ಯಾಸಗಳನ್ನು ಮೂಲವಾಗಿ ಆಧರಿಸಿ ಶತಮಾನಗಳಿಂದ ಸಾಗಿಬಂದ ನಮ್ಮ ಕೌಟುಂಬಿಕ, ಸಾಮಾಜಿಕ,ಆರ್ಥಿಕ, ರಾಜಕೀಯ ಕ್ಷೇತ್ರಗಳ ಇತಿಹಾಸದಲ್ಲಿ ಶೋಷಣೆಯ ಅವುಗಳ ಬೇರುಗಳಿವೆ.

ಆದ್ದರಿಂದ ಈ ಸಮಸ್ಯೆಗಳ ಮೂಲೋತ್ಪಾಟನೆ. ಮೂಲಭೂತವಾದ ವ್ಯತ್ಯಾಸಗಳನ್ನು ಬಯಸುತ್ತದೆ. ಈ ಸಮಸ್ಯೆಯು ವಿಷವೃಕ್ಷದ ಬೇರುಗಳಿಗೆ ನೀರುಣಿಸುತ್ತ ಅದರ ರೆಂಬೆಕೊಂಬೆಗಳನ್ನು ಸವರುವದರಿಂದ ಏನೇನೂ ಪ್ರಯೋಜನವಿಲ್ಲ. ಈ ಕುರಿತಾದ ನಮ್ಮ ಭಾವನಾತ್ಮಕ ಸ್ಪಂದನ, ಬಿಡಿ ಪ್ರಕರಣಗಳತ್ತ ನಮ್ಮ ಗಮನ ಹರಿಯಬೇಕು, ಆದರೂ ಇದು ಕೇವಲ ಪ್ರಾಥಮಿಕ ಪ್ರತಿಕ್ರಿಯೆ ಮಾತ್ರ. ಈ ನಿಟ್ಟಿನಲ್ಲಿ ನಡೆಯುವ ಪ್ರತಿಕ್ರಿಯೆ, ಹೋರಾಟಗಳು ಅತ್ಯಂತ ಅರ್ಥಪೂರ್ಣವಾಗಿ ನಡೆಯಬೇಕು. ಹೋರಾಟಗಳು ಕೇವಲ ಹೋರಾಟಗಳಾಗದೇ ಅವು ಮಾನವೀಯತೆಯ ಮಂದಾರವನ್ನು ಅರಳಿಸುವ ಸುಂದರ ಬದುಕನ್ನುಕಟ್ಟುವ ನೆಲೆಯನ್ನು ತಲುಪಬೇಕು ಎಂಬುದನ್ನು ಸಾಹಿತ್ಯಕ ಮತ್ತು ಸಾಮಾಜಿಕ ಅಂಶಗಳಿಂದ ಮನಗಾಣಬಹುದಾಗಿದೆ.

ಮೇಲು-ಕೀಳು, ಬಲಶಾಲಿ-ಬಲಹೀನ ಇಂಥ ವಿಪರೀತ ಭಾವನೆಗಳು ಸಹ ಸ್ತ್ರೀ ಬದುಕನ್ನು ದಾರುಣಗೊಳಿಸಿವೆ. ಈ ಶ್ರೇಣೀಕೃತ ವ್ಯವಸ್ಥೆಯು ಮಹಿಳೆಯರನ್ನು ಸಾಮಾಜಿಕವಾಗಿ ಹಿಂದೆ ಸರಿಸುತ್ತದೆ. ಏನೇ ಆದರೂ ಇಂಥ ಭಾವನೆಗಳಿಂದ ಪುರುಷ ಮುಕ್ತನಾಗಬೇಕಾದ ಅವಶ್ಯಕತೆ ಪರಂಪರಾಗತವಾಗಿ ರೂಪಿಸಿಕೊಂಡು ಬಂದಿರುವ ಹಾಗೂ ಚಾಲ್ತಿಯಲ್ಲಿರುವ ಸಾಮಾಜಿಕ ಮೌಲ್ಯಗಳು ಮುಖ್ಯವಾಗಿ ಪುರುಷ ಪ್ರಧಾನ ಸಮಾಜ ಸೃಷ್ಟಿಸಿದಂಥವು. ಈ ಮೌಲ್ಯಗಳು ಸ್ತ್ರೀಯರ ದೃಷ್ಟಿಯಿಂದ ಎಷ್ಟು ಹಿತಕರ? ಎಷ್ಟು ಸತ್ಯ? ಅವು ಬೇಕೆ? ಬೇಡವೆ? ಎಂಬುದನ್ನು ಗುರುತಿಸಿಕೊಳ್ಳುವುದು ನಮ್ಮ ಮುಂದಿರುವ ಬಹುದೊಡ್ಡ ಸವಾಲು. ಸರ್ವ ಸ್ತ್ರೀಯರಿಗೂ ಎದುರಾಗುತ್ತಿರುವ, ಸಂವೇದನಾಶೀಲರನ್ನು ಸದಾ ತೀವ್ರವಾಗಿ ಕಾಡುವ ಈ ಸಮಸ್ಯೆ ನಿಜವಾಗಿಯೂ ಮೂಲ ಪ್ರಶ್ನೆಯಾಗಿದೆ. ಏಕೆಂದರೆ ಪುರುಷ ನಿರ್ಮಿತ ಮೌಲ್ಯಗಳು ನಮ್ಮ ಸಮಾಜದಲ್ಲಿ ಆಳವಾಗಿ ಬೇರುಬಿಟ್ಟಿರುವುದರಿಂದ ಅದನ್ನು ಪ್ರಶ್ನಿಸುವುದು ಅಸಾಧ್ಯವೆನಿಸುತ್ತದೆ.

ಪ್ರಜಾಪ್ರಭುತ್ವದ ಯುಗದಲ್ಲಿ ಬದುಕುತ್ತಿದ್ದು ನಾಗರಿಕರೆನ್ನಿಸಿಕೊಂಡಿರುವವರು ಕೂಡಾ, ಸ್ತ್ರೀ ಅನಾಥೆ, ಅಬಲೆ, ಎಂದೆಲ್ಲಾ ಹೇಳುತ್ತಿದ್ದಾರೆ. ಇದ್ದಕ್ಕೆ ಮುಖ್ಯ ಕಾರಣ ನಿರಂತರವಾಗಿ ಹರಿದು ಬಂದ ಸಂಪ್ರದಾಯನಿಷ್ಠ ಮೌಲ್ಯಗಳೇ ಆಗಿವೆ. ಸಮಾಜ ಈ ಮಾರಕ ಮೌಲ್ಯಗಳ ಹಿಡಿತದಿಂದ ಮುಕ್ತವಾಗಬೇಕು.

ಮನೆ-ಮಕ್ಕಳು-ಸಂಸಾರದ ಬಗೆಗಿರುವ ಚಿಂತೆ ಗಂಡಸಿಗಿಂತ ಹೆಂಗಸಿಗೇ ಹೆಚ್ಚು. ಅವಳಲ್ಲಿ ಇರುವ ಈ ತುಡಿತವೇ ಅವಳನ್ನು ಆ ಸ್ಥಾನದಲ್ಲಿರಿಸಿದೆ. ಮಹಿಳೆಯನ್ನು ಯಾರೂ ಪ್ರತಿಬಂಧಿಸಿಲ್ಲ; ಅವಳೇ ಬಂಧಿತಳಾಗಿದ್ದಾಳೆ. ಎನ್ನುವ ವಿವರಣೆಯು ಸಮಾಜದಲ್ಲಿ ಮೂಡಿದೆ. ಇಂದಿನ ಎಷ್ಟೋ ಶಾಲೆಗಳಲ್ಲಿ ಗೃಹಿಣಿಯಾಗಿರುವವರ ಮಕ್ಕಳಿಗೆ ಮಾತ್ರ ಪ್ರವೇಶ ಎಂಬ ನಿಯಮವಿದೆ. ಇದರ ಸಾಧಕ-ಭಾದಕಗಳು ಬೇರೆ ಬೇರೆ ವಿಚಾರಗಳಿಗೆ ಕಾರಣವಾಗುತ್ತವೆ.

ಒಟ್ಟಿನಲ್ಲಿ ಸಾಮಾಜಿಕವಾಗಿ ಬೇರೂರಿದ ಮೌಲ್ಯ ಬದಲಾವಣೆಯ ಬಗ್ಗೆ ಮಹಿಳೆಯರು ಕ್ರಿಯಾಶೀಲರಾಗಬೇಕು. ಮಹಿಳೆಯರ ಬಗೆಗಿರುವ ಸಾಮಾಜಿಕ ಮೌಲ್ಯಗಳು ಸಮಗ್ರವಾಗಿ ಬದಲಾಗಲು ನಮ್ಮ ಬದುಕಿನ ಎಲ್ಲ ರಂಗಗಳನ್ನು ವ್ಯಾಪ್ತಿಗೊಳಪಡಿಸಿಕೊಳ್ಳುವಂಥ ಬೃಹತ್ ಪ್ರಮಾಣದ ಯೋಜನೆಗಳು ರೂಪುಗೊಳ್ಳಬೇಕು ಜೊತೆಗೆ ಸಾಹಿತ್ಯ ಕೂಡಾ ಈ ದಿಕ್ಕಿನಲ್ಲಿ ಲಿಂಗಭೇದ ಸಮಸ್ಯೆಯ ನಿರ್ಮೂಲನಕ್ಕೆ ಪೂರಕವಾಗುವಂತೆ ರಚಿತವಾಗಬೇಕು ಎಂಬುದೇ ನನ್ನ ಅಧ್ಯಯನದ ಹಿಂದಿನ ನಿಲುವುಗಳಾಗಿವೆ.

ಅಧ್ಯಾಯ-ಎರಡು

ಅ. ಲಿಂಗಭೇದ ಎಂದರೇನು?

ಭಾರತೀಯ ಸಮಾಜವೆಂದರೆ ಪಿತೃಪ್ರಧಾನ ವ್ಯವಸ್ಥೆಯೇ ಆಗಿದೆ. ಸಮಾಜದೊಳಗಿನ ಅಧಿಕಾರಗಳೆಲ್ಲವೂ ಪುರುಷನ ಹಿಡಿತದಲ್ಲಿಯೇ ಇವೆ. ಪಿತೃಪ್ರಧಾನ ಯಜಮಾನ ಪದ್ಧತಿಯ ಮುಖ್ಯಸಂಸ್ಥೆ ಕುಟುಂಬ. ಮಹಿಳೆಯರಿಗಿರುವ ಸ್ಥಾನದ ಸ್ಪಷ್ಟ ಚಿತ್ರಣ ಸಿಗುವುದು ಇಲ್ಲಿಯೇ. ನಮ್ಮಲ್ಲಿ ಹೆಣ್ಣಿನ ಅಸಮಾನತೆ ಹಾಗೂ ಅಧೀನತೆ ಇಡೀ ಸಮಾಜ ರಚನೆಯ ಕಾರ್ಯ ರೀತಿ ಮತ್ತು ಸಾಧನವೇ ಆಗಿ ಹೋಗಿದೆ.

ಇತಿಹಾಸದುದ್ದಕ್ಕೂ ವಿವಿಧ ಸಮಾಜ ವ್ಯವಸ್ಥೆಗಳಲ್ಲಿ ಮಹಿಳೆಯ ಸ್ಥಿತಿಗತಿ ಅತ್ಯಂತ ಶೋಚನೀಯವಾಗಿದೆ. ಆಕೆಗೆ ಸಿಕ್ಕಿದ್ದು ಮನೆಯೊಳಗಿನ ಪ್ರಪಂಚದ ಉಸ್ತುವಾರಿ, ಬೆಟ್ಟದಷ್ಟು ಕೆಲಸದ ಹೊರೆಯ ಭಾರ! ಅವಳ ಕೆಲಸ ಎಂದಿಗೂ ಗಂಡು ಮಾಡುವ ಕೆಲಸಕ್ಕೆ ಸಮಾನವಾಗುವುದಿಲ್ಲವೆಂಬ ಪೂರ್ವಗ್ರಹ ಪೀಡಿತ ಅಭಿಪ್ರಾಯ ಗಂಡಸಿನ ಮನಸ್ಸಿನಲ್ಲಿ ಬೇರೂರಿದೆ. ಮಾನವನ ಮೂಲಭೂತ ಹಕ್ಕುಗಳನ್ನೇ ಉಲ್ಲಂಘನೆ ಮಾಡಿದ ಸಮಾಜ ಗತಕಾಲದುದ್ದಕ್ಕೂ ಆಕೆಯನ್ನು ನರಳಿಸಿತು.

ಜೀವನದ ವಿವಿಧ ಹಂತಗಳಲ್ಲಿ, ಆಸ್ತಿ-ಪಾಸ್ತಿಯ ವಿಚಾರಗಳಲ್ಲಿ ನಿರ್ಧಾರ ತೆಗೆದುಕೊಳ್ಳಬೇಕಾದ ಸಂದರ್ಭಗಳಲ್ಲಿಯೂ ಮಹಿಳೆ ತಲೆಹಾಕುವಂತಿಲ್ಲ. ಎಲ್ಲೆಡೆಗೂ ಪುರುಷರದ್ದೇ ಆಧಿಪತ್ಯ. ಹೀಗೆ ಮನೆಯೊಳಗೂ, ಹೊರಗೂ ಯಾವ ಲೆಕ್ಕಕ್ಕೂ ಇಲ್ಲದ ಮಹಿಳೆಯರು ವರ್ಗ ಹಾಗೂ ಲಿಂಗಭೇದದಿಂದಾಗಿ ತತ್ತರಿಸಿಹೋಗಿದ್ದಾರೆ.

ಇತ್ತೀಚೆಗೆ ಲಿಂಗಭೇದವನ್ನು ಕುರಿತು ವ್ಯಾಪಕವಾದ ಚರ್ಚೆ ನಡೆಯುತ್ತಿದೆ. ಹಾಗಾದರೆ ಈ ಲಿಂಗಭೇದವೆಂದರೇನು? ಅದರ ಸ್ವರೂಪವೆಂಥದು? ಎಂಬುದನ್ನು ಮೊದಲು ಅರಿತುಕೊಳ್ಳುವುದು ಉಚಿತವೆನಿಸುತ್ತದೆ.

''ಲಿಂಗ-ಇದೊಂದು ಬಹುಶ್ರುತ ಶಬ್ದ. ನಿತ್ಯ ಸಾಧಾರಣ ಬಳಕೆಯಲ್ಲಿ ಇದು 'ಚಿಹ್ನೆ' ಎಂಬರ್ಥದಲ್ಲಿ ಪ್ರಯುಕ್ತವಾಗಿದೆ. ಪುಲ್ಲಿಂಗ, ಸ್ತ್ರೀಲಿಂಗ, ನಪುಂಸಕಲಿಂಗ ಎಂಬ ಪದಗಳು ಪ್ರಸಿದ್ಧವಿವೆ. ಪುರುಷ ಮತ್ತು ಸ್ತ್ರೀ ಸಾಮಾನ್ಯ ವಾಚಕವಾಗಿ, ಪ್ರಸಿದ್ಧ ನಾಟಕಕಾರ ಭವಭೂತಿಯು ''ಪೂಜಾಃ ಗುಣಸ್ಥಾನಂ ನಚ ಲಿಂಗಂ ನಚ ವಯಃ'' ಎಂದು ಲಿಂಗ ಪದದ ಪ್ರಯೋಗ ಮಾಡಿದ್ದಾನೆ. ಪುರುಷ ಜನಾಂಗ ಸೂಚಕವಾಗಿ ಹೆಚ್ಚು ರೂಢಿಯಲ್ಲಿದೆಯಲ್ಲದೇ ಸ್ತ್ರೀ ಜನಾಂಗ ಸೂಚಕವಾಗಿಯೂ ಇದು ಪ್ರಯೋಗದಲ್ಲಿದೆ.''೧ ಲಿಂಗಭೇದ ಅಂದಕೂಡಲೇ, ಗಂಡು-ಹೆಣ್ಣುಗಳ ನಡುವಣ ಸಂಬಂಧಗಳು ಸಾಮಾಜಿಕ ವ್ಯವಸ್ಥೆಯ ಮೂಲಭೂತ ಅಂಶಗಳಾಗಿರುತ್ತವೆ ಎಂಬುದು ಸ್ಪಷ್ಟವಾಗುತ್ತದೆ. ಗಂಡು ಮತ್ತು ಹೆಣ್ಣಿನ ಅನನ್ಯತೆ ಬಹುತೇಕ ಸಾಂಸ್ಕೃತಿಕವಾಗಿ ನಿರ್ಮಾಣವಾಗುವಂಥದ್ದು. ವ್ಯಕ್ತಿಗಳೇ, ಸಮೂಹಗಳೇ ಸಂಪೂರ್ಣವಾಗಿ ತಾವಾಗಿಯೇ ಈ ಅನನ್ಯತೆಯನ್ನು ಸೃಷ್ಟಿಮಾಡಲಾರರು. ಲಿಂಗಭೇದ ಮತ್ತು ಅದನ್ನು ಆಧರಿಸಿದ ವ್ಯತ್ಯಾಸಗಳು ಶ್ರೇಣೀಕೃತ ವ್ಯವಸ್ಥೆಯನ್ನು ನಿರ್ಮಾಣ ಮಾಡುತ್ತವೆ ಮತ್ತು ಅಂತಹ ವ್ಯವಸ್ಥೆಯಿಂದ ನಿರ್ಮಿಸಲ್ಪಡುತ್ತವೆ. ಈ ಲಿಂಗಾಧರಿತ ಸಂಬಂಧಗಳು ಸಾಮಾನ್ಯವಾಗಿ ಎಲ್ಲ ಬಗೆಯ ಮಾನವೀಯ ಅನುಭವದ ಅವಿಭಾಜ್ಯ ಅಂಗಗಳಾಗಿರುತ್ತವೆ. ವ್ಯಕ್ತಿಯ ಅನುಭವದ ನೆಲೆಯಲ್ಲಿ ಅವು ಒಂದು ಸಾಮಾಜಿಕ ಸ್ಥಿತಿಯಾಗಿ ರೂಪುಗೊಂಡು ಈಸಂಬಂಧಗಳು ವರ್ಗ, ಜನಾಂಗ, ಜಾತಿ ಮುಂತಾದ ಸಂಬಂಧಗಳೊಳಗಿನ ಪರಸ್ಪರ ಕ್ರಿಯೆಗಳ ರೂಪು ತಳೆಯುತ್ತವೆ. ಆದ್ದರಿಂದ ಲಿಂಗಾಧರಿತ ಸಂಬಂಧಗಳಿಗೆ ಸ್ಥಿರವಾದ ಸಾರಭೂತವಾದ ರೂಪ ಎನ್ನುವುದು ಉಚಿತವಾಗಿ ಇಲ್ಲ. ಅವು ಕಾಲಗತಿಗೆ ಹೊಂದಿಕೊಂಡಂತೆ ಬದಲಾಗುತ್ತಿರುತ್ತವೆ.

ಈ ಲಿಂಗಾಧರಿತ ಸಂಬಂಧಗಳ ಅಧ್ಯಯನಕ್ಕೆ ಕುರಿತಂತೆ ಪ್ರಪ್ರಥಮ ಸ್ತ್ರೀವಾದಿ ಚಿಂತಕರು ಕೆಲವು ಮೂಲಭೂತವಾದ ಪ್ರಶ್ನೆಗಳನ್ನು ಎತ್ತಿರುವುದನ್ನು ಬಿ.ಎನ್.ಸುಮಿತ್ರಾಬಾಯಿಯವರು ತಮ್ಮ ಕೃತಿ 'ಸ್ತ್ರೀವಾದಿ ಪ್ರವೇಶಿಕೆ'ಯಲ್ಲಿ ಪ್ರಸ್ತಾಪಿಸುತ್ತಾರೆ. ಅವರು ಕೇಳುವ ಮುಖ್ಯ ಪ್ರಶ್ನೆಗಳೆಂದರೆ, ಲಿಂಗವೆಂದರೇನು? ದೈಹಿಕ ಲಿಂಗ ಜಾತಿಗೂ,

ಲಿಂಗ ಪ್ರಭೇದಕ್ಕೂ ಇರುವ ಸ್ವರೂಪವೇನು? ಲಿಂಗಾಧರಿತ ಸಂಬಂಧಗಳು ವ್ಯಕ್ತಿಯ ಅನುಭವವಾಗಿ ಹೇಗೆ ರೂಪುಗೊಳ್ಳುತ್ತವೆ? ಹೇಗೆ ಘೋಷಿತವಾಗುತ್ತವೆ ? ವರ್ಗ ಅಥವಾ ಜನಾಂಗ ಮುಂತಾದವುಗಳ ಜೊತೆ ಇವುಗಳ ಸಂಬಂಧ ಯಾವ ಬಗೆಯದು ? ಈ ಸಂಬಂಧಗಳಿಗೆ ಚರಿತ್ರೆಯೊಂದು ಇದೆಯೇ? ಲಿಂಗ ಪ್ರಭೇದ ಲೈಂಗಿಕತೆ ಮತ್ತು ವ್ಯಕ್ತಿಯ ಸ್ವಂತಿಕೆಯ ಅರಿವುಗಳಿಗೆ ಇರುವ ಸಂಬಂಧವೇನು? ಭಿನ್ನಲಿಂಗರತಿ, ಸಲಿಂಗರತಿ ಮತ್ತು ಲಿಂಗಾಧರಿತ ಸಂಬಂಧ ಯಾವ ಬಗೆಯದು? ಬೇರೆ ಬೇರೆ ಪುರುಷ ಪ್ರಧಾನ ಸಮಾಜಗಳಲ್ಲಿ ಲಿಂಗಾಧರಿತ ಸಂಬಂಧಗಳ ಸ್ವರೂಪವೇನು? ತಾತ್ವಿಕ ಚಿಂತನಾ ವಿಧಾನಗಳಲ್ಲಿ ಹಾಗೂ ಸಾಮಾಜಿಕ ಸಂಬಂಧಗಳಲ್ಲಿ ಸ್ತ್ರೀತ್ವ ಅಥವಾ ಪುರುಷತ್ವ ಪ್ರತ್ಯೇಕವಾಗಿದೆಯೇ? ಇಂತಹ ಸ್ಪಷ್ಟ ವ್ಯತ್ಯಾಸಗಳಿದ್ದರೆ ಅವು ಹುಟ್ಟಿನಿಂದ ಅಂತರ್ಗತವಾದದ್ದೋ ಅಥವಾ ಸಾಮಾಜಿಕವಾಗಿ ರೂಪುಗೊಂಡಿವೆಯೋ? ಲಿಂಗಾಧರಿತ ವ್ಯತ್ಯಾಸವು ಸಾಮಾಜಿಕವಾಗಿ ಉಪಯುಕ್ತವಾಗಿದೆಯೇ? ಎಂಬಿತ್ಯಾದಿ ಪ್ರಶ್ನೆಗಳು ಸ್ತ್ರೀವಾದಿಗಳನ್ನು ನಿರಂತರವಾಗಿ ಕಾಡುತ್ತಲೇ ಬಂದಿವೆ. Sex ಅಥವಾ Gender ಎಂಬ ಈ ಎರಡು ಪದಗಳು ಪೂರ್ವದಿಂದಲೂ ಗೊಂದಲಕ್ಕೆ ಸಿಲುಕಿಸುತ್ತಲೇ ಬಂದಿವೆ. ಏಕೆಂದರೆ ಇದರಲ್ಲಿರುವ ಗೂಢಾರ್ಥವೇ ಇದಕ್ಕೆ ಕಾರಣವಾಗಿದೆ. ಬಹಳಷ್ಟು ಜನ ಸ್ತ್ರೀವಾದಿಗಳು ಮನುಷ್ಯ ಜನಾಂಗವನ್ನು ಜೈವಿಕ ಲಕ್ಷಣಗಳ ಆಧಾರದ ಮೇಲೆ ಲಿಂಗತಾರತಮ್ಯದ ನೆಲೆಯಿಂದ ವಿವರಿಸುತ್ತಾರೆ. ಜೈವಿಕ ಗುಣಲಕ್ಷಣಗಳ ಮೇಲೆ ಲಿಂಗವಿಧಾನ ಕೈಗೊಂಡರೂ ಅಲ್ಲಿ ಪುರುಷನ ನಿರಂಕುಶತೆಯು ಇರುವುದನ್ನು ಗುರುತಿಸುತ್ತಾರೆ.

ಲಿಂಗಭೇದ ಸ್ವರೂಪದ ಬಗ್ಗೆ ಕೇಂಬ್ರಿಡ್ಜ್ ವಿಶ್ವಕೋಶದಲ್ಲಿ "Gender the sooial expression of the basio phisiologioal differenoes between men and women. Sooial behaviar whioh is deemed to be appropriate to 'masouline' or 'feminine' roles and whioh is learned through primary seoondary, sooialization, thus while sex is biologioal, gender isooially determined," 2 ಈ ಪ್ರಕಾರ 'Sex' ಜೈವಿಕ, 'Gender' ಸಾಮಾಜಿಕವಾಗಿ ಕಟ್ಟಲ್ಪಟ್ಟಿದೆ ಎಂದು ಹೇಳಲಾಗಿದೆ.

ಆಧುನಿಕ ಇಂಡೋ ಯೂರೋಪಿಯನ ಭಾಷೆಗಳಾದ ಫ್ರೆಂಚ, ಸ್ಪ್ಯಾನಿಷ ಮತ್ತು ಇಟ್ಯಾಲಿಯನ ಭಾಷೆಗಳಲ್ಲಿ 'ಲಿಂಗ' ವನ್ನು ಎರಡು ತೆರನಾಗಿ ವಿಂಗಡಿಸಲಾಗಿದೆ. ಒಂದು 'ಪುಲ್ಲಿಂಗ' ಎರಡು 'ಸ್ತ್ರೀಲಿಂಗ' ಆದರೆ ರಷಿಯನ ಮತ್ತು ಜರ್ಮನನಲ್ಲಿ ಮೂರು ಬಗೆಯ ಲಿಂಗಗಳಿದ್ದು, ಮೂರನೆಯ ಲಿಂಗವನ್ನು 'ನಪುಂಸಕಲಿಂಗ' ವೆಂದು ಗುರುತಿಸಲಾಗಿದೆ.

'ಲಿಂಗ' ಶಬ್ದವನ್ನು ವಿವಿಧ ಅರ್ಥಗಳಲ್ಲಿ ಅರ್ಥೈಸಲಾಗುತ್ತದೆ. Sex,gender, maleness, femaleness and sexuality in contexualized way's not alway's in agrression with one another approaches. Such divergencies reflect the fluxion anthropology and other disciplains as scholar's and activists attempts to understand and sometimes change these complex words and their meanings.3

ಸ್ತ್ರೀತ್ವ ಮತ್ತು ಪುರುಷತ್ವಗಳನ್ನು ಕುರಿತ ಸಿದ್ಧಾಂತವನ್ನು ಸಮಾಜ ರೂಪಿಸಿಕೊಳ್ಳುತ್ತದೆ. ಈ ಸಿದ್ಧಾಂತ ಮತ್ತು ಸಮಾಜದ ಕ್ರಮವನ್ನು ಸ್ಥಿರಪಡಿಸುವುದರಲ್ಲಿ ಸಹಾಯಕವಾಗುತ್ತದೆ. ಸ್ತ್ರೀಯರ ಸ್ವಭಾವವನ್ನು ಕುರಿತು ನಮ್ಮ ಸಮಾಜದಲ್ಲಿ ಎಂತಹ ಅಭಿಪ್ರಾಯ ಇದೆ ಎಂಬುದನ್ನು ನೋಡಿದರೆ ಅರ್ಥವಾಗುತ್ತದೆ. ಈ gender ಎಂಬುದು ಅಷ್ಟು ಆಳವಾಗಿ ಹೂತುಕೊಂಡು ಹೋಗಿದೆ. ಇದು ಸ್ತ್ರೀಯರ ಜೀವನವನ್ನು ಅದರ ಮೂಲಕ ಸಮಾಜವನ್ನು ಇದು ಹೇಗೆ ಆದೇಶಿಸಿ ನಡೆಸುತ್ತದೆ ಎಂಬುದನ್ನು ಅರ್ಥಮಾಡಿಕೊಳ್ಳುವುದಕ್ಕೆ ಸಹಾಯಕವಾಗುತ್ತದೆ.

Where sacred values are associated with a dichotomy of gender. The usual tendency is forthe masculine to be associated with stability and essentiality, and the feminine with change and materiality. The masculine may be identified with being inner form, thought or structure. While the feminine is identified with beings outer forms word or substance. The masculine may be associated with the potential in active form

being; the feminine, with kinetio aotive being. The masouline is one and or integreated , the feminine is plural and or diffuse" 4 ಎಂಬ ಈ ಉದ್ಧೃತ ವಾಕ್ಯಗಳು ಲಿಂಗಭೇದವೆಂದರೇನು? ಮತ್ತು ಅದರ ಸ್ವರೂಪ ಹೇಗಿದೆ ಎಂಬುದನ್ನು ವಿಶದೀಕರಿಸುತ್ತವೆ.

ಆ. ಭಾರತೀಯರದೃಷ್ಟಿಯಲ್ಲಿ ಲಿಂಗಭೇದ :

ವೇದಪೂರ್ವ ಸಂಸ್ಕೃತಿಯಲ್ಲಿ ಹೆಣ್ಣಿಗೆ ವಿಶೇಷ ಮನ್ನಣೆ ನೀಡಲಾಗುತ್ತಿತ್ತೆಂದು ಇತಿಹಾಸದಿಂದ ತಿಳಿದುಬರುತ್ತದೆ. ಆ ಕಾಲದಲ್ಲಿ ಶಕ್ತಿ ಪೂಜೆಗೆ ಅವಕಾಶವಿದ್ದುದು ಅನೇಕ ಅವಶೇಷಗಳಿಂದ ಅರಿತುಕೊಳ್ಳಲಾಗುತ್ತದೆ. ಅಂದು ಸೃಷ್ಟಿಕಾರ್ಯವನ್ನು ಅದ್ಭುತ ದೈವಿಕಾರ್ಯವೆಂದು ಪರಿಭಾವಿಸಲಾಗಿತ್ತು. ದೈಹಿಕವಾಗಿ ಅಂಥ ಸೃಜನಶಕ್ತಿಯನ್ನು ಹೊಂದಿದ್ದ ಹೆಣ್ಣು ಮಹತ್ವದ ಗೌರವಪೂರ್ಣ ಸ್ಥಾನವನ್ನು ಪಡೆದಿದ್ದಳು. ಅವಳ ಮಾತೃತ್ವ ಶ್ರೇಷ್ಠವೆಂದು ಒಪ್ಪಿಕೊಳ್ಳಲಾಗಿತ್ತು.

''ವೇದಗಳ ಕಾಲದಲ್ಲಿ ಸ್ತ್ರೀಯರಿಗೆ ಸಮಾನತೆ ಇತ್ತು. ಪ್ರತಿಯೊಂದು ಕಾರ್ಯವನ್ನು ಜೊತೆ-ಜೊತೆಯಾಗಿ ನಡೆಸುತ್ತಿದ್ದರು. ತನ್ನ ಪತ್ನಿಯನ್ನು ಜೊತೆಯಲ್ಲಿರಿಸಿಕೊಂಡೇ ಯಜ್ಞಯಾಗಾದಿಗಳಲ್ಲಿ ಗಂಡು ಭಾಗವಹಿಸಬೇಕಾಗಿತ್ತು. ಪತ್ನಿಯನ್ನು ಜೊತೆಯಲ್ಲಿರಿಸಿಕೊಂಡು ಯಜ್ಞಯಾಗಾದಿ ಕಾರ್ಯಗಳನ್ನು ನೆರವೇರಿಸಿದರೆ ದೇವತೆಗಳು ಪ್ರಸನ್ನರಾಗುವರೆಂದು ಋಗ್ವೇದದಲ್ಲಿ ಹೇಳಿದೆ''. ೫ ಹೀಗೆ ಒಂದು ಕಾಲದಲ್ಲಿ ಸ್ತ್ರೀ ಪುರುಷನ ಸಮಾನಳಾಗಿದ್ದು, ಕಾಲಕ್ರಮೇಣ ಅವರು ಅಸ್ತಿತ್ವವನ್ನು ಕಳೆದುಕೊಂಡದ್ದನ್ನು ಕಾಣಬಹುದು. ದ್ರಾವಿಡ ಸಂಸ್ಕೃತಿ ಮಾತೃಪ್ರಧಾನವಾದುದು. ಆಸ್ತಿಯ ಹಕ್ಕಿಗೆ ತಾಯಿಯ ಪರಂಪರೆಯನ್ನೇ ಅನುಸರಿಸುತ್ತಿದ್ದುದು ಈ ಸಂಸ್ಕೃತಿಯ ವೈಶಿಷ್ಟ್ಯ. ಒಂದು ಕಾಲದಲ್ಲಿ ವ್ಯಕ್ತಿಯಾಗಿ ಶಕ್ತಿಯಾಗಿ ಕೆಲಸ ಮಾಡಿದ ಹೆಣ್ಣು ಕಾಲಕ್ರಮೇಣ ನಿಕೃಷ್ಟ ಸ್ಥಾನಕ್ಕೆ ತಳ್ಳಲ್ಪಟ್ಟಳು. ವೇದಗಳ ಕಾಲದಲ್ಲಿ ಪುರುಷರಷ್ಟೇ ಸ್ವಾತಂತ್ರ್ಯವನ್ನು ಅನುಭವಿಸಿದ ಜ್ಞಾನಿಗಳೂ, ದಾರ್ಶನಿಕರೂ ಆದ ಲೋಪಾಮುದ್ರ, ಗಾರ್ಗಿ, ಮೈತ್ರೇಯಿ, ಅನುಸೂಯಾ ಇದ್ದಂತಹ ಸ್ತ್ರೀಯರ ಅವನತಿ ಏಕಾಯಿತು? ಹೇಗಾಯಿತು? ಎನ್ನುವ ಪ್ರಶ್ನೆಯು

ಸಹಜವಾಗಿ ಮೂಡುತ್ತದೆ.

ಆರ್ಯ ದ್ರಾವಿಡರ ಸಂಬಂಧ ಪರಸ್ಪರ ವಿವಾಹಗಳ ಮೂಲಕ ದೃಢವಾಗುತ್ತ ಬಂದಂತೆ, ಸ್ತ್ರೀಯರ ಸ್ಥಾನಮಾನವು ಕ್ರಮೇಣವಾಗಿ ಕೆಳಕ್ಕಿಳಿಯುತ್ತ ಬಂದಿತು. ಅಲ್ಲಿಂದ ಸ್ತ್ರೀ ವಿದ್ಯಾಭ್ಯಾಸಕ್ಕೆ ಅನರ್ಹಳು ಎನ್ನಿಸಿಕೊಂಡಳು. ವೇದಾಭ್ಯಾಸ ನಿಂತ ಕಾರಣದಿಂದಾಗಿ ಆಕೆಗೆ ಬಾಲ್ಯದಲ್ಲಿಯೇ ವಿವಾಹ ಮಾಡುವ ಪದ್ಧತಿಯು ರೂಢಿಯಲ್ಲಿ ಬಂದಿತು. ಗಂಡಸತ್ತ ಮೇಲೆ ಮರುಮದುವೆಯಾಗುವ ಅವಕಾಶವನ್ನು ಆಕೆಯಿಂದ ತಪ್ಪಿಸಲಾಯಿತು. ಹೀಗೆ ವೇದಗಳು ಕಾಲದಲ್ಲಿ ಪ್ರಪಂಚದ ಯಾವುದೇ ಸಮಾಜವು ತನ್ನ ಸ್ತ್ರೀಯರಿಗೆ ನೀಡದಿದ್ದ ಸ್ವಾತಂತ್ರ್ಯ ಸಮಾನತೆಯನ್ನು ಭಾರತೀಯ ಸ್ತ್ರೀಯು ಪಡೆದುಕೊಂಡಿದ್ದಳು.

ಸಮಾಜದಲ್ಲಿ ಸ್ವಾತಂತ್ರ್ಯ, ಉಚ್ಚಸ್ಥಾನ-ಮಾನಗಳನ್ನು ಅನುಭವಿಸಿದ ಸ್ತ್ರೀ ಕ್ರಿ.ಶ. ೯ನೆಯ ಶತಮಾನದ ಹೊತ್ತಿಗೆ ತನ್ನೆಲ್ಲ ಸ್ವಾತಂತ್ರ್ಯ ಸ್ಥಾನ-ಮಾನಗಳನ್ನು ಕಳೆದುಕೊಂಡಳು. ನಂತರ ತನ್ನ ಸ್ಥಿತಿಯ ಬಗೆಗೆ ಪರವೆಯೇ ಇಲ್ಲದೇ, ಕೂಪಮಂಡೂಕದಂತೆ ತಾನಿದ್ದ ಸ್ಥಿತಿಯಲ್ಲಿಯೇ ತೃಪ್ತಿಯನ್ನು ಹೊಂದಿದ್ದಳು. ವೇದಕಾಲದಲ್ಲಿದ್ದ ಸ್ತ್ರೀಸ್ವಾತಂತ್ರ್ಯ ಸ್ಮೃತಿಕಾಲಕ್ಕೆ ಬರುವುದರೊಳಗಾಗಿ ಮುದುಕಾಗಿ ಹೋಯಿತು. ಯಾವುದೇ ಒಂದು ಹಂತದಲ್ಲಿ ಸ್ತ್ರೀಯು ಸ್ಥಾನಾಂತರಗೊಂಡು ಪುರುಷ ತನ್ನ ಬರುವದಾರಿಕೆಯನ್ನು ಸ್ಥಾಪಿಸಿದನು. ಪುರುಷನಿಗೆ ದೊರೆತ ಪ್ರಾಧಾನ್ಯ, ಸ್ತ್ರೀಯನ್ನು ಅಪ್ರಾಧಾನ್ಯಳನ್ನಾಗಿ ಮಾಡಿತು. 'ಹೆಣ್ಣು ಪರರೊಡವೆ; ಗಂಡು ಮಾತಾ-ಪಿತೃಗಳ ಪೋಷಕ, ಪಿಂಡದಾತ, ಅವನು ಧರ್ಮವನ್ನು ಅನೂಚಾನವಾಗಿ ಮುನ್ನಡೆಸಿಕೊಂಡು ಬರುವವನು. ಈ ಎಲ್ಲ ಭಾವನೆಗಳು ಹೆಣ್ಣನ್ನು ಪರಂಪರಾಗತವಾಗಿ ಬದಿಗೊತ್ತಲು ಸಹಾಯಮಾಡಿದವು.

''ಪಿತಾರಕ್ಷತಿ ಕೌಮಾರೇ ಭರ್ತಾರಕ್ಷತಿ ಯೌವ್ವನೇ।
ರಕ್ಷಂತಿ ಸ್ಥವಿರೇ ಪುತ್ರಾ ನ ಸ್ತ್ರೀ ಸ್ವಾತಂತ್ರ್ಯಮರ್ಹತಿ'' ೬॥

''ಬಾಲ್ಯದಲ್ಲಿ ತಂದೆಯ ಆಶ್ರಯದಲ್ಲಿ, ಯೌವ್ವನದಲ್ಲಿ ಗಂಡನ ಆಶ್ರಯದಲ್ಲಿ, ವೃದ್ಧಾಪ್ಯದಲ್ಲಿ ಮಕ್ಕಳ ಆಶ್ರಯದಲ್ಲಿ ಇರುವ ಸ್ತ್ರೀ ಸ್ವಾತಂತ್ರ್ಯಕ್ಕೆ ಅನರ್ಹಳು'' ಎಂಬ ಸ್ಮೃತಿಕಾರನ ಮಾತು ಸ್ತ್ರೀಯನ್ನು ಗರ್ಭದಿಂದ ಗೋರಿಯವರೆಗೂ

ಪಾರತಂತ್ರ್ಯದಲ್ಲಿಯೇ ಬದುಕಲು ಸೂಚಿಸುವುದಾಗಿದೆ. ಮನುಸ್ಮೃತಿಯ ಈ ಶ್ಲೋಕ ಮನುವಿನದಲ್ಲ; ಅಂದಿನ ಕಾಲದ ಸಮಾಜಕ ಆಚಾರದ ಉದ್ಧರಣೆಯಾಗಿದೆ.

ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಆತನ ದೃಷ್ಟಿಯೇ 'ಸಾರ್ವತ್ರಿಕ' ಎನಿಸಿದೆ. ಇಂಥ ವ್ಯವಸ್ಥೆಯ ಉತ್ಪಾದನೆಗಳಾದ ಎಲ್ಲ ಜ್ಞಾನ ಕ್ಷೇತ್ರಗಳಲ್ಲೂ ನಾಮಕ್ರಿಯಾ ರೂಪಾವಳಿಗಳು ಪ್ರಧಾನ ದೃಷ್ಟಿಯ ಹಿತಾಸಕ್ತಿಗಳಿಗೆ ಹೊಂದಿಕೊಂಡಂತೆ ರಚಿತವಾಗಿವೆ. ''ಸ್ತ್ರೀಯೆಂದರೆ ಭಾರತೀಯ ಸಂಸ್ಕೃತಿಯ ಪ್ರತಿಭೆಯ ಪರಿಕಲ್ಪನೆಯಂತೆ 'ಹೆರುವವಳು''ಸ್ತ್ರೈ' 'ಸ್ತ್ಯ' ಎಂಬ ಧಾತುಗಳ ಅರ್ಥದಂತೆ 'ಹೆರುವ ಪ್ರಾಣಿ'. ಆದ್ದರಿಂದ ಹೆಣ್ಣು ಪ್ರಾಣಿಗಳಿಗೂ 'ಸ್ತ್ರೀ' ಎಂದು ಹೆಸರು. ಗರ್ಭದ ಅಸ್ತಿತ್ವದಿಂದಲೇ ವ್ಯಕ್ತಿತ್ವವನ್ನು ಪಡೆದುಕೊಂಡವಳು. 'ಪುರುಷ' ಶಬ್ದ ಆದರೆ 'ಪುರ', 'ಸ್ತೃ'ಧಾತುಗಳು ಸೂಚಿಸುವಂತೆ ಪೂರ್ಣನೂ, ಸಂಪ್ರೀತನೂ, 'ಇಡಿಯಾದ' ವ್ಯಕ್ತಿ','ಸ್ವಯಂಪೂರ್ಣ' ಎನ್ನುವ ಅರ್ಥವನ್ನು ಕೊಡುತ್ತದೆ.''೭.

ಭಾರತೀಯ ಸಂಸ್ಕೃತಿಯಲ್ಲಿ ಮಹಿಳೆಯ ಸ್ಥಾನಮಾನವನ್ನು ಧರ್ಮಗ್ರಂಥಗಳಲ್ಲಿ ಗಂಗೊಳಿಸಿರುವ ಕಲ್ಪನೆ ಕುರಿತು, ಗಾಢವಾದ ಚಿಂತನೆ ನಡೆಸಿದ ಪ್ರಮುಖ ವಿಚಾರ ಚಿಂತಕರಾದ ಡಾ. ಪೊಲಂಕಿ ರಾಮಮೂರ್ತಿಯವರು ಧರ್ಮ ಗ್ರಂಥಗಳಲ್ಲಿ ಸ್ತ್ರೀ-ಪುರುಷರ ಸ್ಥಾನ-ಮಾನದ ನಿರ್ದೇಶನ ಹೇಗಾಗಿದೆ. ಎಂಬುದನ್ನು ಅವರು ಹೀಗೆ ಗುರುತಿಸುತ್ತಾರೆ. ''ಹಿಂದೂ ಧರ್ಮದಲ್ಲಿ ಶೂದ್ರ ಕೀಳು ಮಾನವನಾದರೆ, ಸ್ತ್ರೀ ನೀಚಳಾಗಿದ್ದಾಳೆ. ಇದರಿಂದಾಗಿ ಸ್ತ್ರೀ ಹಿಂದೂ ಸಮಾಜದಲ್ಲಿ ಶೂದ್ರರಿಗಿಂತಲೂ ಹೆಚ್ಚಿನ ತುಚ್ಛೀಕರಣಕ್ಕೆ ಗುರಿಯಾಗಿದ್ದಾಳೆ. 'ಸ್ತ್ರೀ'ಕಿರುಬನ ಹೃದಯದವಳು(ಋಗ್ವೇದ) 'ಅವಳು ಎಲ್ಲ ಕೆಡುಕಿನ ಮೂಲ(ಮಹಾಭಾರತ). 'ಅವಳು ಚಂಚಲೆ; ಖಡ್ಗದಂತೆ ಹರಿತವಾದವಳು; ಬಿರುಗಾಳಿಯಂತೆ ಅಸ್ಥಿರಳು(ರಾಮಾಯಣ), 'ಹೆಂಗಡು ಕಾಮಪಿಪಾಸೆಯುಳ್ಳವಳು; ಕುಟಿಲೆ; ಸ್ತ್ರೀ ಸ್ವಾತಂತ್ರ್ಯಕ್ಕೆ ಎಂದಿಗೂ ಅನರ್ಹಳು' (ಮನು), 'ಸ್ತ್ರೀ' ಒಂದು ವಸ್ತು, ಅವಳೊಂದು ಪದಾರ್ಥ' (ಶಾಕ್ತ)'' ೮
ಈ ರೀತಿಯಾಗಿ ಮತಧರ್ಮಗಳು, ಧರ್ಮಶಾಸ್ತ್ರಗಳು ಸ್ತ್ರೀಯನ್ನು ಸ್ತ್ರೀಯಂತೆ ಕಾಣದೇ ಅವಳನ್ನು ವಸ್ತುವಿನೋಪಾದಿಯಲ್ಲಿ, ಮೃಗಗಳೋಪಾದಿಯಲ್ಲಿ ಕಂಡಿದ್ದು ಅತ್ಯಂತ ಹೇಯಕೃತ್ಯವಾಗಿದೆ. ಸಲ್ಲದ ಹಣೆಪಟ್ಟಿ ಕಟ್ಟಿಕೊಂಡ

ಇದು ಭಾರತೀಯ ಸ್ತ್ರೀಯ ದುರಂತವಾಗಿದೆ.

ವೇದಗಳ ಕಾಲದಿಂದೀಚೆಗೆ ಸ್ತ್ರೀಯರ ಬಗ್ಗೆ ಅನಾದರಭಾವ ಧಾರ್ಮಿಕವಾಗಿ ಹುಟ್ಟಿಕೊಂಡು, ನಂತರ ಸಾಮಾಜಿಕ, ಸಾಂಸ್ಕೃತಿಕ ವಾಗಿಯೂ ಗಟ್ಟಿಗೊಂಡಿತು. ಸ್ಮೃತಿಗಳ ಯುಗದಿಂದ ಹೆಣ್ಣಿನ ಹುಟ್ಟು ಅನಿಷ್ಟವಾಗಿ ಪರಿಣಮಿಸಿತು.

'ಮನುವಿನ ಸ್ಮೃತಿ' ಹಿಂದೂಧರ್ಮದ ಪವಿತ್ರ ಗ್ರಂಥವಾಗುತ್ತಲೇ ಅದು ಮನುಷ್ಯ ಮನುಷ್ಯರ ಮಧ್ಯ ಅಗಾಧವಾದ ಕಂದಕವನ್ನು ನಿರ್ಮಿಸಿತು. ಸ್ತ್ರೀಯರಿಗೆ ವಿಶೇಷವಾದ ಕಾನೂನುಗಳನ್ನು ಮಾಡಲಾಯಿತು. ಮೇಲುನೋಟಕ್ಕೆ ಈ ಕಾನೂನುಗಳು ಮಹಿಳೆಯರನ್ನು ಭದ್ರತೆ ಮತ್ತು ಗೌರವದ ಸ್ಥಾನಕ್ಕೆ ಏರಿಸಿದ್ದರೂ ವಾಸ್ತವವಾಗಿ ಅದರಲ್ಲಿ ಪುರುಷ ಸ್ವಾರ್ಥ ಮತ್ತು ಹಿತಾಸಕ್ತಿಗಳೇ ಹುದುಗಿಕೊಂಡಿವೆ. ಸ್ತ್ರೀ ಮತ್ತು ಶೂದ್ರರು ಸಮಾನರೆಂದು ಹೇಳುತ್ತಲೇ ದ್ವಂದ್ವತೆಯನ್ನು ಸೃಷ್ಟಿಸಲಾಯಿತು.

ಪುರುಷ ಪ್ರಧಾನ ವ್ಯವಸ್ಥೆಯಡಿಯಲ್ಲಿ ಮಹಿಳೆ ಸಿಕ್ಕು ಅನುಭವಿಸಿದ ನೋವು ಅತ್ಯಂತ ಶೋಚನೀಯ. ಬರೀ ಹೆಣ್ಣು ಎನ್ನುವ ಕಾರಣಕ್ಕಾಗಿ ಆಕೆ ಅನುಭವಿಸಿದ ಸಂಕಷ್ಟ, ನಿರಾಶೆಗಳು ಅಗಣಿತ. ಅವಳ ಶೋಷಣೆಗೆ ಆರ್ಥಿಕ ನಿರಾಧಾರವೂ ಕಾರಣವಾಗಿ ಆಕೆಯ ವ್ಯಕ್ತಿತ್ವವನ್ನೇ ನುಂಗಿವೆ. ಸ್ತ್ರೀಯನ್ನು ಸ್ತ್ರೀಯಂತೆ ಕಾಣದೇ ಆಕೆಯನ್ನು-

''ಕಾರ್ಯೇಷು ಮಂತ್ರಿ ಕರುಣೇಷು ದಾಸಿ
ಭೋಜ್ಯೇಷು ಮಾತಾ ಶಯನೇಷು ರಂಭಾ
ಧರ್ಮಾನುಕೂಲ ಕ್ಷಮಯಾಧರಿತ್ರೀ
ಷಡ್ಗುಣ್ಯ ಭಾರ್ಯಾ ಕುಲಮುದ್ಧರಂತಿ''[೬]

ಈ ರೀತಿಯಾಗಿ ಮಹಿಳೆಯು ಪುರುಷನ ಹಿತಾಸಕ್ತಿಗನುಗುಣವಾಗಿ ಹಲವಾರು ಪಾತ್ರಗಳನ್ನು, ಸ್ಥಾನಗಳನ್ನು ಭರಿಸಬೇಕಾಗುತ್ತದೆ. ಜೊತೆಗೆ ಹಾಗೇ ಭರಿಸಬೇಕು ಎಂಬುದನ್ನು ಪುರುಷರು ನಿರ್ಧರಿಸುತ್ತಲೇ ಬಂದು ಅದನ್ನು ಸಾಂಸ್ಕೃತಿಕ ಮತ್ತು ಸಾಮಾಜಿಕ ಮೌಲ್ಯಗಳನ್ನಾಗಿಸಿದ್ದಾರೆ. ಹೆಣ್ಣಿಗೆ ಆರು ಗುಣಗಳು ಇರಬೇಕೆಂದು ಹೇಳುವ ಪುರುಷ ವ್ಯವಸ್ಥೆ ತನ್ನಲ್ಲಿ ಆ ಗುಣಗಳಿವೆಯೇ ಎಂಬುದನ್ನು ತಪ್ಪಿಯೂ ಹುಡುಕುವುದಿಲ್ಲ. ಹೀಗೆ ಸ್ತ್ರೀಯನ್ನು ಕಡೆಗಣಿಸಲು

ಅವಳ ದೈಹಿಕ ಸಂರಚನೆಯ ಜೊತೆಗೆ ಸಾಮಾಜಿಕ ವ್ಯವಸ್ಥೆಯೂ ಪೂರಕವಾಗಿದೆ. ಪುರುಷ ಪ್ರಧಾನತೆಯು ನಿರ್ದಿಷ್ಟ ಚಾರಿತ್ರಿಕ ಸನ್ನಿವೇಶಗಳ ಫಲವೇ ಹೊರತು, ಅದು ಸಹಜವಾದುದೇನೂ ಅಲ್ಲ. ಆದುದರಿಂದ ಈ ಪರಿಸ್ಥಿತಿಯನ್ನು ಬದಲಾಯಿಸುವುದು ಸಾಧ್ಯವಾದರೂ ಕಷ್ಟವೆಂದೇ ಹೇಳಬಹುದು. ಚರಿತ್ರೆಯುದ್ದಕ್ಕೂ ಪುರುಷರು ಸ್ತ್ರೀಯರನ್ನು ತಮ್ಮ ಅಂಕೆಯಲ್ಲಿರಿಸಿಕೊಳ್ಳಲು ಯತ್ನಿಸಿದ್ದು ಒಂದು ಚಾರಿತ್ರಿಕ ಸತ್ಯ ಸಂಗತಿ. ಈ ರೀತಿಯಾಗಿ ಸ್ತ್ರೀಯನ್ನು ಅಂಕೆಯಲ್ಲಿರಿಸಿಕೊಳ್ಳುವುದು.ಕೂಡಾ ಲಿಂಗಭೇದವನ್ನು ಆಧರಿಸಿದೆ.

''ವೇದಗಳಲ್ಲೂ ಸಹ 'ಪಿತೃ-ಭೂಮಿ, ಮಾತೃ-ಆಕಾಶ' ಎಂದು ಹೇಳುವ ವಾಕ್ಯಗಳು ಸತಿ-ಪತಿಯರು ಸರಿಸಮ ಎಂಬ ಮಾತನ್ನು ಹೇಳುತ್ತವೆಯೇ ಹೊರತು, 'ಪತಿಯು ಮೇಲು, ಪತ್ನಿಯು ಕೀಳು' ಎಂಬ ಭಾವನೆಯು ಎಲ್ಲೂ ಕಂಡಿಲ್ಲ. ಬಾಳಸಂಗಾತಿಯನ್ನು ಸಮಾನಗೌರವದಿಂದ ಕಾಣಬೇಕೆಂಬುದು ನಮ್ಮ ಸಂಸ್ಕೃತಿಯ ತಿರುಳೂ ಆಗಿದೆ.''೧೦ ಹೆಣ್ಣುಮಕ್ಕಳನ್ನು ಈ ಪುರುಷ ಪ್ರಧಾನ ಸಮಾಜ ಆಳಲು ಪ್ರಾರಂಭಿಸಿದಾಗಿನಿಂದ ಈ ದರ್ಪ 'ದಾರ್ಷ್ಟ್ಯಗಳು ಬಂದು ಮಹಿಳೆಯರನ್ನು ಭೂಗತ ಮಾಡುವ ದುಷ್ಟಸಂಪ್ರದಾಯವೂ ಹುಟ್ಟಿಕೊಂಡಿತು. ಕೊನೆಗೆ ಅದೇ ನಿಜವಾದ ಮೂಲ ಸಂಪ್ರದಾಯವೆಂಬಂತೆ ನೆಲೆಯೂರಿರುವುದು. ಇಲ್ಲಿ ವೇದ್ಯವಾಗಿದೆ. ಹೀಗೆ ಹೆಣ್ಣುಮಕ್ಕಳನ್ನು ಮುಳುಗಿಸಿ ಬಿಡುವುದೇ ಪುರುಷ ಗೌರವ ಎಂದು ಭಾವಿಸಿ ನತರ ನಡವಳಿಕೆ ಹೆಣ್ಣುಮಕ್ಕಳ ಬಗ್ಗೆ, ಅವರು ಹುಟ್ಟುವ ಬಗ್ಗೆಯೇ ಏನೋ ಆಪಾಯವಿದೆ ಎಂದು ಭಾವಿಸುವಂತಾಗಿ ಹೆಣ್ಣುಮಕ್ಕಳೇ ಬೇಡ ಎನ್ನುವ ಮಟ್ಟಕ್ಕೆ ಸಮಾಜ ಇಳಿದಿದೆ.

೧೭ನೇ ಶತಮಾನದಲ್ಲಿದ್ದ ಸಂಚಿಯ ಹೊನ್ನಮ್ಮ ತನ್ನ 'ಹದಿಬದೆಯ ಧರ್ಮ' ಎಂಬ ಕೃತಿಯಲ್ಲಿ ಹೆಣ್ಣಿಗೂ -ಗಂಡಿಗೂ ಸಮಾನವಾದ ನೀತಿ-ನ್ಯಾಯಗಳನ್ನು ಹೇಳಿರುವುದು ಗಮನಾರ್ಹವಾಗಿದೆ. ಅಲ್ಲದೇ ಅಂದಿನ ಕಾಲದಲ್ಲಿ ಸ್ತ್ರೀಯರ ಬಗೆಗೆ ಪುರುಷರು ತೋರುವ ಅಸಡ್ಡೆಯನ್ನು ಖಂಡಿಸಿ ''ಹೆಣ್ಣು ಹೆಣ್ಣೆಂದೇಕೆ ಬೀಳುಗಳೆವರು ಕಣ್ಣು ಕಾಣದ

ಗಾವಿಲರು'' ೧೧ ಎಂದು ಸಮಾಜದ ಅಜ್ಞಾನವನ್ನೇ ಪ್ರಶ್ನಿಸಿದ್ದಾಳೆ. ಅಲ್ಲದೇ ''ಕುಮಾರನಾದರೆ ಬಂದ ಭಾಗ್ಯವೇನದರಿಂದ, ಕುಮಾರಿಯಾದರೆ ಕುಂದೇನು?'' ಎಂದು ಪ್ರಶ್ನಿಸಿ ಹೆಣ್ಣು ಗಂಡಿನ ಸಮಾನತೆಯನ್ನು ಸೂಚಿಸುತ್ತಾಳೆ.

೧೨ ಆದರೆ ಅದೇ ಹೊನ್ನಮ್ಮ ''ಒಡೆಯನಿಟ್ಟಂತಿರ್ಪ ಒಡವೆ ಸತಿ, ಬರಿಸವನ್ನೆರಡಾದ ಬಳಿಕ ಆರೋಳಂ ಬೆರೆಯದೆ ಹೊಸತಲ ಹೊರಗಡಿಯಿಡದಂತೆ''೧೩ ಇರಬೇಕೆಂಬ ಸಂಪ್ರದಾಯನಿಷ್ಟ ಲಕ್ಷ್ಮಣ ರೇಖೆಯೊಳಗಿದ್ದಾಳೆ. ಹೊನ್ನಮ್ಮನಲ್ಲಿ ವ್ಯಕ್ತಗೊಂಡ ಈ ವೈರುಧ್ಯ, ಅಂದು ಸ್ತ್ರೀಯು ಅಭಿವ್ಯಕ್ತಿ ಸ್ವಾತಂತ್ರ್ಯದ ಬಗ್ಗೆ ಇದ್ದ ಕಠಿಣ ಪರಿಸ್ಥಿತಿಯನ್ನು ತೋರಿಸುತ್ತದೆ. ಇಲ್ಲವೆ ಹೆಣ್ಣು ತನ್ನನ್ನು ತಾನು ರಕ್ಷಿಸಿಕೊಳ್ಳುವ ಹಂತದಲ್ಲಿ ಹೀಗೆ ಹೇಳಿರಬೇಕು-ಅಥವಾ ಅವಳ ಹೇಳಿಕೆಯು ಪ್ರಕ್ಷಿಪ್ತವಾಗಿರಬೇಕು ಎಂಬ ಗುಮಾನಿಯು ಕಾಡುತ್ತದೆ. ಆದರೂ ಅಂದಿನ ಕಾಲದಲ್ಲಿ ಮಹಿಳೆಯರಪರ ಧ್ವನಿ ಎತ್ತಿದ ಮಹಿಳೆ ಹೊನ್ನಮ್ಮನದು ದಿಟ್ಟಸಾಹಸವೇ ಎನ್ನಬೇಕು.

ಸ್ತ್ರೀಶೋಷಣೆಯನ್ನು ತಡೆದು ಸ್ವಾತಂತ್ರ್ಯ ಮತ್ತು ಸಮಾನತೆಯನ್ನು ತಂದುಕೊಟ್ಟದ್ದು೧೨ನೇ ಶತಮಾನದ ವಚನಯುಗ.

ಆಧ್ಯಾತ್ಮಿಕ ಸಾಧನೆಯ ವಲಯದಲ್ಲಿ ಹೆಣ್ಣು-ಗಂಡಿನ ನಡುವೆ ಯಾವ ತರತಮ ಭಾವಗಳು ಇರಕೂಡದೆಂದು ವಚನಕಾರರು ಸಾರಿದರು. ಅದರಂತೆ ನಡೆದುಕೊಂಡರೂ ಕೂಡಾ. ಈ ದಿಶೆಯಲ್ಲಿ ಅಕ್ಕಮಹಾದೇವಿ, ಕೌಶಿಕ ಮಹಾರಾಜನನ್ನು ಎದುರಿಸಿ 'ಲೋಕದ ಗಂಡರನ್ನು ಒಲೆಯೊಳಗಿಕ್ಕು' ಎಂದು ಪ್ರಭುತ್ವವನ್ನು ಧಿಕ್ಕರಿಸಿದ್ದು ಸಾಮಾನ್ಯ ಸಂಗತಿಯಲ್ಲ.

ಶ್ರೇಷ್ಠ ಸಮಾಜ ಸುಧಾರಕರಾದ ಬಸವಣ್ಣನವರು ಸ್ತ್ರೀಯರ ಬಗ್ಗೆ ಗೌರವ ಭಾವನೆಯುಳ್ಳವರಾಗಿದ್ದರು. ಸ್ತ್ರೀಯನ್ನು ಕೇವಲ ಭೋಗವಸ್ತುವೆಂದು ತಿಳಿದು, ಪುರುಷ ವ್ಯವಸ್ಥೆ ಆಕೆಯನ್ನು ಗುಲಾಮಳಂತೆ ನಡೆಸಿಕೊಂಡು ಬಂದ ಸಂದರ್ಭದಲ್ಲಿ ಬಸವಣ್ಣನವರು ಮಹಿಳಾ ಶೋಷಣೆಯನ್ನು ತಪ್ಪಿಸಿ ಆಕೆಗೂ ಸಮಾನವಾಗಿ ಬದುಕುವ ಅವಕಾಶ ನೀಡಿದ್ದರು. ''ಸ್ತ್ರೀ ಪುರುಷರು ಒಂದು ನಾಣ್ಯದ ಎರಡು ಮುಖಗಳಿದ್ದಂತೆ ಪುರುಷನು ಅಬಲೆಯಾದ ಸ್ತ್ರೀಯನ್ನು

ಕಡೆಗಣಿಸಿ ಅಂಧಃಕಾರದಲ್ಲಿದ್ದಾರೆಂದು ಬಸವಣ್ಣನವರು ಸಾರಿದರು. ಹೆಣ್ಣು ಪ್ರತ್ಯಕ್ಷ ಪರಮಾತ್ಮನೆಂದು ಬಗೆದು, ಆಕೆಗೆ ಧಾರ್ಮಿಕ ಸ್ವಾತಂತ್ರ್ಯ ಕಲ್ಪಿಸಿಕೊಟ್ಟರು. ಹೆಣ್ಣು-ಗಂಡೆಂಬ ಭೇದ ಭಾವ ಬರಕೂಡದೆಂಬುದು ಬಸವಣ್ಣನವರ ಅಭಿಮತ''.೧೪

೧೨ನೇ ಶತಮಾನಕ್ಕೂ ಪೂರ್ವದಲ್ಲಿದ್ದ ಆದ್ಯವಚನಕಾರ ದೇವರ ದಾಸಿಮಯ್ಯ, ಅಂದು ಸಮಾಜದಲ್ಲಿ ಆಳವಾಗಿ ಬೇರೂರಿದ್ದ ಲಿಂಗಭೇದದ ಕುರಿತು ಆಧ್ಯಾತ್ಮಿಕ ನೆಲೆಯಿಂದ ಈ ರೀತಿಯಾಗಿ ಹೇಳಿದ್ದಾನೆ.

''ಮೊಲೆ ಮುಡಿ ಬಂದರೆ ಹೆಣ್ಣೆಂಬರು
ಗಡ್ಡ ಮೀಸೆ ಬಂದರೆ ಗಂಡೆಂಬರು
ನಡುವೆ ಸುಳಿವಾತ್ಮ ಹೆಣ್ಣೂ ಅಲ್ಲ
ಗಂಡೂ ಅಲ್ಲ ಕಾಣಾ ರಾಮನಾಥ''.೧೫

ಎಂಬ ವ್ಯಾಖ್ಯೆಯ ಮೂಲಕ ದಾಸಿಮಯ್ಯ ಹೆಣ್ಣು-ಗಂಡುಗಳಲ್ಲಿ ಸಮಾನತೆಯನ್ನು ಸಾಧಿಸಲು ಪ್ರಯತ್ನಿಸಿದ್ದಾನೆ. ಈತ ಕೇವಲ ದೈಹಿಕ ರಚನೆಯನ್ನು ಗಮನಿಸಿ-ಹೆಣ್ಣು-ಗಂಡೆಂದು ಭೇದವೆಣಿಸುವ ಕ್ರಮವನ್ನು ಅಲ್ಲಗಳೆಯುತ್ತಾನೆ. ಇಂಥದೇ ಆಧ್ಯಾತ್ಮಿಕ ಸ್ತರದಿಂದಲೇ ಆತ್ಮಸಾಧನಾ ವಿಷಯದಲ್ಲಿ ಲಿಂಗಭೇದವನ್ನು ನಿರಾಕರಿಸಿದ ವಚನಕಾರ್ತಿಯರ ಮೌಲಿಕ ವಿಚಾರಗಳುಳ್ಳ ವಚನಗಳು ಇಂತಿವೆ,

''ಮೊಲೆ ಮುಡಿ ಬಂದಡೆ ಹೆಣ್ಣೆಂಬರು
ಮೀಸೆಕಾಸೆ ಬಂದಡೆ ಗಂಡೆಂಬರು
ಈ ಉಭಯದ ಜ್ಞಾನ
ಹೆಣ್ಣೊ ಗಂಡೊ ನಾಸ್ತಿನಾಥ''೧೬.

''ಮೊಲೆ ಮುಡಿ ಇದ್ದುದೆ ಹೆಣ್ಣೆಂದು ಪ್ರಮಾಣಿಸಲಿಲ್ಲ
ಕಾಸೆ ಮೀಸೆ ಕಠಾರವಿದ್ದುದೆ ಗಂಡೆಂದು ಪ್ರಮಾಣಿಸಲಿಲ್ಲ
ಅದು ಜಗದ ಹಾಹೆ ಬಲ್ಲವರ ನೀತಿಯಲ್ಲ.''೧೭

ಎನ್ನುವ ಗೊಗ್ಗವ್ವೆ ಮತ್ತು ಸತ್ಯಕ್ಕನ ಈ ಎರಡೂ ವಚನಗಳು ಅಂದಿನ ಸಮಾಜದಲ್ಲಿ ಗಂಡು ಶ್ರೇಷ್ಠ ಹೆಣ್ಣು ಕನಿಷ್ಠ ಎಂಬ ಭಾವನೆ ಅಜ್ಞಾನಮೂಲದಿಂದ ಬಂದುದು. ಪರಸ್ಪರ ಅಂಗವಿನ್ಯಾಸದಲ್ಲಿ ವ್ಯತ್ಯಾಸವಿದೆಯೇ ಹೊರತು ಅವರ ಬೌದ್ಧಿಕಸ್ತರದಲ್ಲಿ ಅಲ್ಲ ಎಂಬುದನ್ನು ಧ್ವನಿಸುತ್ತವೆ. ಹೆಣ್ಣು ನಿಕೃಷ್ಟವೆಂಬ ಮನುಷ್ಯ ಭಾವನೆಯನ್ನು ಇವರು

ಖಂಡಿಸಿದರು. ಅಂದಿನ ಸಂಪ್ರದಾಯಬದ್ಧ ಪರಿಸರದಲ್ಲಿ ಸ್ತ್ರೀ ಸಮಾನತೆಯನ್ನು ಕುರಿತು ಮಾತನಾಡಿದುದು ಅವರ ದಿಟ್ಟಕ್ರಮವೆಂದೇ ಹೇಳಬೇಕು.

''ಹೆಣ್ಣು-ಗಂಡಿನ ಆತ್ಮ ಒಂದೇ ಅದಕ್ಕೆ ಹೆಣ್ಣು-ಗಂಡು ಎಂಬ ಭೇದವಿಲ್ಲ. ಇಬ್ಬರೂ ಸೃಷ್ಟಿಕರ್ತನ ದೃಷ್ಟಿಯಲ್ಲಿ ಸಮಾನರು. ಅದನ್ನು ದೃಢಪಡಿಸಲು ಶಿವನು ಅರ್ಧನಾರೀಶ್ವರನಾಗಿ ಮೆರೆದಿದ್ದಾನೆ''೧೮ ಎಂಬುದಕ್ಕೆ ಜನಪದ ಸಾಹಿತ್ಯದಲ್ಲಿ ಕಲ್ಗಿ-ತುರಾಯಿ ಅಥವಾ ಹರದೇಶಿ-ನಾಗೇಶಿ ಹಾಡುಗಳ ವಸ್ತು ಮುಖ್ಯವಾಗಿ ಗಂಡು-ಹೆಣ್ಣು ಇವುಗಳಲ್ಲಿ ಯಾವುದು ಹೆಚ್ಚು, ಯಾವುದು ಕಡಿಮೆ ಎನ್ನುವುದರ ಕುರಿತು ಸುದೀರ್ಘವಾದ ಚರ್ಚೆ ನಡೆಯುತ್ತದೆ. ಗಂಡು-ಹೆಣ್ಣು ಅಥವಾ ಶಿವ-ಶಕ್ತಿ ಇವರಲ್ಲಿ ಯಾರು ಆದಿ ಎಂಬ ವಾದದಲ್ಲಿ ಎರಡೂ ಪಂಗಡದವರು ಪರಂಪರಾಗತವಾದ ಹಲವಾರು ಸಂಕೇತಗಳನ್ನು ಬಳಸುತ್ತಾ ಬರುತ್ತಾರೆ. ಅವೆಂದರೆ, ಗಂಡು-ಆತ್ಮ ನಿರಾಕಾರ, ನೀರು ಮಳೆ, ಬೆಳಕು, ಬೀಜ, ಒರೆಯಲ್ಲಿಯ ಖಡ್ಗ, ಗುಡಿಯಲ್ಲಿಯ ದೇವರು ಇತ್ಯಾದಿ. ಹೆಣ್ಣು-ದೇಹ, ಸಾಕಾರ, ಭೂಮಿ ಕತ್ತಲೆ, ಖಡ್ಗವನ್ನು ಒಳಗೊಂಡಿರುವ ಒರೆ, ದೇವರನ್ನೊಳಗೊಂಡಿರುವ ಗುಡಿ ಇತ್ಯಾದಿ.

ಗಂಡಿನವರು 'ಆದಿಯಲ್ಲಿ ಇತ್ತು ನೀರೇ ನಿರಂಕಾರ
ಅದರಿಂದಾಯ್ತು ಭೂಮಿಯ ಅವತಾರ।

ಎಂದು ವಾದ ಹೂಡಿದರೆ, ಹೆಣ್ಣಿನವರು, 'ನೀರೆ ನಿರಂಕಾರ ಇದ್ದರೆ ಅದನ್ನು ಮೇಲಿನಿಂದ ಏನು ಎತ್ತಿ ಹಿಡಿದಿತ್ತು? ಕೆಳಗಿನಿಂದ ಯಾವುದು ಹೊತ್ತಿತ್ತು? ಶಕ್ತಿಯಿಲ್ಲದಿದ್ದರೆ ನೀರೇನು ಅತಂತ್ರವಾಗಿ ನಿಲ್ಲುತ್ತಿತ್ತೇ? ಎಂದು ಪ್ರತಿವಾದ ಹೂಡುತ್ತಾರೆ. ಬೀಜ ಹೆಚ್ಚೋ ಏನು ಭೂಮಿ ಹೆಚ್ಚೋ ಎಂಬ ವಾದದಲ್ಲಿ ಹೆಣ್ಣಿನವರ ಸವಾಲು ''ಬೀಜವೇ ಮುಖ್ಯವಾಗಿದ್ದರೆ, ಗಂಡಿನಿಂದ (ಬೀಜದಿಂದ) ಗಂಡಷ್ಟೇ ಹುಟ್ಟಬೇಕಾಗಿತ್ತು? ಎಂದು ಪ್ರಶ್ನಿಸಿ, ಗಂಡು-ಹೆಣ್ಣು ಎರಡನ್ನೂ ಹಡೆದವಳು ತಾಯಿಯು-ಹೆಣ್ಣೇ. ಗಂಡಿನವರು ಹೆಣ್ಣನ್ನು ಕತ್ತಲೆಯೆಂದೂ, ಗಂಡನ್ನು ಬೆಳಕೆಂದೂ ಹೇಳಿ ಕತ್ತಲೆಗಿಂತ ಬೆಳಕೇ ಶ್ರೇಷ್ಠವೆಂದು ವಾದಿಸಿದರೆ, ಹೆಣ್ಣಿನವರು ಆದಿಶಕ್ತಿ ಕಾಳಿಯು ಹೌದು, ಆದರೆ ಆ ಕಾಳಿ ಕತ್ತಲೆಯ ಗರ್ಭದಲ್ಲಿಯೇ ಬೆಳಕಿನ ಉತ್ಪತ್ತಿ ಅವಳು ಕತ್ತಲೆ ಬೆಳಕು ಎರಡನ್ನೂ ಗರ್ಭೀಕರಿಸಿಕೊಂಡವಳಾಗಿ ''ಕತ್ತಲ ಸೀರಿ ಬೆಳಕಕುಪ್ಪಸ ಮಾಡಿಕೊಂಡಾಕೆ''೧೯ ಎಂದು ಉತ್ತರಿಸುತ್ತಾರೆ.

ಮಳೆ-ಭೂಮಿ ಸಂಕೇತ ಬಳಸಿಕೊಂಡು ಖಂಡಿಸುವರು ಹೀಗೆ ವಾದ ಹೂಡುತ್ತಾರೆ-ಭೂಮಿ ಬೆಳೆಯಬೇಕಾದರೆ ಮೂಲ ಬೀಜ ಬೇಕು. ಮಳೆ, ಗಾಳಿ ಇವೆಲ್ಲ, ಗಂಡೇ ಆದ್ದರಿಂದ ಗಂಡು-ಹೆಣ್ಣು ಹೇಗೆ ಸಮನಾದವು? ಶಿವನಲ್ಲಿಯೇ ಶಕ್ತಿ ಹುಟ್ಟಿದಳು, ಅವಳು ಆತನ ಅಧೀನ ಎಂಬುದು ಶರಣೇತರಿಯುವರ ಸಮರ್ಥನೆ.

ಹೀಗೆ ಗಂಡು-ಹೆಣ್ಣಿನ ತತ್ವಗಳ ನಡುವೆ ಸುದೀರ್ಘ ಚರ್ಚೆ ನಡೆದು ಕೊನೆಗೆ ಹೆಣ್ಣು-ಗಂಡು ಎರಡೂ ಸಮನಾದವುಗಳು. ಶಿವಶಕ್ತಿ ಇಬ್ಬರೂ ಕೂಡಿಯೇ ಏಕಕಾಲಕ್ಕೆ ಬಂದವರು. ಇಬ್ಬರೂ ಕೂಡಿದಾಗಲೇ ಲೋಕವ್ಯವಹಾರ ನಡೆಯುವುದು ಎಂಬ ನೆಲೆಗೆ ಬಂದು ನಿಲ್ಲುತ್ತಾರೆ.

ಜಾಗತಿಕ ಇತಿಹಾಸದಲ್ಲಿಯೇ ಪುರುಷಕೇಂದ್ರಿತ ಚಿಂತನೆಯ ಪ್ರಾಧಾನ್ಯತೆ ಸುಮಾರು ಕ್ರಿ.ಪೂ.೬ನೆಯ ಶತಮಾನದಿಂದ ೧೬ನೆಯ ಶತಮಾನದವರೆಗೆ ಅವ್ಯಾಹತವಾಗಿ ನಡೆದುಬಂದಿರುವಂತಿದೆ. ಪುರುಷಕೇಂದ್ರಿತ ಚಿಂತನೆಯೇ ಪ್ರಧಾನವಾಗುಳ್ಳ ಬ್ರಿಟಿಷರ ಮೂಲಕ ಬಂದ ಐರೋಪ್ಯ ಸಂಸ್ಕೃತಿಗಳು ಇಲ್ಲಿಯ ಸ್ತ್ರೀಕೇಂದ್ರಿತವೂ ಆಗಿದ್ದ ದೇಶೀಯ ಸಂಸ್ಕೃತಿಗಳ ಹಲವು ಅಂಶಗಳನ್ನು ಅಂತರ್ಗತವಾಗಿಸಿಕೊಂಡಿವೆ.

ಹತ್ತೊಂಬತ್ತನೆಯ ಶತಮಾನದ ಮಧ್ಯದಲ್ಲಿ ಇಂಗ್ಲೆಂಡ್ ಮತ್ತು ಯೂರೋಪ್ ದೇಶಗಳಲ್ಲಿ ಪ್ರಾರಂಭವಾದ ಔದ್ಯೋಗಿಕ ಕ್ರಾಂತಿ ಈ ದೇಶಗಳನ್ನು ಆರ್ಥಿಕ ಪ್ರಗತಿಯೆಡೆಗೆ ಕೊಂಡೊಯ್ಯಿತೇನೋ ನಿಜ, ಆದರೆ ಸಂಪತ್ತಿನ ಜೊತೆಗೆ ಅದು ಶೋಷಣೆಯ ಶಾಪವನ್ನು ತನ್ನ ಮಡಿಲಲ್ಲಿ ಕಟ್ಟಿಕೊಂಡಿತ್ತು. ಶೋಷಣೆಯ ವಿರುದ್ಧ ಶೋಷಿತರು ಬಂಡೆದ್ದರು. ಮನುಷ್ಯ ಒಂದು ಯಂತ್ರವಲ್ಲ, ಆತ ಮಾನವ ಪ್ರತಿ ಮಾನವನನ್ನು, ಮಾನವನೆಂದ ಗೌರವಿಸಬೇಕು. ಎಂಬ ಉದಾರವಾದ ಮಾನವತವಾದ ಪ್ರಾರಂಭವಾಯಿತು. ಅದರ ಕಿರಣವನ್ನು ಹಿಡಿದುಕೊಂಡ ಸ್ತ್ರೀವಾದವೂ ಪ್ರತಿಪಾದಿಸಿದ್ದು ಒಂದು ರೀತಿಯಲ್ಲಿ ಉದಾರತಾ ಮಾನವತಾವಾದವನ್ನೇ ೨೦.

ಅಮೇರಿಕಾದ ಸ್ತ್ರೀಸ್ವಾತಂತ್ರ್ಯದ ಇತಿಹಾಸವನ್ನು ಗಮನಿಸಿದರೆ ಅವರ ಸ್ಥಿತಿ ಅಷ್ಟೇನೂ, ಹೇಳಿಕೊಳ್ಳುವಂತಿರಲಿಲ್ಲ ತಾವೂ ಮನುಷ್ಯರೆಂದು ತಮ್ಮ ಹಕ್ಕುಗಳಿಗಾಗಿ ಹೋರಾಡಬೇಕಾದ ಪ್ರಸಂಗವಿತ್ತು. ೧೮೬೩ರ ಅವಧಿಯಿಂದ ಸ್ತ್ರೀ

ಮಳೆ-ಭೂಮಿ ಸಂಕೇತ ಬಳಸಿಕೊಂಡು ಗಂಡಿನವರು ಹೀಗೆ ವಾದ ಮಾಡುತ್ತಾರೆ-ಭೂಮಿ ಬೆಳೆಯಬೇಕಾದರೆ ಮೂಲ ಬೀಜ ಬೇಕು. ಮಳೆ, ಗಾಳಿ ಇವೆಲ್ಲ, ಗಂಡೇ ಆದ್ದರಿಂದ ಗಂಡು-ಹೆಣ್ಣು ಹೇಗೆ ಸಮವಾದವು? ಶಿವನಲ್ಲಿಯೇ ಶಕ್ತಿ ಹುಟ್ಟಿದಳು, ಅವಳು ಆತನ ಅಧೀನ ಎಂಬುದು ಹರದೇಶಿಯವರ ಸಮರ್ಥನೆ.

ಹೀಗೆ ಗಂಡು-ಹೆಣ್ಣಿನ ಪಕ್ಷಗಳ ನಡುವೆ ಸುದೀರ್ಘ ಚರ್ಚೆ ನಡೆದು ಕೊನೆಗೆ ಹೆಣ್ಣು-ಗಂಡು ಎರಡೂ ಸಮಾನವಾದವುಗಳು. ಶಿವಶಕ್ತಿ ಇಬ್ಬರೂ ಕೂಡಿಯೇ ಏಕಕಾಲಕ್ಕೆ ಬಂದವರು. ಇಬ್ಬರೂ ಕೂಡಿದಾಗಲೇ ಲೋಕವ್ಯವಹಾರ ನಡೆಯುವುದು ಎಂಬ ನೆಲೆಗೆ ಬಂದು ನಿಲ್ಲುತ್ತಾರೆ.

ಜಾಗತಿಕ ಇತಿಹಾಸದಲ್ಲಿಯೇ ಪುರುಷಕೇಂದ್ರಿತ ಚಿಂತನೆಯ ಪ್ರಾಧಾನ್ಯತೆ ಸುಮಾರು ಕ್ರಿ.ಪೂ.೬ನೆಯ ಶತಮಾನದಿಂದ ೧೯ನೆಯ ಶತಮಾನದವರೆಗೆ ಅವ್ಯಾಹತವಾಗಿ ನಡೆದುಬಂದಿರುವಂತಿದೆ. ಪುರುಷಕೇಂದ್ರಿತ ಚಿಂತನೆಯೇ ಪ್ರಧಾನವಾಗುಳ್ಳ ಬ್ರಿಟಿಷರ ಮೂಲಕ ಬಂದ ಐರೋಪ್ಯ ಸಂಸ್ಕೃತಿಗಳು ಇಲ್ಲಿಯ ಸ್ತ್ರೀಕೇಂದ್ರಿತವೂ ಆಗಿದ್ದ ದೇಶೀಯ ಸಂಸ್ಕೃತಿಗಳ ಹಲವು ಅಂಶಗಳನ್ನು ಅಂತರ್ಗತವಾಗಿಸಿಕೊಂಡಿವೆ.

ಹತ್ತೊಂಬತ್ತನೆಯ ಶತಮಾನದ ಮಧ್ಯದಲ್ಲಿ ಇಂಗ್ಲೆಂಡ್ ಮತ್ತು ಯೂರೋಪ್ ದೇಶಗಳಲ್ಲಿ ಪ್ರಾರಂಭವಾದ ಔದ್ಯೋಗಿಕ ಕ್ರಾಂತಿ ಈ ದೇಶಗಳನ್ನು ಆರ್ಥಿಕ ಪ್ರಗತಿಯೆಡೆಗೆ ಕೊಂಡೊಯ್ಯಿತೇನೋ ನಿಜ, ಆದರೆ ಸಂಪತ್ತಿನ ಜೊತೆಗೆ ಅದು ಶೋಷಣೆಯ ಶಾಪವನ್ನು ತನ್ನ ಮಡಿಲಲ್ಲಿ ಕಟ್ಟಿಕೊಂಡಿತ್ತು. ಶೋಷಣೆಯ ವಿರುದ್ಧ ಶೋಷಿತರು ಬಂಡೆದ್ದರು. ಮನುಷ್ಯ ಒಂದು ಯಂತ್ರವಲ್ಲ, ಆತ ಮಾನವ ಪ್ರತಿ ಮಾನವನನ್ನು, ಮಾನವನೆಂದೆ ಗೌರವಿಸಬೇಕು. ಎಂಬ ಉದಾರವಾದ ಮಾನವತಾವಾದ ಪ್ರಾರಂಭವಾಯಿತು. ಅದರ ಸೆರಗನ್ನು ಹಿಡಿದುಕೊಂಡೆ ಸ್ತ್ರೀವಾದವೂ ಪ್ರತಿಪಾದಿಸಿದ್ದು ಒಂದು ರೀತಿಯಲ್ಲಿ ಉದಾರತಾ ಮಾನವತಾವಾದವನ್ನೇ ೨೧.

ಅಮೇರಿಕಾದ ಸ್ತ್ರೀಸ್ವಾತಂತ್ರ್ಯದ ಇತಿಹಾಸವನ್ನು ಗಮನಿಸಿದರೆ ಅವರ ಸ್ಥಿತಿ ಅಷ್ಟೇನೂ, ಹೇಳಿಕೊಳ್ಳುವಂತಿರಲಿಲ್ಲ ತಾವೂ ಮನುಷ್ಯರೆಂದು ತಮ್ಮ ಹಕ್ಕುಗಳಿಗಾಗಿ ಹೋರಾಡಬೇಕಾದ ಪ್ರಸಂಗವಿತ್ತು. ೧೮೬೩ರ ಆದಿಯಿಂದ ಸ್ತ್ರೀ

ತನ್ನನ್ನು ತಾನು ಅರಿಯುವುದಕ್ಕೆ ಪ್ರಾರಂಭಿಸಿದಳು. ಆ ಕಾಲದಲ್ಲಿ ಉಚ್ಚಶಿಕ್ಷಣ ಪಡೆಯುವ ಹಕ್ಕು, ಜೀವನೋಪಾಯ ರೂಪಿಸಿಕೊಳ್ಳುವ ಹಕ್ಕು, ಮತಾಧಿಕಾರದ ಹಕ್ಕುಗಳ ಬೇಡಿಕೆಯನ್ನು ಮಂಡಿಸಿದಾಗ ಸ್ತ್ರೀವಾದದ ಪ್ರಭುತ್ವದ ಮೊದಲಾಯಿತು. ಇಂಥ ಅನೇಕ ಘಟನೆಗಳು ಬೇರೆ ಬೇರೆ ರಾಷ್ಟ್ರಗಳಲ್ಲಿ ಘಟಿಸಿದವು.

ಪುರುಷಪ್ರಧಾನ ವ್ಯವಸ್ಥೆ ಸ್ತ್ರೀಯರಿಗೆ ಅವಮಾನವೀಯವಾಗಿ ನಡೆಸಿಕೊಂಡಾಗ, ಈ ಕೃತ್ಯಗಳ ವಿರುದ್ಧ ಅನೇಕ ಸ್ತ್ರೀವಾದಿ ಚಿಂತಕಿಯರು ಧ್ವನಿ ಎತ್ತಿ ಅದನ್ನು ಪ್ರತಿಭಟಿಸಿದರು. ಲಿಂಗಭೇದದ ಕುರಿತು ಪಾಶ್ಚಾತ್ಯ ಚಿಂತಕಿಯರು ತಮ್ಮದೇ ಆದ ದೃಷ್ಟಿಕೋನದಲ್ಲಿ ಎಂಥ ಅಭಿಪ್ರಾಯವುಳ್ಳವರಾಗಿದ್ದರು ಎಂಬುದನ್ನು ಇಲ್ಲಿ ನೋಡುವುದು ಅಗತ್ಯ.

ಪಾಶ್ಚಾತ್ಯರ ದೃಷ್ಟಿಯಲ್ಲಿ ಲಿಂಗಭೇದ:

ಫ್ರಾನ್ಸದ ಖ್ಯಾತ ಲೇಖಕಿ ಸಿಮೋನ ದಿ ಬುವಾ ತನ್ನ ಶ್ರೇಷ್ಠ ಕೃತಿ 'Second sex' ನಲ್ಲಿ ಗಂಡು-ಹೆಣ್ಣುಗಳ ಪ್ರತ್ಯೇಕೀಕರಣ ಒಂದು ಜೈವಿಕ ವಾಸ್ತವ ಅದನ್ನು ತೊಡೆದು ಹಾಕಲು ಸಾಧ್ಯವೇ ಇಲ್ಲ ಎಂದು ವಾದಿಸುತ್ತಾಳೆ. ''ಚಂಚಲತೆ ಮಹಿಳೆಯ ವ್ಯಕ್ತಿತ್ವದ ಮುಖ್ಯ ಸ್ವಭಾವವಾಗಿ. ಆದ್ದರಿಂದ ಆಕೆ ಸಾಮಾನ್ಯವಾಗಿ ಶೀಘ್ರಕೋಪಿಯೂ ಧೈರ್ಯಹೀನಳೂ ಆಗಿ ವರ್ತಿಸುತ್ತಾಳೆ. ಮಹಿಳೆಯ ಜೈವಿಕ ವಿಶಿಷ್ಟತೆ ಅವಳ ಬದುಕಿನಲ್ಲಿ ಮಹತ್ತರ ಪಾತ್ರ ವಹಿಸುತ್ತದೆ. ಮಹಿಳೆ ತನ್ನ ಜೀವನದಲ್ಲಿ ಪಡೆಯುವ ಸ್ಥಾನ-ಮಾನ ಅವಳಲ್ಲಿ ಅಂತರಂಗಿಕವಾಗಿರುವ ಜೈವಿಕ ಅಂಶದ ಪಾತ್ರಕ್ಕೆ ಅನುಸಾರವಾಗಿಯೇ ಇರುತ್ತದೆ''೨೧ ಎಂಬುದು ಸಿಮೋನ ಬುವಾಳ ಅಭಿಪ್ರಾಯ.

ಸಿಮೋನ ಪ್ರಕಾರ ಸ್ತ್ರೀಯ ಸಮಸ್ಯೆಗಳು ಇರುವುದು ಈ ಕಾರಣಕ್ಕಾಗಿ ''ಹೆಂಗಸರು ತಮ್ಮನ್ನು ಗಂಡಸಿನ ಎದುರಾಗಿ ಸಂಘಟಿಸಿಕೊಳ್ಳಲು ಮೂರ್ತ ಸಾಧನ ಇರದವರು. ಅವರಿಗೆ ಭೂತಕಾಲವಿಲ್ಲ, ಅವರಿಗೆ ಚರಿತ್ರೆ ಇಲ್ಲ, ಅವರಿಗೆ ಸ್ವಂತದ ಧರ್ಮವಿಲ್ಲ. ಅವರಿಗೆ ದುಡಿಮೆಯ ಐಕ್ಯತೆ ಇಲ್ಲ. ಕಾರ್ಮಿಕ ವರ್ಗಕ್ಕೆ ಇರುವ ಹಾಗೆ. ಅವರು ಗಂಡಸಿನ ನಡುವೆ ಚದುರಿ ಚೆಲ್ಲಾಪಿಲ್ಲಿಯಾಗಿ ಬದುಕುತ್ತಾರೆ. ವಸತಿ, ಮನೆಗೆಲಸ, ಆರ್ಥಿಕಸ್ಥಿತಿ, ಸಾಮಾಜಿಕ ಅಂತಸ್ತುಗಳ ಮೂಲಕ ಕೆಲವು ವಿಶಿಷ್ಟ ಗಂಡಸರಿಗೆ ಅಂಟಿಕೊಂಡು ಬದುಕುತ್ತಾರೆ.

''ಗಂಡಸರನ್ನು ವಿಷಮಗೊಳಿಸುವ ವಿಚಾರವನ್ನು ಹೆಂಗಸರು ಕನಸಿನಲ್ಲೂ ಮಾಡಲಾರರು. ತನ್ನ ಶೋಷಕರ ಜೊತೆಗೆ ಆಕೆಗಿರುವ ನಂಟನ್ನು ಉಳಿದವುಗಳ ಜೊತೆಗೆ ಹೋಲಿಸಲು ಕೂಡಾ ಸಾಧ್ಯವಿಲ್ಲ. ಹೀಗಾಗಿ, ಗಂಡು-ಹೆಣ್ಣು ಭೇದ ಐತಿಹಾಸಿಕ ಘಟನೆಯಲ್ಲ; ಅದು ಜೈವಿಕ ಸತ್ಯ. ಕಾಲದೇಶಾತೀತ ರೀತಿಯಲ್ಲಿ, ಗಂಡು-ಹೆಣ್ಣು ವಿರೋಧವಾಗಿದ್ದಾರೆ. ಹೆಂಗಸಿಗೆ ಅದನ್ನು ಮುರಿಯಲಾಗಿಲ್ಲ. ಗಂಡು-ಹೆಣ್ಣಿನ ಜೋಡಿ ಎಂದರೆ ಎರಡು ಅರ್ಧಗಳ ಬಿಡಿಸಿಕೊಳ್ಳಲಾರದ ಬೆಸುಗೆ''೨೨ ಎನ್ನುವುದು ಸಿಮೋನಳ ವಿಚಾರವಾಗಿದೆ.

ಮಾನವ ಕುಲವೇ ಗಂಡು-ಹೆಣ್ಣನ್ನು ಆಕೆಯ ಸ್ವಂತಿಕೆಯಲ್ಲಿ ವ್ಯಾಖ್ಯಾನಿಸದೇ ತನಗೆ ಸಂಬಂಧಿಸಿದಂತೆ

ವ್ಯಾಖ್ಯಾನಿಸುತ್ತಾನೆ. ಆಕೆ ಸ್ವತಂತ್ರ ವ್ಯಕ್ತಿಯಲ್ಲ. ಗಂಡು ತಾನು ಹೆಂಗಸಿರದೇ ಇರುವ ಸ್ಥಿತಿಯನ್ನು ಕಲ್ಪಿಸಿ ಕೊಳ್ಳಲಾರನು. ಹೆಣ್ಣಿನ ಅಸ್ತಿತ್ವ ಗಂಡಸಿನ ಅಪ್ಪಣೆಯಲ್ಲಿದೆ. ಆದ್ದರಿಂದಲೇ ಆಕೆಯನ್ನು 'ಲೈಂಗಿಕತೆ' ಎನ್ನಲಾಗಿದೆ. ಅಂದರೆ ಆಕೆ ಗಂಡಿಗೆ ಕಾಮದ ಮುದ್ದು ಮಾತ್ರ. ಶುದ್ಧಾಂಗವಾಗಿ ಕಾಮ ಇಲ್ಲ. ಆಕೆ ಒಂದು ಆಕಸ್ಮಿಕ ಅಷ್ಟೇ. ಗಂಡಸರೇ ಕರ್ತೃ, ಆತನೇ ಅತ್ಯಂತಿಕ ಶಕ್ತಿ, ಆಕೆ ಏನಿದ್ದರೂ ''ಅನ್ಯ'' ಸಿಮೋನಳ ಈ ವಿಚಾರಗಳು ಹೆಣ್ಣು ಗೌಣ ಎಂಬುದನ್ನು ಸ್ಪಷ್ಟಪಡಿಸುತ್ತವೆ.

ಮೇರಿ ವುಲ್‌ಸ್ಟನ್‌ಕ್ರಾಫ್ಟ್ ಒಬ್ಬ ಪ್ರಭಾವಶಾಲಿ ಸ್ತ್ರೀವಾದಿ ಚಿಂತಕಿ. ಈಕೆ "A vindication of the Right of woman" ಕೃತಿಯಲ್ಲಿ ''ಗಂಡಸನ್ನು ನನ್ನ ಸಹಭಾಗಿಯೆಂದು ಪ್ರೀತಿಸುತ್ತೇನೆ. ಆದರೆ ಅವನ ಭರ್ಜಿಯ ತಿವಿತವನ್ನು ನನ್ನ ಬಳಿ ಸಾರಲು ಬಿಡುವುದಿಲ್ಲ'' ಎಂದು ಮೇರಿ ಘೋಷಿಸುತ್ತಾಳೆ. ಪುರುಷರ ಅನುಭವ ತೋರಿಕೆಗೆ ಉಚ್ಛಮಟ್ಟದ್ದು, ಬುದ್ಧಿವಂತಿಕೆಯಿಂದ ಕೂಡಿದ್ದು ಅಧಿಕೃತವಾದದ್ದು ಆಗಿ ಕಾಣಬಹುದು. ಅವರವರ ಅನುಕೂಲಕ್ಕೆ ತಕ್ಕಂತೆ ಹ್ಯವಿಸಬಹುದಾದ ಈ ಅನುಭವನ್ನು ಸ್ತ್ರೀಯರ ಮೇಲೆ ಹೇರಿಸಲು ಪುರುಷರು ಸದಾ ಯತ್ನಿಸುತ್ತಿರುತ್ತಾರೆ'' ೨೩ ಎಂದು ಹೇಳುತ್ತಾಳೆ.

ಮಹಿಳೆಯರನ್ನು ಬಿಗಿದ ಅನೇಕ ಕಟ್ಟುಪಾಡುಗಳ ಶೃಂಖಲೆಗಳಿಂದ ಮುಕ್ತಗೊಳಿಸಿ, ಅವರ ಮನಸ್ಸನ್ನು ವಿಕಾಸಗೊಳಿಸಬಲ್ಲ ಶಿಕ್ಷಣವನ್ನು ನೀಡಬೇಕೆಂದು ವುಲ್‌ಸ್ಟನ್‌ಕ್ರಾಫ್ಟ್ ಪ್ರತಿಪಾದಿಸುತ್ತಾಳೆ. ಡಾ: ಜಾನ್ಸನ ''ಒಬ್ಬ ಹೆಣ್ಣುಮಗಳು ತತ್ವ ಬೋಧಿಸುವುದು, ನಾಯಿಯು ಹಿಂಗಾಲಿನ ಮೇಲೆ ನಡೆಯುವುದೂ ಒಂದೇ, ಅವೆರಡೂ ಸುಗಮವಾದ ಕಾರ್ಯಗಳಲ್ಲ'' ಎಂಬ ಹೇಳಿಕೆಯನ್ನು ಧಿಕ್ಕರಿಸುತ್ತಾಳೆ.

ವುಲ್‌ಸ್ಟನ್‌ಕ್ರಾಫ್ಟ್ ಪುರುಷರನ್ನು ಉದ್ದೇಶಿಸಿ ಹೀಗೆ ಹೇಳಿದ್ದಾಳೆ. "Man should form with woman rational fellowship and not make her into an obedient slave" ಎಂದೂ, ಹಾಗೂ ಮಹಿಳೆಯರನ್ನು ಉದ್ದೇಶಿಸಿ ಈಕೆ "He should love man with truve affeotion, beoause we should learn to respeot ourselves, and the peace of mind of a worthy man would not be

interrupted by the idle vanity of his wife"೨೪ ಎಂದಿದ್ದಾಳೆ. ಬೌದ್ಧಿಕವಾಗಿ ಮತ್ತು ಮಾನಸಿಕವಾಗಿ ಮಹಿಳೆ ಪುರುಷನಿಗಿಂತಲೂ ಕಡಿಮೆ ಇಲ್ಲವೇ ಇಲ್ಲವೆಂಬುದು ಈಕೆಯ ನಂಬಿಕೆ. ಸತತ ವಿಧೇಯತೆ ಯಾರಲ್ಲಿಯೂ ವೈಚಾರಿಕ ಶಕ್ತಿಯನ್ನು ಕುಂದಿಸಬಲ್ಲದು. ಆದರೆ ಅದೇ ಶಕ್ತಿಯು ಶಿಕ್ಷಣ ಮತ್ತು ಹೊಣೆಗಾರಿಕೆಯಿಂದ ಬೆಳೆಯಬಲ್ಲದೆಂದು ಅಭಿಪ್ರಾಯಪಟ್ಟಿದ್ದಾಳೆ.

''ಎಳೆಯ ವಯಸ್ಸಿನಲ್ಲಿ ಮಕ್ಕಳಿಗೆ ಪಾಠ ಕಲಿಸಲು, ಬೆಳೆದವರಿಗೆ ಅವರ ಆರೈಕೆ ಮಾಡಲು, ದೊಡ್ಡವರಾದಾಗ ಬುದ್ಧಿವಾದ ಹೇಳಲು, ಸಂತೈಸಲು, ಮತ್ತು ಬಾಳನ್ನು ಹಸನು ಮಾಡಲು ಹೆಂಗಸರಿಗೆ ವಿದ್ಯೆ ಬೇಕು,. ಇವು ಹೆಂಗಸರ ಕರ್ತವ್ಯಗಳು. ಇದನ್ನು ಎಳೆಯ ವಯಸ್ಸಿನಲ್ಲಿಯೇ ಮಕ್ಕಳಿಗೆ ಕಲಿಸಬೇಕು'' ಎನ್ನುವ ವಿಷಯಗಳನ್ನು ಹೇಳುವ ರೂಸೋ ಗಂಡುಮಕ್ಕಳನ್ನು ಹೇಗೆ ಬೆಳೆಸಬೇಕು; ಅವರ ಕರ್ತವ್ಯಗಳೇನು? ಎಂಬುದರ ಬಗ್ಗೆ ಚಕಾರವೆತ್ತುವುದಿಲ್ಲ. ಹೀಗೆ ರೂಸೋ ವರ್ಣಿಸಿದ ಪುರುಷ ಆಧಿಪತ್ಯವನ್ನು ಪ್ರತಿಪಾದಿಸುವ, ಹೆಂಗಸಿನ ದಾಸ್ಯವನ್ನು ಗುರುತಿಸುವ ಮೇರಿ ರೂಸೋವಿನ ಬುದ್ಧಿವಾದವನ್ನು ಕೇಳಬೇಕಾಗಿಲ್ಲವೆನ್ನುತ್ತಾಳೆ.

'ಲಿಂಗಪ್ರಭೇದವು ಸಮಾಜದಲ್ಲಿ ಸಾಂಸ್ಕೃತಿಕವಾಗಿ ರೂಪಿಸಿದ ಅಂಶವಾಗಿದ್ದು, ಅದನ್ನು ಪ್ರಶ್ನಿಸಬಹುದು ಮತ್ತು ಬದಲಾಯಿಸಬಹುದೆಂಬುದು', ವರ್ಜೀನಿಯಾ ವುಲ್ಫಳ ಅಭಿಪ್ರಾಯ. ಲಿಂಗತಾರತಮ್ಯವು ಪಿತೃಪ್ರಧಾನ ಕುಟುಂಬಗಳಲ್ಲಿ ಬಹು ಬೇಗ ಆರಂಭವಾಗುತ್ತದೆ ಎಂದು ಹೇಳಿದ ಅವಳು ತನ್ನ ಜನಪ್ರಿಯ ಕೃತಿ 'A Room of One's own' ನಲ್ಲಿಪುರುಷರು ಹೇಗೆ ಸಾಮಾಜಿಕವಾಗಿ ಮತ್ತು ಮಾನಸಿಕವಾಗಿ ಮಹಿಳೆಯರ ಮೇಲೆ ಆಧಿಪತ್ಯ ಸ್ಥಾಪಿಸುತ್ತಾರೆ. ಎಂಬುದನ್ನು ವಿವರಿಸುತ್ತಾಳೆ.

ಮಹಿಳೆಯರು 'ಕನ್ನಡಕವಿದ್ದಂತೆ.' ಪುರುಷರು ಮಹಿಳೆಯರನ್ನು ಬೇರೆಯವರಂತೆ ಭಾವಿಸುತ್ತಾರೆ ಮತ್ತು ಪುರುಷರು ತಮ್ಮನ್ನು ಹೇಗೆ ಕಾಣಬೇಕೆಂದು ಬಯಸುತ್ತಾರೋ ಆ ರೀತಿ ಪ್ರತಿಬಿಂಬಿಸುತ್ತಾರೆ ಎಂಬುದನ್ನು ವುಲ್ಫ್ ತನ್ನ

ಕೃತಿಯಲ್ಲಿ ಸೂಚಿಸುತ್ತಾಳೆ. ಈಕೆಯ ಸಾಮಾಜಿಕ ಮತ್ತು ಚಾರಿತ್ರಿಕ ಅಧ್ಯಯನಗಳ ವಿಶೇಷ ಆಸಕ್ತಿ ಅವಳ ಇನ್ನೊಂದು ಕೃತಿ 'Three Guineas' ನಲ್ಲಿ ವ್ಯಕ್ತವಾಗಿರುವುದಾಗಿ ಹೇಳಲಾಗುತ್ತದೆ.

ಶುಲಾಮಿತ್ ಫೈರ್‌ಸ್ಟನ್ ಅಮೇರಿಕೆಯ ತೀವ್ರವಾದಿ ಮಹಿಳಾ ಚಿಂತಕಿ, ಈಕೆ ತನ್ನ ಕೃತಿ "The Dailectics of Sex " ದಲ್ಲಿ ಮಹಿಳೆಯ ನಿರಂತರ ಶೋಷಣೆಗೆ ಜೀವಶಾಸ್ತ್ರೀಯ ನಿರ್ಧಾರಕ ವಿಶ್ಲೇಷಣೆಯೇ ಬಹುಮುಖ್ಯ ಕಾರಣವೆಂದು ವಾದಿಸುತ್ತಾಳೆ. ಹೆರಿಗೆಯಂತಹ ಸಹಜ ಕ್ರಿಯೆಯು ಸಾಮಾಜಿಕ ವರ್ಗೀಕರಣಕ್ಕೆ ಕಾರಣವಾಗಿದ್ದು, ಮಹಿಳೆಯ ಸಂತಾನೋತ್ಪತ್ತಿ ಕ್ರಿಯೆಯೇ ಆಕೆಯ ಪಾತ್ರವನ್ನು ನಿರ್ಧರಿಸುತ್ತದೆ. ಸ್ತ್ರೀ-ಪುರುಷರ ನಡುವೆ ಇರುವ ಜೈವಿಕ ಭಿನ್ನತೆಯೇ ಮೇಲು ಕೀಳುಗಳ ಮತ್ತು ಮಹಿಳೆಯರ ಮೇಲೆ ಪುರುಷರ ದಬ್ಬಾಳಿಕೆಗೆ ಕಾರಣವೆನ್ನುತ್ತಾಳೆ. ಸ್ತ್ರೀ-ಪುರುಷರ ನಡುವಿನ ವೈರ ದೈಹಿಕ ಭೇದದ ಕಾರಣಕ್ಕಾಗಿ ಹುಟ್ಟಿಕೊಂಡಿದ್ದು, ಅದು ವಿವಿಧ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಸ್ಥೆಗಳ ಮೂಲಕ ಅಭಿವ್ಯಕ್ತಿಸಲ್ಪಟ್ಟಿದೆ ಎಂಬುದನ್ನು ತೀಕ್ಷ್ಣವಾದ ತಾತ್ವಿಕ ಚಿಂತನೆಯ ಮೂಲಕ ಮಂಡಿಸುತ್ತಾಳೆ' ೨೫ ನಮ್ಮ ಪುರಾಣಕಾಲದ ಮನು 'ಸ್ತ್ರೀ ಸ್ವಾತಂತ್ರ್ಯಕೆ ಅನರ್ಹಳು' ಎಂದು ಸಾರಿದ, ಕ್ರಿ.ಪೂ.೫೦೦ ರ ಹೊತ್ತಿಗೆ ಗ್ರೀಕನಲ್ಲಿ ಆಲೋಚನಾ ಕ್ರಾಂತಿಯನ್ನೆಬ್ಬಿಸಿದ ಖ್ಯಾತ ಚಿಂತಕ ಪ್ಲೇಟೋ ''Oh god I thank Thee for making me a man, not a woman" ೨೬ ಎಂದು ಹೇಳುವ ಮೂಲಕ ಗಂಡನ್ನು ಶ್ರೇಷ್ಠೀಕರಿಸಿ ಹೆಣ್ಣನ್ನು ವಿಕೃತಿಗೊಳಿಸಿದ್ದಾನೆ.

ಸ್ತ್ರೀಯರ ಘನತೆಗೆ ಮಾರಕವಾದ ಲೈಂಗಿಕ ಪ್ರತ್ಯೇಕೀಕರಣದ ಉಗಮವನ್ನು ಸಿಮೋನ್ ಬೈಬಲ್ಲಿನ ''ಜೆನೆಸಿಸ್'' ನಲ್ಲೇ ಗುರುತಿಸುತ್ತಾಳೆ. ಅಲ್ಲಿ ಆಡಮ್‌ನ ಮೂಳೆಯಿಂದ ಈವ್ ಳನ್ನು ಸೃಷ್ಟಿಸಲಾಗಿದೆ''೨೭ ಈ ಧೋರಣೆ ಅರಿಸ್ಟಾಟಲ್‌ನಲ್ಲೂ ಕಾಣುತ್ತದೆ. ''ಹೆಣ್ಣು ಏಕೆ ಹೆಣ್ಣು ಅಂದರೆ ಆಕೆಗೆ ಕೆಲವು ಗುಣಗಳ ಕೊರತೆ ಇದೆ'' ಜತೆಗೆ ಹೆಣ್ಣು ಸಹಜವಾದ ದೋಷಗಳಿಂದ ಕೂಡಿದ್ದಾಳೆ ಎಂದು ನಾವು ಪರಿಗಣಿಸಬೇಕು''ಎಂದು ಹೇಳಿ ''ಹೆಣ್ಣು ಗುಲಾಮರ ಗುಂಪಿಗೆ ಸೇರಿದವಳು ಯಾವ ಸಾಮಾಜಿಕ ಸಮಾರಂಭಗಳಲ್ಲಿ ಭಾಗವಹಿಸಲು ಅನರ್ಹಳು''೨೮ ಎನ್ನುತ್ತಾನೆ.

೩. ಲಿಂಗಭೇದ ಸಮಸ್ಯೆಗೆ ಕಾರಣಗಳು:

೧. ಜೈವಿಕ ಕಾರಣಗಳು:

ಜಾಗತಿಕ ಸ್ತ್ರೀವಾದಿ ಎಚ್ಚರದ ಇತಿಹಾಸವನ್ನು ಕನಿಷ್ಟ ಕಾಲು ಶತಮಾನದ ಹಿಂದಕ್ಕೆ ಒಯ್ಯಬಹುದಾದರೂ ಭಾರತದಲ್ಲಿ ೧೯೭೫ರ ಮಹಿಳಾ ವರ್ಷದಿಂದ ಈಚೆಗೆ ಹೊಸ ಎಚ್ಚರವನ್ನು ಗುರುತಿಸಲಾಗುತ್ತದೆ. ಕರ್ನಾಟಕದ ಸಾಂಸ್ಕೃತಿಕ ವಲಯದಲ್ಲಿ ಈ ದನಿ ಸುಮಾರಿಗೆ, ಅಲ್ಲಿಂದಲೇ ಪ್ರಾರಂಭವಾದರೂ ಗಮನಾರ್ಹ ಪ್ರಮಾಣದಲ್ಲಿ ಕರ್ನಾಟಕದ ಕವಿಗಳು ಸ್ತ್ರೀವಾದಕ್ಕೆ ತೆರೆದುಕೊಳ್ಳುತ್ತಿರುವುದು. ಎಂಭತ್ತರ ದಶಕದಲ್ಲಿ ಎನ್ನಬೇಕು.

ಮಹಿಳೆಯ ಶೋಷಣೆಯು ಅವಳ ಮೇಲಿನ ನಿರ್ಬಂಧದ ಅವಳ ಜೀವನದ ಅಪಮೌಲ್ಯೀಕರಣದ ಬುನಾದಿಯಾಗಿ ಸಮಾಜ ಜೈವಿಕ ಸ್ವರೂಪವನ್ನು ಬಳಸಿಕೊಂಡಿತು. ಹೆಣ್ಣು-ಗಂಡಿನ ನಡುವಿನ ಜೈವಿಕ ವ್ಯತ್ಯಾಸ ಎಲ್ಲ ಲಿಂಗಾಧರಿತ ನೀತಿಯ ಮೂಲನೆಲೆ ಈ ಜೈವಿಕ ಭಿನ್ನತೆಯನ್ನು ಭಿನ್ನತೆಯಾಗಿ ಮಾತ್ರ ಸ್ವೀಕರಿಸಿದ್ದರೆ ಸಮಸ್ಯೆ ಏಳುತ್ತಿರಲಿಲ್ಲ. ಆದರೆ ಪುರುಷ ದೇಹವು ಸಾಮಾನ್ಯ ಮತ್ತು ಶ್ರೇಷ್ಠ ಎಂಬ ಕಲ್ಪನೆಯ ಹಿನ್ನೆಲೆಯಲ್ಲಿ ಭಿನ್ನತೆಯು ಕೀಳೆಂದು ಪರಿಗಣಿತವಾಯಿತು ಮತ್ತು ಆ ಮೂಲಕ ಸ್ತ್ರೀಯನ್ನು ಹಿಂದಕ್ಕೆ ತಳ್ಳಲು ಅದೊಂದು ನೆಪವಾಯಿತು. ಈ ಸ್ಥಿತಿಯನ್ನು ಹಾಗೇ ಮುಂದುವರೆಸಬಯಸುವವರು. ''ಅವಳ ದೇಹವೇ ಅವಳ ವಿಧಿ''ವಾವು ಅದನ್ನು ಬದಲಿಸಲಾಗದು ಎಂದರು.

ಲೈಂಗಿಕಕ್ರಿಯೆ ನಿಸರ್ಗಸಹಜವಾದುದು. ಮಾನವ ಜನಾಂಗ ಬದುಕಿ ಉಳಿಯಬೇಕಾದರೆ ಗಂಡು-ಹೆಣ್ಣು ಸಮಾಗಮ ಅವಶ್ಯ. ನಿಸರ್ಗ ಹೆಣ್ಣಿನ ಮೇಲೆ ಹೇರಿರುವ ಜವಾಬ್ದಾರಿ ಅಪಾರ. ಸಮಾಗಮದಿಂದ ಸೃಷ್ಟಿಗೊಂಡ ಪಿಂಡವನ್ನು ಹೊತ್ತು ಹೆತ್ತು ಸಾಕಿ ಸಲಹುವವಳು ಹೆಣ್ಣೇ. ಗರ್ಭ ಧರಿಸುವಿಕೆಯೂ ಒಂದು ಸಹಜಕ್ರಿಯೆ. ಇದರಿಂದ ಅವಳು ತಪ್ಪಿಸಿಕೊಳ್ಳುವಂತಿಲ್ಲ. ಈ ಗರ್ಭಧರಿಸುವಿಕೆಯೇ ಲಿಂಗಭೇದ ಸಮಸ್ಯೆಗಳಿಗೆ ಕಾರಣವಾಗಿದೆ.

ಗಂಡು-ಹೆಣ್ಣುಗಳ ಅಂಗರಚನೆಯ ಕುರಿತು ಮೊದಲಿನಿಂದಲೂ ಚರ್ಚೆ-ವಾದ ನಡೆದುಕೊಂಡೇ ಬಂದಿದೆ. ಈ ಸ್ತ್ರೀ-ಪುರುಷರ ನಡುವಣ ಶಾರೀರಿಕ ವ್ಯತ್ಯಾಸಗಳೇ ಲಿಂಗಭೇದಕ್ಕೆ ಕಾರಣ ಮೂಲವಾಗಿವೆ. ಶಾರೀರಿಕ ಲಕ್ಷಣಗಳಿಗನುಗುಣವಾಗಿ ಗಂಡು-ಹೆಣ್ಣುಗಳ ಕರ್ತವ್ಯ ನಿರ್ಧಾರಗೊಂಡಿವೆಯೆಂಬ ಅಭಿಪ್ರಾಯವಿದೆ. ''ಆತ್ಮಕ್ಕೆ ಲಿಂಗವಿಲ್ಲವೆನ್ನುವಂತೆ, ಜೀವಕ್ಕೂ ಲಿಂಗವಿಲ್ಲ; ಗಂಡಸರಲ್ಲಿರುವ ಜೀವಧಾತುಗಳ ಸ್ವರೂಪದಲ್ಲಿ ಲಿಂಗವನ್ನುಳಿದ ಅಂಗಾಂಗಗಳ ರಚನೆಯಲ್ಲಂತೂ, ಏನೇನೂ ವ್ಯತ್ಯಾಸವಿಲ್ಲ. ಆಹಾರ-ಪಾನೀಯಗಳಲ್ಲಿ ಔಷಧೋಪಚಾರಗಳಲ್ಲಿ ಅವರು ಸಮಾನ ಧರ್ಮಿಗಳಾಗಿದ್ದಾರೆ. ಪುರುಷ ಸಬಲ, ಸ್ತ್ರೀ ದುರ್ಬಲೆಯೆಂಬ ಭಾವನೆ ಸಹ ತಪ್ಪೆಂದು ವೈದ್ಯ ವಿಜ್ಞಾನ ಸಾರುತ್ತದೆ.[೧೯] ''ಪುರುಷರ ಜೈವಿಕ ರಚನೆ 'ಪುರುಷತ್ವ'ವನ್ನು ಸೃಷ್ಟಿಸಿದರೆ, ಸ್ತ್ರೀಯರ ಜೈವಿಕ ರಚನೆ ಸ್ತ್ರೀತ್ವವನ್ನು ಸೃಷ್ಟಿಸುತ್ತದೆ' ಎಂಬ ವಾದ ಹುರುಳಿಲ್ಲದ್ದು, ಏಕೆಂದರೆ 'ಪುರುಷತ್ವ' ಸ್ತ್ರೀತ್ವ ಪರಿಕಲ್ಪನೆಗಳು ಮಾನಸಿಕ ಸ್ಥಿತಿಗಳೇ ಹೊರತು, ಸಾರ್ವತ್ರಿಕ ವಾಸ್ತವಗಳಲ್ಲ''[೨೦] ವೆಂದು, ಸ್ತ್ರೀವಾದಿಗಳು ತಿರಸ್ಕರಿಸುತ್ತಾರೆ.

೨. ಸಾಮಾಜಿಕ ಕಾರಣಗಳು:

ಶತಶತಮಾನಗಳಿಂದ ಆಳವಾಗಿ ಬೇರುಬಿಟ್ಟ ಜಡಸಂಪ್ರದಾಯಗಳು ಹಾಗೂ ಮನು ಕುಲಕ್ಕೆ ಕಳಂಕ ತರುವಂತಹ ಅಸಹ್ಯ ಕೃತ್ಯಗಳು ಭಾರತೀಯ ಸಮಾಜವನ್ನು ಬೆಂಬಿಡದೇ ಕಾಡುತ್ತಲಿವೆ. ಇವು ಹೆಚ್ಚಾಗಿ ಮಹಿಳೆಯರನ್ನೇ ಬಲಿಪಶುವನ್ನಾಗಿಸಿರುವುದು ಒಂದು ದುರಂತ. ಹೆಣ್ಣು ಹುಟ್ಟಿನಿಂದ ಸಾವಿನವರೆಗೆ ಅಷ್ಟೇ ಅಲ್ಲ, ಹುಟ್ಟಿಗಿಂತ ಮೊದಲಿನಿಂದಲೂ ಇಂಥ ಭೇದಭಾವಕ್ಕೆ, ತಾರತಮ್ಯದ ಅನ್ಯಾಯಕ್ಕೆ, ಒಳಗಾಗುತ್ತಲೇ ಇದ್ದಾಳೆ. ಜೀವನ ಚಕ್ರದಲ್ಲಿ ಜನನಕ್ಕಿಂತ ಪೂರ್ವದಲ್ಲಿಯೇ ಭ್ರೂಣ ಪರೀಕ್ಷೆಯ ಮುಖಾಂತರ ಲಿಂಗಭೇದ ಪ್ರಾರಂಭವಾಗುತ್ತದೆ.

ಲಿಂಗಭೇದವು ಬೀಜಾಂಕುರಗೊಳ್ಳುವುದು ಕುಟುಂಬದಲ್ಲಿಯೇ. ಮಕ್ಕಳ ಮನಸ್ಸಿನಲ್ಲಿ ಬಾಲ್ಯದಲ್ಲಿಯೇ ಈ ಬೀಜಗಳು ಬಿತ್ತಲ್ಪಡುತ್ತವೆ. ಕುಟುಂಬದಲ್ಲಿ ಮಗ - ಮಗಳು ಎಂಬ ತಾರತಮ್ಯ ಆಹಾರ, ಆರೋಗ್ಯ, ಬಟ್ಟೆ, ಶಿಕ್ಷಣ, ವರ್ತನೆಗಳು ಮುಂತಾದುವುಗಳಲ್ಲಿ ಮೂಡಿಬರುತ್ತದೆ. ''ನಮ್ಮ ಸಮಾಜ ವ್ಯವಸ್ಥೆ ಬಾಲಕರು ತಂದೆಯ ಹಾಗೂ ಬಾಲಕಿಯರು ತಾಯಿಯ ಪಡಿಯಚ್ಚಿನಲ್ಲಿ ವ್ಯಕ್ತಿತ್ವ ರೂಪಿಸಿಕೊಳ್ಳಬೇಕೆಂಬುದನ್ನು ನಿರೀಕ್ಷಿಸುತ್ತದೆ. ಹೆಣ್ಣುಮಕ್ಕಳು

ಗಂಡಿನಂತೆ ವೇಷಭೂಷಣ ಹಾಕಿದರೆ, ಧೈರ್ಯವಾಗಿ ಗಂಡಸಿನೊಡನೆ ಮಾತನಾಡಿದರೆ, ಓಡಾಡಿದರೆ, ಸ್ಪರ್ಧಾಮನೋಭಾವವನ್ನು ಪ್ರಕಟಿಸಿದರೆ ಅಥವಾ ತನ್ನ ಸ್ವಂತಿಕೆಯನ್ನು ಪ್ರದರ್ಶಿಸಲು ಯತ್ನಿಸಿದರೆ ಆಕೆಯನ್ನು ಸಂಶಯ ಮತ್ತು ಕ್ರೂರದೃಷ್ಟಿಯಿಂದ ನೋಡಲಾಗುತ್ತದೆ; ಗಂಡುಬೀರಿ ಇತ್ಯಾದಿ ಬಿರುದುಗಳನ್ನು ದಯ-ಪಾಲಿಸುತ್ತದೆ''೩೧ ಕಾಲಪ್ರಭಾವದಂತೆ ಹೆಣ್ಣು ಹೆತ್ತವರು, ಅವರು ಮುಂದೆ ತಗ್ಗಿ-ಬಗ್ಗಿ ನಡೆಯಬೇಕೆಂದು ಅವರಿಗೆ ಕೆಲವು ಅಂಕೆ-ಶಿಕ್ಷೆಗಳನ್ನು ವಿಧಿಸಿಕೊಂಡೆ ಬಂದರು ಬಾಗಿಲಲ್ಲಿ ನಿಲ್ಲಬೇಡ, ಹೊರಗೆ ಹೋಗಬೇಡ, ಒಬ್ಬಳೇ ತಿರುಗಬೇಡ ಇಂತಹ ಮಾತುಗಳ ಜೊತೆಗೆ ದೊಡ್ಡವರಿಗೆ ಎದುರಾಡಬೇಡ, ಗಂಡನೇ ದೇವರೆಂದು ತಿಳಿ ಮುಂತಾದ ಇಂಥ ಉಪದೇಶಗಳ ಮೂಲಕ ಅವಳ ಮನಸ್ಸನ್ನು ಒಂದು ಹದಕ್ಕೆ ತರುವುದು ನಿತ್ಯಪಾಠ.

ಮಹಿಳೆಯರ ಅಸಮರ್ಥತೆಗೆ ಕಾರಣಗಳೂ ಹಲವಾದರೂ ಅವರ ಸಾಮಾಜೀಕರಣ ಮತ್ತು ಅವರ ಮೇಲೆ ಕಾಲಕಾಲಕ್ಕೆ ಹೇರಲಾದ ಸಾಮಾಜಿಕ ನಿಬಂಧನೆಗಳು ಹೆಚ್ಚು ಕಾರಣವಾಗಿವೆ. ವೇದಕಾಲದಿಂದಲೂ ಪಿತೃಪ್ರಧಾನವಾದ ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ಮಹಿಳೆಯರನ್ನು ಪುರುಷನ ಪೂರಕ ಪಾತ್ರಗಳಲ್ಲಿಯೇ ಇಟ್ಟು ಅವರಿಂದ ಅಸಾಧ್ಯವಾದ ಸದ್ಗುಣಗಳನ್ನು ಅಪೇಕ್ಷಿಸಿ ದ್ವಂದ್ವ ನೀತಿ, ಮೌಲ್ಯಗಳ ಅಡಕೊತ್ತಿನಲ್ಲಿ ಸಿಕ್ಕಿಸಿವೆ. ಈ ಮೌಲ್ಯಗಳಿಂದಲೇ ಮಹಿಳೆಯರು ಆದರ್ಶಣೀಯರಾಗಬಲ್ಲರೆಂಬ ಖಚಿತ ಕಲ್ಪನೆಯನ್ನು ಅವರಲ್ಲಿ ಬೆಳೆಸಿದ್ದನ್ನು ನಾವಿಂದು ಕಾಣುತ್ತೇವೆ.

೩. ಧಾರ್ಮಿಕ ಕಾರಣಗಳು:

ಒಂದು ಸಮಾಜದ ರಚನೆ ಹಾಗೂ ಮತ ಧರ್ಮಗಳ ನಡುವಣ ಸಂಬಂಧ ಅತ್ಯಂತ ಜಟಿಲವಾದದ್ದು. ಸಮಾನತೆಯನ್ನು ಪ್ರತಿಪಾದಿಸುವ, ಸಮಾಜವೊಂದು ಅತ್ಯಂತ ಸಂಕೀರ್ಣವಾಗಿರುವ ಮತ ಧರ್ಮದ ವಿವಿಧ ಸ್ತರಗಳಿಗೆ ಪೋಷಕವಾದ ವಾತಾವರಣ ನೀಡುತ್ತದೆಂದು ಊಹಿಸಲು ಸಾಧ್ಯವಿಲ್ಲ. ಇಲ್ಲಿನ ಸಮಾಜ ರಚನೆಯು ಮುಖ್ಯ. ನಾಡಿಗೆ ಅನುಸಾರವಾಗಿ ಇಲ್ಲಿನ ಮತ ಧರ್ಮಗಳೂ ಪುರುಷಪ್ರಧಾನ ಲಕ್ಷಣವನ್ನೇ ಹೊಂದಿವೆ; ಸೈದ್ಧಾಂತಿಕವಾಗಿಯೂ, ರೂಢಿಗತವಾಗಿಯೂ ಸ್ತ್ರೀಗಿಂತ ಪುರುಷ ಮೇಲೆಂದು ಒತ್ತಿ ಹೇಳುತ್ತವೆ.

"ಹಿಂದೂ ಧರ್ಮದ ಪ್ರಕಾರ ಸ್ತ್ರೀ ವೇದಾಧ್ಯಯನ ಮಾಡುವಂತಿಲ್ಲ. ಯಾವುದೇ ತರಹದ ಧರ್ಮ ಕಾರ್ಯಗಳನ್ನು ಕೈಗೊಳ್ಳುವಂತಿಲ್ಲ, ಜಾತಿಸ್ತರದಲ್ಲಿ ಆಕೆಯ ಸ್ಥಾನ ಶೂದ್ರ ಸಮಾನ, ಅದರಂತೆ ಸ್ತ್ರೀ ಪಾಪಯೋನಿಯೆಂದೇ ಕರೆಸಿಕೊಳ್ಳುವವಳು"೩೨ ಇಂಥ ಕಲ್ಪನೆಗಳು ಸ್ತ್ರೀಯನ್ನು ಅತ್ಯಂತ ಕೆಳಮಟ್ಟಕ್ಕೊಯ್ಯುವ, ಪುರುಷನನ್ನು ವಿಜೃಂಭಿಸಿವೆ.

ಇಸ್ಲಾಂ ಧರ್ಮ ಮಹಿಳೆಯರ ಬಗೆಗೆ ಉದಾರವಾದ ನಿಲುವನ್ನು ತಳೆದಿದೆ . ಧರ್ಮ ಮಹಿಳೆಯರಿಗೆ ನ್ಯಾಯಬದ್ಧ ಸ್ಥಾನ ಹಾಗೂ ಹಕ್ಕುಗಳನ್ನು ನೀಡಿದೆ. ದೇವರೆದುರು ಹೆಣ್ಣುಗಂಡೆಂಬ ಭೇದವಿಲ್ಲ ಎಂದು ಇಸ್ಲಾಂ ಬೋಧಿಸುತ್ತದೆ. ಮಹಮ್ಮದ ಪೈಗಂಬರರು ಪುರುಷರನ್ನುದ್ದೇಶಿಸಿ ಹೆಣ್ಣು ಮಕ್ಕಳನ್ನು ಗೌರವದಿಂದ ಕಾಣಿರಿ ಎಂದು ದೇವರು ನಿಮಗೆ ಆದೇಶ ಮಾಡಿದ್ದಾನೆ. ಯಾಕೆಂದರೆ ಅಕೆ ನಿಮ್ಮ ತಾಯಿ , ಮಗಳು ,ಸೋದರಿಯಾಗಿದ್ದಾಳೆ (೩೩)ಎಂಬ ಮಾತು ಮಹಿಳೆಯರ ಬಗೆಗೆ ಅವರಲ್ಲಿದ್ದ ಗೌರವದ ದ್ಯೋತಕವಾಗಿದೆ. ಮೂಲಭೂತವಾದಿಗಳ ತಪ್ಪು ಕಲ್ಪನೆಗಳಿಂದ ನಂತರ ಮುಸ್ಲಿಂ ಮಹಿಳೆಯರ ಬದುಕು ತುಂಬಾ ನಿಕೃಷ್ಟವಾಗಿದೆ. ಸ್ತ್ರೀಯರು ಸಭ್ಯತೆಯಿಂದ , ಶಿಷ್ಟಾಚಾರದಿಂದ ಇರಬೇಕೆಂಬ ಕುರಾನಿನ ನುಡಿಯನ್ನು ಗಂಡಸರಲ್ಲಿ ಏಕಾಂತವಾಗಿ , ಪ್ರತ್ಯೇಕವಾಗಿ ಇರಬೇಕು ಎಂದು ಅರ್ಥೈಸಲಾಯಿತು. ಮುಸ್ಲಿಂ ಮಹಿಳೆಯ ಘೋಷಾ ಪದ್ಧತಿ ಇಂದಿಗೂ ಇದರ ಸಂಕೇತವಾಗಿದೆ. ಘೋಷಾ ಬಂಧನದಲ್ಲಿದ್ದ ಸ್ತ್ರೀಗೆ ತನ್ನ ಸ್ವಂತ ಹಕ್ಕುಗಳ ಗೋಚರವೇ ಇಲ್ಲ . ಗಂಡಸರನ್ನು , ಪುರುಷರ ಆಧಾರವಿಲ್ಲದೇ ತಮ್ಮ ಅಸ್ತಿತ್ವವನ್ನು ಸಾಧಿಸಲಾರದ ಅಸಹಾಯಕ ಜೀವಿಗಳ ಮಟ್ಟಕ್ಕೆ ಇಳಿಸಲಾಗಿದೆ.

ಕ್ರೈಸ್ತ ಧರ್ಮ ಸ್ತ್ರೀಪುರುಷರ ಮಧ್ಯ ಯಾವುದೇ ಭೇದ ತೋರದೇ ಸಮಾನತೆಯನ್ನು ಪ್ರತಿಪಾದಿಸುತ್ತದೆ. ಕ್ರೈಸ್ತ ಮಹಿಳೆಯರು ತಮ್ಮ ವ್ಯಕ್ತಿತ್ವ ರೂಪಿಸಿಕೊಳ್ಳಲು ಸಂಪೂರ್ಣ ಸ್ವಾತಂತ್ರ್ಯವಿದೆ. ಜೈನ ಧರ್ಮದಲ್ಲಿ ಸ್ತ್ರೀ ಮುಕ್ತಿ ಸಾಧನೆಗೆ ಅರ್ಹಳಾದರೂ , ಧರ್ಮ ಗ್ರಂಥಗಳಲ್ಲಿ ಹೆಣ್ಣನ್ನು ಪುರುಷನನ್ನು ಅಧಃಪತನದತ್ತ ಎಳೆಯುವ ಮೋಹಿನಿ

ಎಂದಿದ್ದಾರೆ ಬೌದ್ಧ ಧರ್ಮದಲ್ಲಿ ಹೆಣ್ಣು ಮುಕ್ತಿಮಾರ್ಗದಲ್ಲಿ ವಿಘ್ನಕಾರಿ ಎಂದು ಚಿತ್ರಿಲಾಗಿದೆ. ಸಾಂಸಾರಿಕ ಜೀವನದಲ್ಲಿಯೂ ಸ್ತ್ರೀ ಪುರುಷರಿಗಿಂತಲೂ ಕೀಳೆಂದೇ ಪರಿಭಾವಿಸಲ್ಪಟ್ಟಿದ್ದಾಳೆ.

ಒಟ್ಟಾರೆಯಾಗಿ ಕ್ರೈಸ್ತ ಧರ್ಮ ಒಂದನ್ನು ಹೊರತು ಪಡಿಸಿ ಉಳಿದೆಲ್ಲ ಧರ್ಮಗಳು ಮಹಿಳೆಯ ಬದುಕನ್ನು ಶೋಚನೀಯ ಮಟ್ಟಕ್ಕೆ ಇಳಿಸಿವೆ. ಪುರುಷನನ್ನೇ ಪ್ರಧಾನ್ಯಾಗಿಸಿವೆ.

೪. ರಾಜಕೀಯ ಕಾರಣಗಳು:

ಸಾಮಾಜಿಕ ಧಾರ್ಮಿಕ ರಂಗದಲ್ಲಿ ಸ್ತ್ರೀಯನ್ನು ನೇಪಥ್ಯಕ್ಕೆ ಸರಿಸಿದ ಪುರುಷ ಪ್ರಧಾನ ಸಮಾಜ ರಾಜಕೀಯ ಕ್ಷೇತ್ರದಲ್ಲೂ ಸ್ತ್ರೀಯನ್ನು ಕಡೆಗಣಿಸಲಾಗಿದೆ. ಸಮಾಜದ ಕೌಟುಂಬಿಕ ಚೌಕಟ್ಟಿನಲ್ಲಿ ಬಂಧಿತರಾಗಿರುವ ಹಿನ್ನೆಲೆಯಲ್ಲಿ ಮಹಿಳೆಯರು ನೇರವಾಗಿ ರಾಜಕೀಯ ಕ್ಷೇತ್ರದಲ್ಲಿ ನಾಯಕತ್ವದ ಮಟ್ಟದಲ್ಲಿ ಬರಲು ಸಾಧ್ಯವಾಗದಂತೆ ಮಾಡಲಾಗಿದೆ. ಈ ಹಿನ್ನೆಲೆಯಲ್ಲಿ ರಾಜಕೀಯ ಕ್ಷೇತ್ರದಲ್ಲಿ ಮಹಿಳೆಯರು ಹೆಚ್ಚು ಸಂಖ್ಯೆಯಲ್ಲಿ ಆಸಕ್ತ ಇಲ್ಲ. ಎಂಬುದಲ್ಲ; ಅರ್ಹತೆ ಇಲ್ಲ ಎಂಬ ವಾದವೂ ಸರಿಯಲ್ಲ.

''ಸ್ತ್ರೀ-ಪುರುಷನಷ್ಟೇ ದೈಹಿಕವಾಗಿ, ಮಾನಸಿಕವಾಗಿ ಸಮರ್ಥಳು. ಆತನು ಕೈಗೊಳ್ಳುವ ಸಾಹಸ, ಕ್ರೀಡೆ ಬರವಣಗೆ, ಅಧ್ಯಯನ ಪ್ರಯೋಗ, ಅನ್ವೇಷಣೆಯಂತೆ ರಾಜಕೀಯವನ್ನು ಅವಳೂ ಅಷ್ಟೇ ಸಮರ್ಪಕವಾಗಿ ನಿರ್ವಹಿಸಬಲ್ಲಳು'' ೩೪ ಎಂದು ಬಾರಿ ಬಾರಿಗೂ ವಿಜ್ಞಾನ ಮನೋವಿಜ್ಞಾನ-ಪುಸ್ತಕಗಳಲ್ಲಿ ಬರೆಯಲಾಗಿದ್ದರೂ ಸೃಷ್ಟಿಯ ಆದಿಯಿಂದ ಪ್ರಾಬಲ್ಯ ಸಾಧಿಸುತ್ತಾ ಬಂದ ಗಂಡುಕುಲಕ್ಕೆ ಅದನ್ನೆಲ್ಲ ಒಪ್ಪಿಕೊಳ್ಳಲು ಸಾಧ್ಯವೇ ಆಗಿಲ್ಲ ಅಥವಾ ಒಪ್ಪಿಕೊಳ್ಳಲು ತಯಾರಿಲ್ಲ.

ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅನೇಕ ಮಹಿಳೆಯರು ಮಹತ್ತರವಾದ ಪಾತ್ರ ವಹಿಸಿದ್ದರೂ, ಅವರಿಗೆ ದೇಶದ ರಾಜಕೀಯ ಭವಿಷ್ಯವನ್ನು ರೂಪಿಸುವುದರಲ್ಲಿ ಯಾವುದೇ ಸ್ಥಾನವನ್ನು ನೀಡಲಿಲ್ಲ. ''ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ಮಹಿಳೆಯರನ್ನು ಹುರಿದುಂಬಿಸಿದ ಮಹಾತ್ಮಾಗಾಂಧೀಜಿಯವರೂ ಕೂಡಾ ಸ್ವಾತಂತ್ರ್ಯ

ದೊರೆತ ನಂತರ ಸಕ್ರಿಯ ರಾಜಕೀಯದಲ್ಲಿ ಮಹಿಳೆಯರು ಭಾಗವಹಿಸಬೇಕೆಂಬ ನಿಲುವನ್ನು ತಳೆಯಲಿಲ್ಲ''. ೩೫ ಅದಕ್ಕೆ ಬದಲಾಗಿ ''ಸ್ತ್ರೀ ಗಂಡಸಿನೊಂದಿಗೆ ಪೈಪೋಟಿ ನಡೆಸಿ ಪ್ರಪಂಚದ ಉನ್ನತಿಗೆ ತನ್ನ ಸೇವೆ ಸಲ್ಲಿಸಬಲ್ಲಳೆಂದು ನಾನು ಒಪ್ಪುವುದಿಲ್ಲ. ಹೆಂಗಸು ಗಂಡಸಿಗೆ ಪೂರಕವಾಗಿರಬೇಕು''೩೬ ಎಂಬುದು ಗಾಂಧೀಜಿಯ ವಿಚಾರವಾಗಿತ್ತು. ಅದರ ಜೊತೆಗೆ ಮಹಿಳೆ ನಿಸ್ಪರ್ಧತೆಯ ಸಾಕಾರ ಮೂರ್ತಿಯಾಗಿ ರಾಜಕೀಯ ವ್ಯವಸ್ಥೆಯ ಶುದ್ಧೀಕರಣ ಮಾಡಬೇಕೆಂಬುದು ಅವರ ಅಭಿಪ್ರಾಯವಾಗಿತ್ತೇ ಹೊರತು ದೇಶದ ರಾಜಕೀಯ ಚುಕ್ಕಾಣಿ ಹಿಡಿಯಬೇಕೆಂದಲ್ಲ. ಅಂದಿನಿಂದ ಇಂದಿನವರೆಗೂ ಮಹಿಳೆಯರನ್ನು ಕುರಿತು ಈ ನಕಾರಾತ್ಮಕ ದೃಷ್ಟಿಕೋನ ಹಾಗೆ ಮುಂದುವರಿದು ಕೊಂಡು ಬಂದಿದ್ದು, ರಾಜಕೀಯ ಪಕ್ಷ ಲಿಂಗ ಸಮಾನತೆಯನ್ನು ಕುರಿತಂತೆ ಹೊಂದಿರುವ ತಟಸ್ಥ ನಿಲುವಿಗೆ ಸಾಕ್ಷಿಯಾಗಿದೆ. ಝಾನ್ಸಿರಾಣಿ ಲಕ್ಷ್ಮೀ-ಬಾಯಿ, ಚಾಂದಬೀಬಿ, ಕಿತ್ತೂರು ಚೆನ್ನಮ್ಮ, ಮಲ್ಲಮ್ಮಾಜಿ, ಕೆಳದಿ ಚೆನ್ನಮ್ಮ. ಮುಂತಾದವರು ಪುರುಷರಂತೆ, ಅಧಿಕಾರ ನಡೆಸಿದ್ದನ್ನು ಪುರುಷ ವರ್ಗ ಗಮನಿಸದಿರುವುದು ದುರಂತದ ಸಂಗತಿ.

ಮಹಿಳೆಯರು ರಾಜಕೀಯ ರಂಗದಲ್ಲಿ ಹಿಂದುಳಿದಿರಲು ನಮ್ಮ ಸಮಾಜದಲ್ಲಿ ಆಳವಾಗಿ ಬೇರೂರಿರುವ ಪುರುಷ ಪ್ರಧಾನ ವ್ಯವಸ್ಥೆಯೇ ಮೂಲಕಾರಣವಾಗಿದೆ. ಸ್ತ್ರೀ ಪುರುಷರ ನಡುವಿನ ಜೈವಿಕ ವ್ಯತ್ಯಾಸಗಳನ್ನೇ ಕಾರಣವಾಗಿಸಿಕೊಂಡು ಈ ವ್ಯತ್ಯಾಸಗಳೇ ಮಹಿಳೆಯರ ಸಾಮರ್ಥ್ಯ ಮತ್ತು ಶಕ್ತಿಗಳಲ್ಲೂ ಭಿನ್ನತೆಯನ್ನು ತರುತ್ತವೆ. ಅಲ್ಲದೆ ಅವರ ಸಾಮರ್ಥ್ಯಕ್ಕೆ ಕುರಿತಂತೆ ಇಲ್ಲ-ಸಲ್ಲದ ಅನುಮಾನಗಳನ್ನು ಸೃಷ್ಟಿಸಿ ಮಹಿಳೆಯರಿಗೆ ಅಧಿಕಾರ ಚಲಾಯಿಸುವ ಶಕ್ತಿಯಿಲ್ಲ'ಎನ್ನುವ ಮಿಥ್ಯವನ್ನು ಹರಡುತ್ತಲಿವೆ. ಅಲ್ಲದೆ ಈ ಪುರುಷ ಪ್ರಧಾನ ವ್ಯವಸ್ಥೆ ತನ್ನ ಪಟ್ಟಭದ್ರ ಹಿತಾಸಕ್ತಿಯನ್ನು ನಿರಂತರವಾಗಿ ಉಳಿಸಿಕೊಂಡೇ ಬರುತ್ತದೆ.

ಇತ್ತೀಚೆಗೆ ಮಹಿಳೆಯರಿಗೂ ರಾಜಕೀಯ ರಂಗದಲ್ಲಿ ಅವಕಾಶ ಒದಗಿಸಲು ಮೀಸಲಾತಿಯ ಕುರಿತು ವ್ಯಾಪಕವಾದ ಚರ್ಚೆ ನಡೆಯುತ್ತದೆ. ಸರ್ಕಾರ ಈ ನಿಟ್ಟಿನಲ್ಲಿ ತಳೆದಿರುವ ನಿಲುವು ಸ್ವಾಗತಾರ್ಹವಾದುದು. ಮಹಿಳೆಯ ಪಾಲಿಗೆ ಇದೊಂದು ಆಶಾದಾಯಕ ಬೆಳವಣಿಗೆಯಾಗಿದೆ. ಆದರೂ ಮಹಿಳೆ ತನ್ನ ಹಕ್ಕಿಗಾಗಿ ಹೋರಾಟ ನಡೆಸುತ್ತಾ ಬಂದದ್ದು ವಿಪರ್ಯಾಸ. ಪ್ರಪಂಚಾದ್ಯಂತ ಇಂಥ ಪ್ರಕ್ರಿಯೆ ನಡೆಯುತ್ತಲೇ ಬಂದಿದೆ.

ಅಡಿಟಿಪ್ಪಣಿಗಳು:

೧	ಸಂ. ಲಕ್ಷ್ಮಣ ತೆಲಗಾವಿ	ಸಂಶೋಧನ	೧೫೪
೨	David Crystal	The oambridge Enoyolopeadia	೪೮೬
೩	Borbora Dinne Miller	Sex and Gender Hierarohies	೪
೪	Enoyolopaedia of Religion Vol-9		೩೪೬
೫	ಪ್ರೊ. ಸಂ. ಬರಗೂರು ರಾಮಚಂದ್ರಪ್ಪ	ಸ್ತ್ರೀ ಸಂವೇದನೆಯ ಸ್ವರೂಪ	೯೯
೬	ಚಕ್ಕಕೋಡಿ ಈಶ್ವರಶಾಸ್ತ್ರಿ	ಮನುಸ್ಮೃತಿ	೩೯೮
೭	ಡಾ. ಆರ್ಕೆ. ಮಣಿಪಾಲ	ಸಾಹಿತ್ಯ ಸಿದ್ಧಾಂತ ಕೋಶ	೧೦
೮	ಸಂ. ಚಂದ್ರಶೇಖರ ಪಾಟೀಲ	ಸಂಕ್ರಮಣ ಸಾಹಿತ್ಯ ಸಂಪುಟ-೩	೧೧೨
೯	ಡಾ. ಬಿ.ವಿ. ಜವಳಿ	ಹರಿಹರ ಕವಿಯ ಸ್ತ್ರೀಪಾತ್ರ ದರ್ಶನ	೪೨
೧೦	ವಾಗೀಶ್ವರಿ ಶಾಸ್ತ್ರಿ	ಹಿಂದೂಸ್ತ್ರೀ ಚರಿತೆಯಿಂದ ಚಿಂತೆಗೆ	೧೨೩
೧೧	ಅದೇ ''	''	೧೨೯
೧೨	ಸಂ. ಡಾ. ವೀಣಾ ಶಾಂತೇಶ್ವರ	ಮಹಿಳಾ ಅಧ್ಯಯನ	೧೩೭
೧೩	ಅದೇ ''	''	೧೨೭
೧೪	ಡಾ. ಬಸವರಾಜ ಸಬರದ-	ಬಸವೇಶ್ವರ ಮತ್ತು ಪುರಂದರದಾಸ ಒಂದು ಸಾಹಿತ್ಯಕ ಅಧ್ಯಯನ	೨೬೦
೧೫	ಸಂ. ಡಾ. ಎಲ್ ಬಸವರಾಜ	ದೇವರ ದಾಸಿಮಯ್ಯನ ವಚನಗಳು	೩೫
೧೬	ಸಂ. ಡಾ. ವೀಣಾ ಶಾಂತೇಶ್ವರ -	ಮಹಿಳಾ ಅಧ್ಯಯನ	೧೩೪
೧೭	ಅದೇ ''	''	''
೧೮	ಶಾಂತಾದೇವಿ ಮಾಳವಾಡ	ಸಾರ್ವಜನಿಕ ರಂಗದಲ್ಲಿ ಮಹಿಳೆ	೯

೧೯	ಸಂ.ಡಾ.ಹಂಪ,ಡಾ.ಬಿರಾದಾರ, ಡಾ.ಲತ್ತ	ಶರದೇಶಿ-ಸಾಗೇಶಿ,	ಪ್ರಸ್ತಾವನೆ
೨೦	ಪ್ರ.ಸಂ.ಬರಗೂರು ರಾಮಚಂದ್ರಪ್ಪ	ಕನ್ನಡ ಸಾಹಿತ್ಯ ಮತ್ತು ಸ್ತ್ರೀವಾದಿ ಚಿಂತನೆ	೨
೨೧	ಸಂ.ದಾ.ಬಿ.ಎನ್.ಸುಮಿತ್ರಾಬಾಯಿ, ಎನ್.ಗಾಯತ್ರಿ	ಸ್ತ್ರೀವಾದಿ ಪ್ರವೇಶಿಕೆ	೧೨
೨೨	ಸಂ.ಎನ್.ಮನುಚಕ್ರವರ್ತಿ	ಭಾರತೀಯ ಸ್ತ್ರೀವಾದ	೨
೨೩	ಸಂ.ಡಾ.ವೀಣಾ ಶಾಂತೇಶ್ವರ	ಮಹಿಳಾ ಅಧ್ಯಯನ	೬೫
೨೪	ಸಂ.ಡಾ.ಬಿ.ಎನ್.ಸುಮಿತ್ರಾಬಾಯಿ ಎನ್.ಗಾಯತ್ರಿ.	ಸ್ತ್ರೀವಾದಿ ಪ್ರವೇಶಿಕೆ	೧೫
೨೫	ಅದೇ "	" "	೨೪-೨೫
೨೬	ಸಂ.ಶ್ರೀನಿವಾಸ	ಕೂಡ್ರ ಮಾ.ಪ.ಸಂಚಿಕೆ ೧೧-೧೨	ಆಗಸ್ಟ್-ಸಪ್ಟೆಂಬರ
೨೭	ಸಂ. ಎನ್ ಮನುಚಕ್ರವರ್ತಿ	ಭಾರತೀಯ ಸ್ತ್ರೀವಾದ	೨
೨೮	ಸಂ. ಶ್ರೀನಿವಾಸ	ಕೂಡ್ರ ಮಾಸ ಪತ್ರಿಕೆ ಸಂಚಿಕೆ ೧೧-೧	ಆಗಸ್ಟ್-ಸಪ್ಟೆಂಬರ
೨೯	ಶಾಂತಾದೇವಿ ಮಾಳವಾಡ	ಸಾರ್ವಜನಿ ರಂಗದಲ್ಲಿ ಮಹಿಳೆ	೨
೩೦	ಆರ್-ಇಂದಿರಾ	ಸ್ತ್ರೀವಾದ ದಿಕ್ಸೂಚಿ-	೮
೩೧	ಡಾ.ಆರ್.ಮಂಗಳಾ	ಸಾಹಿತ್ಯ ಸಿದ್ಧಾಂತ ಮತ್ತು ಹೋರಾಟ	೧೫
೩೨	ವೈದೇಹಿ-ಅಮ.	ಬೆಳ್ಳಿಹೊಕ್ಕೋಲಗಳು	೨೨
೩೩	ಶಾಂತಾದೇವಿ-ಮಾಳವಾಡ-	ಸಾರ್ವಜನಿಕ ಕಣದಲ್ಲಿ ಮಹಿಳೆ	೬೩
೩೪	ಹಾರಪತ್ರಿಕೆ	ಜೂನ್-೨೯,ಜುಲೈ-೫	A
೩೫	ಮಾನಸ ಪತ್ರಿಕೆ	ಫೆಬ್ರವರಿಮಾರ್ಚ್	೧೯
೩೬	ಶಿವಚಂದ್ರ	ಲೇಖನ ಗೌರವ	೯೩

ಅಧ್ಯಾಯ- ಮೂರು

ನವ್ಯೋತ್ತರ ಕಾದಂಬರಿಗಳಲ್ಲಿ ಲಿಂಗಭೇದ ಸಮಸ್ಯೆಯ ಸ್ವರೂಪ

ಜಗತ್ತಿನ ಯಾವುದೇ ಸಾಹಿತ್ಯದಲ್ಲಿ ಪ್ರಶ್ನೆ ಜನ್ಮ ತಾಳಿ ಅದು ತನ್ನ ಸ್ವಂತಿಕೆಯನ್ನು ಸ್ಥಾಪಿಸಿದ ನಂತರ ಜನರ ಗಮನ ಸೆಳೆಯುತ್ತದೆ. ಈ ಹೇಳಿಕೆಗೆ ಕನ್ನಡ ಸಾಹಿತ್ಯ ಕೂಡಾ ಹೊರತಾಗಿಲ್ಲ. ಹಿಂದಿನವಕ್ಕಿಂತ ಇದು ಹೇಗೆ ಭಿನ್ನವಾಗಿದೆ ಎಂಬ ಅಂಶಗಳು ವಿಮರ್ಶಕರ ಗಮನಕ್ಕೆ ಬಂದು ಆಮೇಲೆ ಅದು ಒಂದು ಹೆಸರನ್ನು ಪಡೆದುಕೊಳ್ಳುತ್ತದೆ. ಉದಾ: ನಮ್ಮ ಕನ್ನಡ ಸಾಹಿತ್ಯವು ನಮ್ಮ ಅನುಕೂಲಕ್ಕೆ ತಕ್ಕಂತೆ ವಿಂಗಡಣೆ ಹೊಂದಿ ''ಹಳಗನ್ನಡ , ನಡುಗನ್ನಡ ಮತ್ತು ಹೊಸಗನ್ನಡವೆಂದು ನಾಮನಿರ್ದೇಶನ ಹೊಂದಿ ಬೆಳೆಯುತ್ತ ಬಂದಿರುವುದು ಸರ್ವವಿದಿತ . ಅದರಂತೆಯೇ ಮುಂದೆ ಆಧುನಿಕ ಕನ್ನಡ ಸಾಹಿತ್ಯದಲ್ಲಿ ನವೋದಯ ನವ್ಯವೆಂದು ಮುಂದುವರೆಯಿತು. ನವೋದಯ ಗುಣಲಕ್ಷಣಗಳನ್ನು ಹೊಂದಿ ಕನ್ನಡ ಸಾಹಿತ್ಯ ಬೆಳೆಯುತ್ತಿದ್ದರೆ , ಆ ಗುಣ ಲಕ್ಷಣಗಳು ಯಾವ ಕಾಲದವರೆಗೆ ಕಂಡುಬರುತ್ತದೋ ಅಲ್ಲಿಯವರೆಗಿನ ಕನ್ನಡ ಸಾಹಿತ್ಯ ಮತ್ತೊಂದು ಗುಣಲಕ್ಷಣಗಳನ್ನು ರೂಢಿಸಿಕೊಂಡು ಮುಂದುವರೆದಾಗ ಅದು ಮತ್ತೊಂದು ಪ್ರವೃತ್ತಿಯೆಂದು ಕರೆಯಲಾಗುತ್ತದೆ. ಈ ಅರ್ಥದಲ್ಲಿ ನವೋದಯ , ಪ್ರಗತಿಶೀಲ, ನವ್ಯ , ನವ್ಯೋತ್ತರ ಪ್ರವೃತ್ತಿಗಳೆಂದು '' ೧ ಗುರುತಿಸಲಾಗಿದೆ.

ಒಂದು ಹಂತದಲ್ಲಿ ಸೂಕ್ಷ್ಮವಾಗಿ ವಿಚಾರಿಸಿದರೆ , ಈ ವಿಭಾಗೀಕರಣ ಒಂದು ರೀತಿಯ ಗೊಂದಲವನ್ನು ಸೃಷ್ಟಿ

ಮೂಡಿದೆ ಏನೋ ಅನ್ನಿಸುತ್ತದೆ. ಏಕೆಂದರೆ ನವೋದಯ ಅಥವಾ ನವ್ಯದ ಗುಣಲಕ್ಷಣಗಳನ್ನು ಹೊಂದಿದ ಸಾಹಿತ್ಯ ಇಂದೂ ಸಹ ಸೃಜಿಸಲ್ಪಡಬಹುದು ಎನ್ನುವುದನ್ನು ಕಡೆಗಣಿಸಲಾಗದು . ಆದರೂ ಕಾಲಘಟ್ಟದ ಆಧಾರದ ಮೇಲೆ ಸಾಹಿತ್ಯದ ವಿಭಾಗೀಕರಣ ನಿರಂತರವಾಗಿ ಸಾಗುತ್ತಲೇ ನಡೆದಿದೆ.

ನವ್ಯಸಾಹಿತ್ಯವು ಒಂದು ಕ್ರಿಯಾಶಿಲ್ಪ ಮತ್ತು ತಂತ್ರದ ಬಗೆಗೆ ಹೆಚ್ಚು ಒತ್ತು ನೀಡಿತು. ಹೀಗಾಗಿ ಬರಬರುತ್ತಾ ನವ್ಯ ಸಾಹಿತ್ಯ ಕೇವಲ ತಂತ್ರನಿಷ್ಠವಾಗಿ ಅಂತಃಸತ್ವವನ್ನು ಕಳೆದುಕೊಂಡಿತು. ೧೯೫೦ರಿಂದ ೧೯೭೦ರವರೆಗೆ ವಿಜೃಂಭಿಸಿದ ನವ್ಯಸಾಹಿತ್ಯ ಕ್ರಮೇಣವಾಗಿ ಅವಸಾನದತ್ತ ಸಾಗಿತು. ಆಮೇಲೆ ಎಪ್ಪತ್ತರ ದಶಕದಲ್ಲಿ ಸೃಜನೆಗೊಂಡ ಸಾಹಿತ್ಯ ನವ್ಯೋತ್ತರವೆಂಬ ಹೆಸರನ್ನು ಪಡೆದುಕೊಂಡಿತು. ನವ್ಯೋತ್ತರ ಲೇಖಕರಲ್ಲಿ ಒಟ್ಟು ಸಾಮಾಜಿಕ ಸ್ವರೂಪ ಹಾಗೂ ರಾಜಕೀಯ ವಿಷಯಗಳ ಮೇಲೆ ಬಂಡೇಳುವಂಥ ಕೃತಿರಚನೆಗೆ ಮೊದಲಿಟ್ಟಿತು. ಕಾಲಗತಿಯಿಂದ ಆಧುನಿಕ ಕನ್ನಡ ಸಾಹಿತ್ಯ ವಿವಿಧ ಪ್ರವೃತ್ತಿಯಿಂದ ಕೊನೆಗೆ ನವ್ಯೋತ್ತರವೆಂದು ಗುರುತಿಸಲಾಯಿತು '' ನವ್ಯದಿಂದ ಭಿನ್ನವಾದ ಈ ಸಾಹಿತ್ಯ ಪ್ರವೃತ್ತಿ ನವ್ಯರಿಗೆ ನವ್ಯೋತ್ತರವಾಗಿ , ಆದಿಗಾಧವಾದಿಗಳಿಗೆ 'ಆದಿಗೋತ್ತರವಾಗಿ ಕೆಲವರಿಗೆ 'ಬಂಡಾಯವಾಗಿ ,ಇನ್ನು ಕೆಲವರಿಗೆ 'ದಲಿತ ' ಸಾಹಿತ್ಯವಾಯಿತು'' ೨ ಎಂದು ಟಿ.ರಾಮಸ್ವಾಮಿಯವರು ಅಭಿಪ್ರಾಯಪಡುತ್ತಾರೆ. ಈ ಕಾಲಘಟ್ಟದಲ್ಲಿ ರಚಿತವಾದ ಮುಖ್ಯ ಕಾದಂಬರಿಗಳನ್ನು ಈ ಮುಂದೆ ಅಧ್ಯಯನಿಸಲಾಗಿದೆ.

ಸಿಂಗಾರೆವ್ವ ಮತ್ತು ಅರಮನೆ

ಕನ್ನಡ ಸಾಹಿತ್ಯದಲ್ಲಿ ಡಾ. ಚಂದ್ರಶೇಖರ ಕಂಬಾರರು ಕಾವ್ಯ , ನಾಟಕ , ಕಾದಂಬರಿಗಳನ್ನು ರಚಿಸಿದ್ದಾರೆ, ಜೊತೆಗೆ ರಂಗನಟರಾಗಿ , ಸಿನಿಮಾ ನಿರ್ದೇಶಕರಾಗಿ , ನಿರ್ಮಾಪಕರಾಗಿಯೂ ಕೆಲಸ ಮಾಡಿದ್ದಾರೆ. ಅವರ ಸೃಜನಶೀಲತೆ ಗ್ರಾಂಥಿಕ ಹಾಗೂ ದೃಶ್ಯ ಮಾಧ್ಯಮದಲ್ಲಿ - ಹೀಗೆ ಎರಡರಲ್ಲೂ ಗಂಭೀರವಾಗಿದೆ.

ಕಂಬಾರರ ಒಲವಿರುವುದು ಕಾದಂಬರಿ ಕ್ಷೇತ್ರಕ್ಕಿಂತ ನಾಟಕ ರಂಗದ ಕಡೆಗೇ ಹೆಚ್ಚು . ರಚಿತವಾದ ಕಾದಂಬರಿಗಳು ಸಂಖ್ಯೆಯಲ್ಲಿ ಕಡಿಮೆಯಾದರೂ ಕೂಡಾ , ಅವುಗಳಲ್ಲಿ ಹುದುಗಿದ ಆಶಯ ವಸ್ತುವಿನ್ಯಾಸ ಹೆಚ್ಚು ಅರ್ಥಪೂರ್ಣವಾಗಿಯೂ , ಸತ್ವಯುತವಾಗಿಯೂ ಮೂಡಿಬಂದಿವೆ. ಕರಿಮಾಯಿ ಚಲನಚಿತ್ರವಾಗಿದ್ದರೆ , ಜಿ.ಕೆ.ಮಾಸ್ತರರ 'ಪ್ರಣಯ ಪ್ರಸಂಗ ' ಟೆಲಿಫಿಲಂ ಆಗಿ ಪ್ರದರ್ಶನಗೊಂಡಿದೆ. 'ಸಿಂಗಾರೆವ್ವ ಮತ್ತು ಅರಮನೆ ' ಈ ಹಿಂದೆ ಸಾಕಷ್ಟು ಚರ್ಚೆಗೆ ಗ್ರಾಸವನ್ನೊದಗಿಸಿದ ಕೃತಿ . ಬೇರೆ ಬೇರೆ ದೃಷ್ಟಿಕೋನಗಳಲ್ಲಿ ಇದನ್ನು ನೋಡಬಹುದು. ಇಲ್ಲಿ ಸ್ತ್ರೀಯನ್ನು ಯಾವ ರೀತಿಯಲ್ಲಿ ನಿರ್ವಚಿಸಲಾಗಿದೆ, ಯಾವ ರೀತಿ ಗಂಡುಹೆಣ್ಣಿನ ತಾರತಮ್ಯ ಮಾಡಲಾಗಿದೆ ಎನ್ನುವ ವಿಷಯದ ಕುರಿತು ಈ ಕಾದಂಬರಿಯನ್ನು ಅಧ್ಯಯಿಸಲಾಗಿದೆ.

'ಸಿಂಗಾರೆವ್ವ ಮತ್ತು ಅರಮನೆ' ಶೀರ್ಷಿಕೆಯೇ ಸೂಚಿಸುವಂತೆ, ಸಿಂಗಾರೆವ್ವ ಎಂಬ ಹೆಂಗಸು ಹಾಗೂ ಒಂದು ಅರಮನೆಯ ಸುತ್ತ ಹೆಣೆದ ಕಥೆ. ಸಿಂಗಾರೆವ್ವ ಇಲ್ಲಿ ಕಾದಂಬರಿಯ ಕೇಂದ್ರ ಬಿಂದು. ಆಕೆಯೇ ದುರಂತ ನಾಯಕಿಯೂ ಕೂಡಾ ಹೌದು. ತೊಟ್ಟಿಲಿನಿಂದ ಚಟ್ಟದವರೆಗೂ ಸಿಂಗಾರೆವ್ವ ನಿತ್ಯ ಒಂದಿಲ್ಲೊಂದು ಸಂಕಷ್ಟವನ್ನು ಎದುರಿಸುತ್ತಲೇ ಬರುತ್ತಾಳೆ. ಪ್ರಸ್ತುತ ಕಾದಂಬರಿಯಲ್ಲಿ ಘಟನೆಗಳನ್ನು ಮತ್ತು ಪಾತ್ರಗಳನ್ನು ಅತ್ಯಂತ ಸೂಕ್ಷ್ಮವಾಗಿ ಚಿತ್ರಿಸಲಾಗಿದೆ. ಜೊತೆಗೆ ಸ್ವಾನುಭವದ ಎಲ್ಲ ಮಗ್ಗುಲುಗಳನ್ನು ಅವಲೋಕಿಸಲಾಗಿದೆ. ಒಂದು ನಿಜವಾದ ಕಲಾಕೃತಿ ಮೈದಾಳಬೇಕಾದರೆ ಕಾದಂಬರಿಕಾರನಿಗೆ ಅನುಭವ ಮುಖ್ಯ. ಕವಿ ಕಲ್ಪನೆಯು ಮೇರು ಮೆಟ್ಟಲೇರುವುದಕ್ಕಿಂತ ವಾಸ್ತವದ ಮೆಟ್ಟಲೇರುವುದು ಶ್ರೇಯಸ್ಕರ. ಪ್ರಸ್ತುತ ಕಾದಂಬರಿಯಲ್ಲಿ ಅಪ್ಪಟ ಹಳ್ಳಿಯ ಜೀವನದ ಸಂಸ್ಕೃತಿಯ ವಾಸನೆಯನ್ನು

ದಟ್ಟವಾಗಿ ಮೂಡಿಬಂದಿದೆ.

ಕಾದಂಬರಿಕಾರರು ಎರಡು ಭಾಗಗಳಲ್ಲಿ ಕಥಾ ವಿವರಣೆಗೆ ಪೂರಕ ವಾತಾವರಣ ಸೃಷ್ಟಿಸಿಕೊಂಡು. ಮೂರನೇ ಭಾಗದಿಂದ ಕಥೆ ಪ್ರಾರಂಭಿಸುತ್ತಾರೆ.

ಸಂದಗಾವಿಯ ಸಂಡರಿಗೌಡ ಸಿಂಗಾರವ್ವನ ತಂದೆ. ಈತ ಒಬ್ಬ ಮಹಾ ಕೊಳಕ ಮತ್ತು ಧನದಾಹಿ. ಸ್ವಾರ್ಥಕ್ಕಾಗಿ ಇದ್ದ ಒಬ್ಬಳೇ ಮಗಳನ್ನು ಹಣಕ್ಕೆ ಮದುವೆ ಮಾಡಿಕೊಡುವುದಕ್ಕೂ ಹೇಸದವನು. ಎರಡನೆ ಮದುವೆ ಮಾಡಿಕೊಟ್ಟಾಗ ಕೂಡಾ ಮೊದಲೇ ರೋಗಿಯಾದ, ಬಹುಬೇಗನೆ ಸಾಯುತ್ತಾನೆ ಎಂದು ತಿಳಿದ ಸರಗಂ ದೇಸಾಯಿಗೆ ಕೊಡುತ್ತಾನೆ. ಗೌಡ ತಿಳಿದುಕೊಂಡಂತೆ ದೇಸಾಯಿ ಸಾಯದೇ, ಗೌಡನ ಯೋಚನೆ ಹುಸಿಯಾಗುತ್ತದೆ. ಸಿಂಗಾರವ್ವನಿಗೂ ಮಕ್ಕಳಾಗುವುದಿಲ್ಲ. ಇದರಿಂದ ಗೌಡ ತನ್ನ ಮಗನನ್ನೇ ಸಿಂಗಾರವ್ವನಿಗೆ ದತ್ತ ತೆಗೆದುಕೊಳ್ಳಲು ಸೂಚಿಸುತ್ತಾನೆ, ಸಿಂಗಾರವ್ವ ಈ ಹಂತದಲ್ಲಿಯೇ ತಂದೆಯನ್ನು ಪ್ರತಿಭಟಿಸುತ್ತಾಳೆ. ಹೇಗಾದರೂ ಮಾಡಿ ಮಕ್ಕಳನ್ನು ಪಡೆದೇತೀರಬೇಕೆಂದು ಹಟತೊಡುತ್ತಾಳೆ.ಗೌಡ ತನ್ನ ಆಳು ಹೊಲ್ಯಾಮರೆಪ್ಪನ ತಾಯಿಯೊಡನೆ ಅಕ್ರಮ ಸಂಬಂಧ ಇಟ್ಟುಕೊಂಡಿರುತ್ತಾನೆ. ಜೊತೆಗೆ ಮರ್ಯಾನ ಹೊಲವನ್ನು ದೋಚಿ, ಮುಂದೆ ಅವನೊಂದಿಗೆ ವೈರಸಾಧಿಸಹೋಗಿ, ಕೊನೆಗೆ ಮರ್ಯಾನ ಕೈಯಲ್ಲಿಯೇ ಕೊಲೆಯಾಗುತ್ತಾನೆ. ದೇಸಾಯಿ ತನ್ನ ಖಯಾಲಿಗಳಾದ ಬಯಲಾಟದಲ್ಲಿ ರಾಜನ ಪಾತ್ರ ಮಾಡುವುದು ಮತ್ತು ಹುಡುಗಿಯರ ತೊಡೆನೋಡುವುದರಲ್ಲಿಯೇ ದಿನದೂಡುತ್ತಾನೆ. ಖಯಾಲಿಯ ಖರ್ಚಿಗಾಗಿ ಆಗಾಗ ಅಷ್ಟಿಷ್ಟು ಆಸ್ತಿಯನ್ನು ಕರಗಿಸುತ್ತಿರುತ್ತಾನೆ. ತನ್ನ ತಾಯಿಯನ್ನು ಕೊಂದು ತಲೆ ಮರೆಸಿಕೊಂಡು ಹೋದ ಮರ್ಯಾ ಮುಂದೆ ಸಿಂಗಾರವ್ವ ಅರಮನೆ ಸೇರಿದ ಮೇಲೆ ಬರುತ್ತಾನೆ. ಸನ್ಯಾಸಿಯೊಬ್ಬನ ವೇಷವನ್ನು ಧರಿಸುವ ಹಂತದಲ್ಲಿ ಅರಮನೆಗೆ ಕಾಲಿಟ್ಟು ಈತ ಕೊನೆಗೆ ದೇಸಾಯಿಯ ಹತ್ತಿರ ಗುಲಾಮನಾಗಿ ಬಂದು ಅರಮನೆಯಲ್ಲಿಯೇ ಇರತೊಡಗಿದ. ಷಂಡ ದೇಸಾಯಿಯಿಂದ ಮಕ್ಕಳಾಗುವುದಿಲ್ಲವೆಂದರಿತ ಸಿಂಗಾರವ್ವ, ಸ್ವಇಚ್ಛೆಯಿಂದ ಅಲ್ಲದಿದ್ದರೂ ಸಂದರ್ಭವಶದಿಂದ ~~ಮರ್ಯಾ~~ ಮರ್ಯಾನೊಡನೆ ಸೇರುತ್ತಾಳೆ. ಕ್ರಮೇಣವಾಗಿ ಸಿಂಗಾರವ್ವಳೇ ಮರ್ಯಾನನ್ನು ಆಹ್ವಾನಿಸುತ್ತಾಳೆ. ತನಗಲ್ಲದೇ ಬೇರೆಯವರಿಂದ ದೊರೆಸಾನಿ ಬಸಿರಾದುದನ್ನು ತಿಳಿದ ದೇಸಾಯಿ ರೋಷಗೊಳ್ಳುತ್ತಾನೆ. ಇದರಿಂದ ಅರಮನೆಗೆ

ಕಳಂಕವೆಂದರಿತು ಒಂದು ಪತ್ರ ಬರೆದಿಟ್ಟು ದೇಸಾಯಿ ಆತ್ಮಹತ್ಯೆಮಾಡಿಕೊಳ್ಳುತ್ತಾನೆ. ದೇಸಾಯಿಯ ಮರಣ ಶಾಸನದ ಪ್ರಕಾರ ಸಿಂಗಾರವ್ವ ಜೈಲಿಗೆ ಹೋಗುತ್ತಾಳೆ. ಅಲ್ಲಿಯೇ ಗಂಡುಮಗು ರವಿಚಂದ್ರನಿಗೆ ಜನ್ಮವಿತ್ತು ಅಸುನೀಗುತ್ತಾಳೆ. ಇತ್ತ ಮರ್‍ಯಾ ದೊರೆಸಾನಿ ಸಾವಿನ ಸುದ್ದಿ ತಿಳಿದು ಹುಚ್ಚನಾಗಿ ಹಾವು ಕಡಿಸಿಕೊಂಡು ಸಾಯುವುದರೊಂದಿಗೆ ಕಾದಂಬರಿಯು ಕೊನೆಗೊಳ್ಳುತ್ತದೆ.

ಕಾದಂಬರಿಯು ತುಂಬಾ ಸ್ತ್ರೀ ಶೋಷಣೆಯ ಚಿತ್ರಣ ಯಥೇಚ್ಛವಾಗಿ ಕಂಡುಬರುತ್ತದೆ. ಪಂಡರಿಗೌಡ ಹೇಳಿದ್ದೇ ವೇದ; ನಡೆದದ್ದೇ ಮಾರ್ಗ. ಅವನು ತನ್ನ ಗೌಡಕಿಯ ಗತ್ತಿನಿಂದ ಬೀಗುತ್ತಿದ್ದನಲ್ಲದೇ ಇಡೀ ಊರನ್ನು ನಿಯಂತ್ರಿಸುತ್ತಿದ್ದನು. ಕಟ್ಟಿಕೊಂಡ ನಾಲ್ಕುಜನ ಹೆಂಡಂದಿರಲ್ಲಿಯಾರೊಬ್ಬರಿಗೂ ಮಕ್ಕಳಾಗಿರಲಿಲ್ಲ. ಈ ಒಂದು ಕಾರಣದಿಂದ ಹೆಂಡಂದಿರನ್ನು ಚಿತ್ರಹಿಂಸೆಯಿಂದ ನರಳಿಸುತ್ತಿದ್ದನು. ಆದರೆ ಕೊನೆಗೆ ಎರಡನೇ ಹೆಂಡತಿ ಸಿಂಗವ್ವಗೌಡ್ತಿಯ ಹೊಟ್ಟೆಯಿಂದ ಸಿಂಗಾರವ್ವ ಹುಟ್ಟುತ್ತಾಳೆ. ಇನ್ನುಳಿದ ಮೂರು ಜನರನ್ನು ಮಕ್ಕಳನ್ನು ಹೆರಲಿಲ್ಲವೆಂದು ಅವರಿಗೆ ದನಗಳಿಗೆ ಬಡಿದಂತೆ ಬಾರಕೋಲಿನಿಂದ ಬಡಿಯುವುದು ಗೌಡನ ಕಟುಕತನದ ರಾಕ್ಷಸೀಗುಣಕ್ಕೆ ಸಾಕ್ಷಿಯಾಗಿದೆ. ಗೌಡನ ದೃಷ್ಟಿಯಲ್ಲಿ ಹೆಣ್ಣೆಂದರೆ ಕೇವಲ ಮಕ್ಕಳನ್ನು ಹೆರುವಯಂತ್ರ, ಅವಳಿಗೂ ಒಂದು ಹೃದಯವಿದೆಯೆಂಬ ಭಾವನೆಯು ಇಲ್ಲಿ ಕೊಂಚವೂ ಕಾಣದು.

ಮೇಲ್ವರ್ಗದ ಪುರುಷ ತನ್ನ ಅಧಿಕಾರದ ಅಮಲಿನಲ್ಲಿ ಕೆಳವರ್ಗದ ಮಹಿಳೆಯರನ್ನು ಶೋಷಿಸುವುದಕ್ಕೆ ಮರ್‍ಯಾನ ತಾಯಿಯನ್ನು ಗೌಡ ಇಟ್ಟುಕೊಳ್ಳುವಲ್ಲಿ ಕಂಡು ಬರುತ್ತದೆ. ಮರ್‍ಯಾ ಗೌಡನ ಮೇಲಿನ ಸಿಟ್ಟಿನಿಂದ ಸಿಂಗಾರವ್ವನನ್ನು ಬಲಾತ್ಕಾರ ಮಾಡುವಲ್ಲಿ ಸ್ತ್ರೀ ಬದುಕಿನ ದುರ್ಭರತೆ ಅರ್ಥವಾಗುತ್ತದೆ.

ಹಣ ಮನುಷ್ಯನನ್ನು ಅತ್ಯಂತ ಕ್ರೂರಿಯನ್ನಾಗಿಸುತ್ತದೆ. ಈ ಸಂಬಂಧದಲ್ಲಿ 'ಹಣವೆಂದರೆ ಹೆಣ ಬಾಯಿ ತೆರೆಯುತ್ತದೆ.' 'ತಾಮ್ರದ ದುಡ್ಡು ತಾಯಿ ಮಕ್ಕಳನ್ನು ಅಗಲಿಸುತ್ತದೆ' ಎಂಬ ಗಾದೆಗಳೇ ಪ್ರಚಲಿತದಲ್ಲಿವೆ. ಎಂಥ ಅಕ್ರಮ, ಅನ್ಯಾಯ ಮಾರ್ಗದಿಂದಲಾದರೂ ಸರಿ, ಹಣ ಆಸ್ತಿಗಾಗಿ ಮಾನವೀಯ ಗುಣಗಳನ್ನು ಗಾಳಿಗೆ ತೂರಿ ಮಾನವ ದಾನವನಾಗುತ್ತಾನೆ.

ಇಂಥ ಒಬ್ಬ ಸ್ವಾರ್ಥಿ ಒಂದು ಸಮಾಜವನ್ನೇ ಸಂಕಟಗೊಳಿಸಬಲ್ಲ. ಇನ್ನು ಕುಟುಂಬದ ಬಗ್ಗೆ ಆತನ ಕೆಲಸ ಅತ್ಯಂತ ಸುಲಭವಾಗುತ್ತದೆ. ಇಲ್ಲಿ ಗೌಡ ಇದೇ ಸಾಲಿಗೆ ಸೇರುವ ವ್ಯಕ್ತಿಯಾಗಿ ಗೋಚರಿಸುತ್ತಾನೆ.

ಗೌಡ ಆಸ್ತಿಯಾಸೆಗಾಗಿ ಸಿಂಗಾರವ್ವನನ್ನು ತನ್ನ ತಂಗಿಯ ಮಗನ ಜೊತೆ ರಾತ್ರೋರಾತ್ರಿ ಮದುವೆ ಮಾಡುತ್ತಾನೆ. ಈ ಮದುವೆಯು ಮನೆಯಲ್ಲಿ ಯಾರೊಬ್ಬರಿಗೂ ಇಷ್ಟವಿಲ್ಲದಿದ್ದರೂ ಅದನ್ನು ವಿರೋಧಿಸುವ ಧೈರ್ಯ ವಹಿಸುವುದಿಲ್ಲ. ಗೌಡನ ವಿರುದ್ಧ ಯಾವ ಹೆಣ್ಣು ಬಾಯಿ ತೆರೆಯದೇ ಕೇವಲ ಮೂಕಪ್ರೇಕ್ಷಕರಾಗಿರುತ್ತಾರೆ. ಒಂದು ವೇಳೆ ಎದುರು ಮಾತನಾಡಿದ್ದೇ ಆದರೆ ಗೌಡ ನೀಡುವ ಯಮಯಾತನೆಯ ಶಿಕ್ಷೆಯನ್ನು ಅನುಭವಿಸಬೇಕಾಗುತ್ತದೆ. ಹೀಗಾಗಿ ಇಲ್ಲಿಯ ಸ್ತ್ರೀ ಪಾತ್ರಗಳು ಪುರುಷ ವ್ಯವಸ್ಥೆಯ ಹಿಡಿತದಲ್ಲಿ ಸಿಕ್ಕು ನಲುಗುತ್ತವೆ.

ಮನುಷ್ಯತ್ವವಿರುವ ಯಾವ ತಂದೆ ತಾಯಿ ತನ್ನ ಮಗಳನ್ನು ರೋಗಿಷ್ಟ ವರನಿಗೆ ಮದುವೆ ಮಾಡಿಕೊಡಲು ಒಪ್ಪುತ್ತಾನೆ. ಆದರೆ ಗೌಡ ಇನ್ನೂ ಮುಂದುವರೆದು ಸಿಂಗಾರವ್ವನನ್ನು ಆಸ್ತಿಯಾಸೆಗಾಗಿ ದೇಸಾಯಿಯ ಕೊರಳಿಗೆ ಕಟ್ಟುತ್ತಾನೆ. ಈ ಕುರಿತು ಕಾದಂಬರಿಕಾರರು ನಿರೂಪಕಿ ಶಿವಲಿಂಗವ್ವನನ್ನು 'ಸಿಂಗಾರವ್ವ ಈ ಎರಡನೆಯ ಮದುವೆಗೆ ಒಪ್ಪಿದಳೇ'? ಎಂದು ನಿರೂಪಕರು ಕೇಳಿದಾಗ,''ಮಾತ್ಯಾಕೇಳತಿ, ಬಿಡಪ್ಪಾ ಅಂತ ಹೇಳಾಕ ಹೆಂಗಸರಿಗೆ ಅಧಿಕಾರ ಎಲ್ಲೈತಿ? ಆದ್ಯಾಗಿ ಗಂಡಸರು ಇವರ ಮನಸಿನಾಗ ಏನೈತಿ ಅಂತ ಕೇಳಿದರಲ್ಲೇನ ಹೇಳೋದು? ಸಿಂಗಾರವ್ವನ ಸ್ವಭಾವನ್ನ ಹಂಗs ಅಂತಿಟ್ಟುಕ. ಮೊದಲನೇ ಮದಿವ್ಯಾಗs ಬಾಯಿ ಕಳಕೊಂಡಿದ್ದಳು. ಹೆಚ್ಚು ಮಾತಾಡಿರಲಿಲ್ಲ. ಹಾ ಅಂದರ ಹಾ; ಹೂ ಅಂದರ ಹೂ, ಎಷ್ಟು ಬೇಕೋ ಅಷ್ಟ''೩ ಒಂದು ಹೆಣ್ಣು ಹುಟ್ಟಿಬೆಳೆದ ಮನೆಯನ್ನು ಬಿಟ್ಟು, ಇನ್ನೊಂದೆಡೆ ಹೊಸ ವಾತಾವರಣದಲ್ಲಿ ತನ್ನ ಇಡೀ ಜೀವನವನ್ನು ಸವೆಸಬೇಕಾಗುತ್ತದೆ. ಅಂಥದ್ದರಲ್ಲಿ ಸಿಂಗಾರವ್ವನಿಗೆ ಒಂದು ಮಾತೂ ಕೇಳದೇ ಗೌಡ, ಸಂತೆಯಲ್ಲಿ ಮಾರಾಟ ಮಾಡುವ ಪ್ರಾಣಿಗಳ ತೆರದಲ್ಲಿ ಭಾವಿಸುತ್ತಾನೆ. ಸಿಂಗಾರವ್ವನ ಇಚ್ಛಾನಿಚ್ಛೆಯೆಂಬುದನ್ನು ಗಣನೆಗೇ ತೆಗೆದುಕೊಳ್ಳುವುದಿಲ್ಲ. ಇದು. ಹೆಣ್ಣಿನ ನಿರ್ಲಕ್ಷ್ಯವನ್ನು ಪುರುಷಾಧಿಕಾರದ ಏಕಸ್ವಾಮ್ಯವನ್ನು ತೋರಿಸುತ್ತದೆ. ಇಲ್ಲಿಂದಲೇ ಸಿಂಗಾರವ್ವನ ಬದುಕು ದುರಂತದ ಮಡುವಿನೆಡೆಗೆ

ವಾಗುತ್ತದೆ.

ದೇಸಾಯಿಯ ಅರಮನೆಯಲ್ಲಿ ದುಡಿಯುವ ಗಂಡಾಳುಗಳು ಹೆಣ್ಣಾಳುಗಳನ್ನು ಕೀಳು ದೃಷ್ಟಿಯಿಂದ ನೋಡುತ್ತಿದ್ದರು. ಹೆಂಗಸರೆಂದರೆ ಕೂತು ಉಣ್ಣುವವರು; ಗಂಡಸರೆಂದರೆ ದುಡಿದು ತರುವವರು ಎಂಬುದು ಅವರ ಧೋರಣೆಯಾಗಿತ್ತು. ಹೆಂಗಸರಿಗೂ ಒಂದು ಆತ್ಮವಿದೆ, ಅವರೂ ಮನುಷ್ಯರು ಎನ್ನುವ ಕಲ್ಪನೆ ಪುರುಷವರ್ಗದಲ್ಲಿ ತಪ್ಪಿಯೂ ಸುಳಿಯುವುದಿಲ್ಲ.

ಸರಗಂ ದೇಸಾಯಿಯ ಹತ್ತಿರ ಆಗಾಗ ಬರುವ ಬಡ್ಡಿವ್ಯಾಪಾರಸ್ಥ ಪರಮಶೆಟ್ಟಿ ಒಬ್ಬ ವ್ಯವಹಾರದ ವ್ಯಕ್ತಿಯಾಗಿ ಗೋಚರಿಸುತ್ತಾನೆ. ಸ್ತ್ರೀಯರ ಮುಂದೆ ಈ ಮನುಷ್ಯ ತುಂಬಾ ಗಂಭೀರವಾಗಿ ವರ್ತಿಸುತ್ತಾನೆ. ಹೆಂಗಸರು ತನಗೆ ಗೌರವ ಕೊಡಬೇಕೆಂಬ ಸ್ವಭಾವವುಳ್ಳವನು. ಅವನು ಮಾತ್ರ ಹೆಂಗಸರನ್ನು ಎಂದೂ ಮರ್ಯಾದೆಯಿಂದ ನೋಡಬೇಕೆಂಬ ಪರಿಜ್ಞಾನವುಳ್ಳವನಾಗಿರಲಿಲ್ಲ.

ಸಿಂಗಾರೆವ್ವ ದೇಸಾಯಿಯ ಮನೆ ತುಂಬಿದ ಮೇಲೆ ಹೊಸ ಮದಲಗಿತ್ತಿತನ ಅನುಭವಿಸುವುದೇ ಇಲ್ಲ. ಒಬ್ಬ ಹೆಣ್ಣು ಏನೆಲ್ಲ ಆಸೆ, ಆಕಾಂಕ್ಷೆ, ಕನಸುಗಳನ್ನು ಕಟ್ಟಿಕೊಂಡಿರುತ್ತಾಳೋ, ಅಂಥ ಕನಸು, ಆಸೆಗಳು ಸಿಂಗಾರೆವ್ವನಲ್ಲೂ ಇರುತ್ತವೆ. ನಿರ್ವೀರ್ಯನಾದ ದೇಸಾಯಿ ಅವಳ ಕನಸುಗಳನ್ನು ನನಸುಮಾಡುವ ಸ್ಥಿತಿಯಲ್ಲಿರಲಿಲ್ಲ. ಹೀಗಾಗಿ ಸಿಂಗಾರೆವ್ವನ ಕನಸುಗಳು ಸುಟ್ಟು ಕರಕಾಗುತ್ತವೆ. ಸುಂದರವಾಗಿ ಅರಳಬೇಕಾದ ಅವಳ ಬದುಕು ಮುರುಟಿಕೊಳ್ಳುತ್ತದೆ. ತಂದೆಯ ಧನದಾಹಿತನದ ದುರ್ಗುಣ ಮಗಳ ಬದುಕನ್ನು ಸರ್ವನಾಶ ಮಾಡುವ, ಇಡೀ ಜೀವನವನ್ನು ಕಣ್ಣೀರಿನಲ್ಲಿ ಕೈತೊಳೆಯುವ ಪರಿಸ್ಥಿತಿ ತಂದೊಡ್ಡುತ್ತದೆ.

ಸಿಂಗಾರೆವ್ವನ ಅತ್ತೆ ಹಿರಿಯ ದೊರಸಾನಿ ನಾಗವ್ವನಿಗೆ ಅರಮನೆಯ ಮುಂದುವರಿಕೆಯ ಚಿಂತೆ ಕಾಡುತ್ತದೆ. ಆ ಕಾರ್ಯ ಸಿಂಗಾರೆವ್ವಳೇ ಪೂರೈಸಬೇಕೆಂಬುದು ಮುದುಕಿಯ ಆಸೆ. ಈ ಕುರಿತು ಮುದುಕಿ ಸಿಂಗಾರೆವ್ವ ಗರ್ಭಿಣಿಯಾದಳೆ? ಎಂದು ಕೇಳಿದ ಪ್ರಶ್ನೆಗೆ ಕೀಲಿಂಗವ್ವ ''ಹುಳಕ ದಂಡನಂಥಾ ಮಗನ್ನ ಕೊಟ್ಟೇದಿ, ಅವನ್ನ

ಕಟ್ಟಿಕೊಂಡು ದಿನಕ್ಕೊಂದು ಕಥ್ಯಾಕಾದೀತ?'' ಎನ್ನುವ ಮಾತಿನಲ್ಲಿ ದೇಸಾಯಿ ನಪುಂಸಕ ಎಂಬ ಅಂಶ ಥಟ್ಟನೆ ಹೊಳೆಯುತ್ತದೆ. ಪುರುಷನ ಹತ್ತಿರ ದೋಷವಿದ್ದರೂ ಈ ಸಮಾಜ ಹೆಣ್ಣಿನ್ನೇ ಆರೋಪಿಸುತ್ತದೆ. ಪುರುಷ ಪ್ರಧಾನ ವ್ಯವಸ್ಥೆ ತನ್ನನ್ನು ತಪ್ಪಿತಸ್ಥ ಸ್ಥಾನದಲ್ಲಿ ಎಂದೂ ನಿಲ್ಲಿಸಿಕೊಳ್ಳುವುದಿಲ್ಲ. ಅಂಥ ತಪ್ಪುಗಳನ್ನು ಹೆಣ್ಣಿನ ಕೊರಳಿಗೆ ಕಟ್ಟಲು ಪ್ರಯತ್ನಿಸುತ್ತದೆ. ಸಿಂಗಾರವ್ವನ ಘಟನೆಯು ಸಹ ಇದೇ ದಾರಿಯಲ್ಲಿ ಸಾಗುತ್ತದೆ.

ಶಿವಲಿಂಗವ್ವ ಸಿಂಗಾರವ್ವನಿಗೆ; ಅತ್ತೆ ಹೇಳಿದ ಮಾತನ್ನು ನೆನಪಿಸಿದಾಗ ಖಿನ್ನಳಾದ ಸಿಂಗಾರವ್ವ ''ಏನ ಹೇಳಲೇ ಶಿವಲಿಂಗೀ ರಾತ್ರಿ ಕುಡೀತಾನ, ಬಂದ ಬೀಳತ್ತಾನ, ನಾ ಮಂಚದ ಮ್ಯಾಲ ಮಲಗಿದ್ದರ ಕೆಳಗ ಮಲಗತಾನ, ಹಾಂಗಂತ ನಾನ್ಯಾ ಕೆಳಗ ಮಲಗಿ ನೋಡಿದ, ಆವ ಮಂಚದ ಮ್ಯಾಲ ಬಿದ್ಕೊಂಡ. ಒಂದ ಸಲ ಆದರೂ ಈ ಕ್ವಾಣ್ಯಾಗ ನನ್ನ ಹೆಂಡತಿ ಇದ್ದಾಳ; ಅಕಿನ ಮಾತಾಡಿಸಬೇಕು-ಅಂತ ಅಂದವನಲ್ಲ. ಬೆಳಗ್ಗಿನ್ಯಾಗ ಒಮ್ಮೊಮ್ಮೆ ಬೆರಗಾಗಿ ಕಣ್ಣತೆಗದ ''ನೀವು ಇದ್ದ ಕ್ವಾಣ್ಯಾಗ ಮಲಗಿದ್ರಿ?'' ಅಂತ ಕೇಳತಾನ ಹೆಂಗಸಿನ ಮಾಡಿಕೊಂಡಿದ್ದಾದರೂ ನೆನಪೈತೋ ಇಲ್ಲೋ! ಬರೀ ಮಕ್ಕಳ ಮಕ್ಕಳಂದರ ಆವೇನ ಜಂತ್ಯಾಗಿಂದ ಉದರತಾವು?'' ಎನ್ನುವ ಮಾತುಗಳಲ್ಲಿ ಅವಳ ಅಂತರಾಳದ ನೋವು ವ್ಯಂಗ್ಯ, ವಿಷಾದಗಳು ಒಮ್ಮೆಲೆ ಹೊರಹೊಮ್ಮುತ್ತವೆ. ಸಮಾಜದ ಕಣ್ಣಿನಲ್ಲಿ ಪುರುಷರೂಪಿಯಾದ ದೇಸಾಯಿಯಲ್ಲಿ ತಿಲಮಾತ್ರವೂ ಪುರುಷತ್ವದ ಅಂಶವಿಲ್ಲವೆನ್ನುವುದು, ಸಿಂಗಾರವ್ವನ ಮಾತುಗಳಿಂದ ಸ್ಪಷ್ಟಗೊಳ್ಳುತ್ತದೆ. ಹೀಗಿದ್ದಾಗ್ಯೂ ದೇಸಾಯಿ ಹುಡುಗಿಯರ ಜೊತೆ ಸೇರಿ ಬೇಹೋಶ ಆಗುವುದು ಒಂದು ರೀತಿಯಲ್ಲಿ ದ್ವಂದ್ವತೆಗೆ ಕಾರಣವಾಗುತ್ತದೆ.

ಸಿಂಗಾರವ್ವನ ತಂದೆ ನೆಪಮಾತ್ರಕ್ಕೆ ಅಳಿಯ ಮಗಳನ್ನು ದೀಪಾವಳಿ ಹಬ್ಬಕ್ಕೆ ಹಂದಗಾವಿಗೆ ಆಹ್ವಾನಿಸುತ್ತಾನೆ. ಅವನು ಬಂದ ಉದ್ದೇಶವೇ ಬೇರೆ. ಮಗಳಲ್ಲಿ ಹಣ ಕೇಳಿ, ಋಣಾತ್ಮಕ ಪ್ರತಿಕ್ರಿಯೆ ಬಂದಾಗ ಸಿಟ್ಟು ಹುಟ್ಟಿ ''ಇದು ನಿನ್ನ ಖಾಯಂ ಮನಿ ಅಲ್ಲ'' ಎನ್ನುವಲ್ಲಿ ಗೌಡನ ಮಾತಿನ ಒಳ, ಹಣವಿರುವ ಬೇರೆ ಯಾರಿಗೋ ಮಗಳನ್ನು ಪುನಃ ಮದುವೆ ಮಾಡಿಕೊಡುವ ಅರ್ಥ ಧ್ವನಿಸುತ್ತದೆ. ಗಂಡ ಸತ್ತ ಮೇಲೆ ಅವಳಿಗೊಂದು ಆಧಾರ ಬೇಕೋ ಬೇಡವೋ ಎನ್ನುವ ಮಾತು ಆದಷ್ಟು ಬೇಗ ದೇಸಾಯಿ ಸತ್ತರೆ ಆಸ್ತಿ ಹೊಡೆಯುವ ಹುನ್ನಾರ ಗೌಡನ ಅಂತರಾಳದಲ್ಲಿ ಮನೆಮಾಡಿದೆ. ಗೌಡನ ಬಾಯಿಯಿಂದ ಬಂದ ನುಡಿಗಳನ್ನು ಕೇಳಿ ಸಿಂಗಾರವ್ವ ಬೆಂಕಿಯಾಗುತ್ತಾಳೆ. ಅತ್ಯಂತ ಆವೇಶದಿಂದ'' ಹಾಹಾ, ಇದಃ

ನನ್ನ ಶಾಪಂ ಮುಟ್ಟಿ, ತೌರುಮನೆ ಹಾಳಾಗಿ ಬಾಗಿಲಿಗೆ ಬೇಲಿ ಹಚ್ಚಲಿ, ನನ್ನ ಬರೀ ದಾಯೋ ಗಂಡರಿಗಿ ಮಾರಿ ಭಾಷಾ ತಿಂದೇವಂತಿಯವೋ! ಥೂ ನಿನಗ ಹಂಗ ತಂದಿ ಅಂತನ್ನ, ನನ್ನಂಥ ದಾಯತಾನಂತ ಲಕ್ಷ ಹಾಕೀಯಲ್ಲ, ಉಳಿಸ್ಕೋತೀನಿ ಗಂಡಮಗನ್ನ ಹಡದ ತೋರ್ಸ್ಯಾಕ ನಿನ್ನ ಕರಸ್ತೀನಿ. ಆಗ ಬಂದೀಯಂತ ಅಲ್ಲಿತನಕ ಈ ಕಡೆ ಕಾಲಿಡಬ್ಯಾಡ''

ಎಂದ ಸಿಂಗಾರೆವ್ವನ ಮನದಾಳದಲ್ಲಿ ಎಷ್ಟೋ ದಿವಸಗಳಿಂದ ಘನೀಕರಣಗೊಂಡ ಕ್ರೋಧಾಗ್ನಿ ಒಮ್ಮೆಲೇ ಸ್ಫೋಟಿಸುತ್ತದೆ. ಗೌಡನಲ್ಲಿರುವ ಆಸ್ತಿಯ ದುರಾಸೆ ಕರುಳುಬಳ್ಳಿಯ ಸಂಬಂಧಕ್ಕೆ ಕತ್ತರಿ ಹಾಕುತ್ತದೆ. ಇಲ್ಲಿ ತಂದೆ ಮಗಳ ಮೇಲೆ ನಡೆಸುವ ಶೋಷಣೆ ನಿಚ್ಚಳವಾಗಿ ಕಾಣುತ್ತದೆ.

ತಂದೆ, ಸಿಂಗಾರೆವ್ವನ ಸಂತಾನ ಶಕ್ತಿಯ ಬಗ್ಗೆ ಅನುಮಾನ ವ್ಯಕ್ತಪಡಿಸಿ ಇವಳ ಎಳೆತನದ ಕನಸುಗಳಿಗೆ ಬೆಂಕಿ ಇಡುತ್ತಾನೆ. ಆಗ ಮಾತ್ರ ಕೆರಳಿದ ಸರ್ಪವಾಗಿ ಶಪಥಮಾಡುತ್ತಾಳೆ. ಇದೆ ಕಾರಣ ಮತ್ತು ಘಟನೆ ಕಾದಂಬರಿ ಓಟಕ್ಕೆ ಚಾಲಕ ಶಕ್ತಿಯಾಗಿ ಪರಿಣಮಿಸುತ್ತದೆ. ಅರಮನೆ ಶಾಪಗ್ರಸ್ತವಾಗಿ ಮಕ್ಕಳಾಗವುದಿಲ್ಲವೆಂಬ ವದಂತಿ ಬೇರೆ ಇತ್ತು. ನರಸತ್ತಗಂಡ, ಕ್ರೂರಿ ತಂದೆ, ಇಂಥ ಪ್ರತಿಕೂಲವಾದ ವಾತಾವರಣದಲ್ಲಿ ಅವಳ ಕನಸು ಸಾಕಾರಗೊಳ್ಳುವುದಾದರೂ ಹೇಗೆ? ಒಂದು ಕಡೆ ಷಂಡಗಂಡ, ಅದರಿಂದ ತನಗೆ ಸಂತಾನಭಾಗ್ಯವಿಲ್ಲವೆಂದೂ ತಿಳಿದಿದೆ. ಮತ್ತೊಂದು ಕಡೆ ವಂಶದ ಕುಡಿಯನ್ನು ಕಾಣಲೇ ಬೇಕೆಂಬ ಅತ್ತೆಯ ಒತ್ತಡ. ಅಡಕತ್ತರಿಯಲ್ಲಿ ಸಿಕ್ಕು ಅಡಲಾರದ, ಅನುಭವಿಸಲಾಗದ ಪರಿಸ್ಥಿತಿ ಸಿಂಗಾರೆವ್ವನದು'' ಇಂಥ ಸಂದಿಗ್ಧ ಮನಸ್ಥಿತಿಯಲ್ಲೇ ಅರಮನೆಗಿದ್ದ ಶಾಪವನ್ನು ನಿವಾರಿ ಹುಚ್ಚಯ್ಯನ ಆಮಿಷಕ್ಕೆ ಒಳಗಾಗುತ್ತಾಳೆ.

ಹುಚ್ಚಯ್ಯ ಒಬ್ಬ ಲಂಪಟ, ವಿಷಯಾಸಕ್ತನಾದ ವ್ಯಕ್ತಿ, ಅವನು ಪವಾಡವೆಂಬ ಮಂಕುಬೂದಿಯಿಂದ ಎಷ್ಟೋ ಮಾನವುಳ್ಳ ಮಾನಿನಿಯರ ಬಾಳನ್ನು ಹಾಳು ಮಾಡಿದಂಥವ. ಹುಚ್ಚಯ್ಯ ಇಂಥವನೆಂದು ಗೊತ್ತಿದ್ದೂ ಶಿವನಿಂಗವ್ವ ಮತ್ತು ಸಿಂಗಾರೆವ್ವ ಅವನ ಮಾಟದ ಮೋಡಿಗೆ ಬಲಿಬೀಳುತ್ತಾರೆ. ಸಂತಾನ ಫಲ ನೀಡುವ ನೆಪದಲ್ಲಿ ಜಂಗಮನೊಬ್ಬ ಲೈಂಗಿಕ ಶೋಷಣೆ ಮಾಡುವ ಕ್ರಮವಿಲ್ಲಿ ಹೊಸದೇನಲ್ಲ. ಅವನ ವಿಲಕ್ಷಣ ಶಕ್ತಿಗಳು ಇಂಥ ಲೈಂಗಿಕ ಶೋಷಣೆಗೆ ಪ್ರಚೋದಕ ಶಕ್ತಿಗಳಾಗಿ ರೂಪ ತಳೆಯುತ್ತವೆ. ಒಡಲಕುಡಿಯನ್ನು ಪಡೆಯುವ ಛಲದಿಂದ ಅಮಾವಾಸ್ಯೆಯ ಕಾಳರಾತ್ರಿಯಲ್ಲಿ

ಸಿಂಗಾರವ್ವ ಹುಚ್ಚಯ್ಯನ ಪೂಜೆ ನಡೆಯುವ ವೇಳೆಯಲ್ಲಿ ದೇಸಾಯಿಯ ಆಗಮನದಿಂದ ಪೂಜೆ ನಿಂತು ಬಿಡುತ್ತದೆ. ಆಕಸ್ಮಿಕವಾಗಿ ಸಂಭವಿಸಿದ ಹುಚ್ಚಯ್ಯನ ಸಾವು ಸಿಂಗಾರವ್ವನನ್ನು ಮತ್ತೊಂದು ಸಮಸ್ಯೆಯೊಂದಿಗೆ ತಳುಕು ಹಾಕುತ್ತದೆ: ಅವಳ ದುರಂತಕ್ಕೆ ನಾಂದಿಯಾಗುತ್ತದೆ.

ಹುಚ್ಚಯ್ಯನ ಹೆಣ ಸಾಗಿಸಲು ಬಂದ ಮರ್‍ಯಾ, ಸಿಂಗಾರವ್ವನಿಗೆ ಮೋಹಿ ಹಸಿದ ಹುಲಿಗೆ ಆಹಾರ ಸಿಕ್ಕಷ್ಟು ಹುಚ್ಚವು. ಹೆಣ ಸಾಗಿಸಿದರೆ ಕೇಳಿದಷ್ಟು ಹಣ ಕೊಡುವುದಾಗಿ ಸಿಂಗಾರವ್ವ ಹೇಳಿದರೂ ಒಪ್ಪದ ಮರ್‍ಯಾ, ''ನೀ ನಿನ್ನ ದೇಹಗಂಟ ಕೊಟ್ಟರೂ ಬ್ಯಾಡ, ಈಗಿಂದೀಗ ನನ್ನ ಜೋಡಿ ಒಮ್ಮೆ ಮಲಗು ಹೆಣ ಒಯ್ತಿನಿ ಏನಂತಿ?'' ಎನ್ನುವ ಪ್ರಶ್ನೆಯಿಂದ ಸಿಂಗಾರವ್ವ ಕುಪಿತಳಾಗುತ್ತಾಳೆ. ಈ ಸಂಕಟ ಸಮಯದಿಂದ ಪಾರು ಮಾಡಲು ಸಿಂಗಾರವ್ವ ಮತ್ತು ಶಿವಿಂಗವ್ವ ಸಾಕಷ್ಟು ಪರಪರಿಯಿಂದ ಅಂಗಲಾಚಿದರೂ ಮರ್‍ಯಾನ ಕಲ್ಲು ಮನಸ್ಸು ಕರಗುವುದಿಲ್ಲ. ಇನ್ನು ತನಗೆ ಸಾವೇ ಗತಿಯೆಂದು ಭಾವಿಸಿದ ಸಿಂಗಾರವ್ವ ಬಾವಿ ಬಿದ್ದು ಸಾಯುವುದಾಗಿ ನಿಶ್ಚಯಿಸುತ್ತಾಳೆ.

ಆತ್ಮಹತ್ಯೆ ಮಾಡಿಕೊಳ್ಳುವ ನಿರ್ಧಾರದಿಂದ ಹೊರಟ ಸಿಂಗಾರವ್ವನ ಸೆರಗು ಹಿಡಿದು ಮರ್‍ಯಾ ''ಹೆಂಗೂ ಸಾಯಬೇಕಂತಿ ನನ್ನ ಜೋಡಿ ಒಮ್ಮೆ ಮಲಗಿ ಸಾಯಲ್ಲ'' ಅಂದ. ಅಂದವನೇ ಸೆರಗು ಜಗ್ಗಿ ಬರಸೆಳೆದು ಬಿಗಿದಪ್ಪಿ ಲಟಲಟ ಮುದ್ದಿಟ್ಟ. ಸಿಂಗಾರವ್ವನಿಗೆ ಪ್ರತಿಭಟಿಸುವ ಶಕ್ತಿಯೇ ಇರಲಿಲ್ಲ. ಅವನ ತೆಕ್ಕೆಯಲ್ಲಿ ಹಸಿಮಾಂಸದ ಮುದ್ದೆಯಂತೆ ಹಾ ಎಂದು ಹಾಗೆ ಬಿದ್ದು ಬಿಟ್ಟಳು. ಎಷ್ಟೋ ದಿನದ ಉಪವಾಸವಿದ್ದ ಹುಲಿಗೆ ಈಗಷ್ಟೇ ಬಯಸಿದ ಬೇಟೆ ಸಿಕ್ಕಂತೆ ಮರ್‍ಯಾ ಕಣ್ಣಗಲಿಸಿ ಬಾಯಿ ಹಾಕಿ ತಿನ್ನುವ ಹಾಗೆ ಅವಳನ್ನು ಎಲ್ಲೆಂದರಲ್ಲಿ ಕಚ್ಚುತ್ತಿದ್ದ.'' ಕಣ್ಣಲ್ಲಿ ತೃಪ್ತಿ ಮಿಂಚಾಡಿದಾಗ ಎದ್ದು, ಹೆಣ ಬೆನ್ನಿಗೇರಿಸಿಕೊಂಡು ಹೊರಟು ಹೋಗುತ್ತಾನೆ.

ನಮ್ಮ ಭಾರತೀಯ ಸಮಾಜದಲ್ಲಿ ಸ್ತ್ರೀಗೆ ಶೀಲ, ಚಾರಿತ್ರ್ಯ, ಪಾತಿವ್ರತ್ಯದ ಕಲ್ಪನೆಗಳು ಅತ್ಯಂತ ಮೌಲ್ಯಯುತವಾದವುಗಳು. ಇಂಥ ಮೌಲ್ಯಗಳು ಇಲ್ಲಿ ಪತನವಾಗುತ್ತವೆ. ಕಾಮದ ಪಿತ್ತನೆತ್ತಿಗೇರಿದ ಮರ್‍ಯಾನಿಗೆ ಸಿಂಗಾರವ್ವನ ಮನವಿ, ಯಾಚನೆಗಳು ಅವನ ಕಿವಿಗಳಿಗೆ ಬೀಳುವುದೇ ಇಲ್ಲ. ಆ ವೇಳೆಯಲ್ಲಿ ಅವನು ತೋರಿದ

ಅಪರಿವರ್ತನೆ ಅತ್ಯಂತ ಹೇಯವಾದುದೆನಿಸುತ್ತದೆ. ಪುರುಷ ಪ್ರಾಬಲ್ಯಕ್ಕೆ ಸಿಕ್ಕು ನರಕದ ಬದುಕನ್ನು ಸಾಗಿಸುವ ಅನಂತ ಸ್ತ್ರೀ ಸಮುದಾಯದ ಪ್ರತಿನಿಧಿಯಾಗಿ ಸಿಂಗಾರವ್ವ ಗೋಚರಿಸುತ್ತಾಳೆ. ಮಾತ್ರವಲ್ಲ ತಂದೆಯ ದರ್ಪ ದೌರ್ಜನ್ಯಕ್ಕೆ ಸಿಂಗಾರವ್ವ ಬಲಿಪಶುವಾಗುತ್ತಾಳೆ. ಎಲ್ಲ ಘಟನೆಗಳಿಗೂ ಮೂಲ ಹೆಣ್ಣು ಎನ್ನಲಾಗುತ್ತದೆ. ಆದರೆ ಪುರುಷ ಹೆಣ್ಣನ್ನು ಬಳಸಿಕೊಂಡು ಮಾಡಿದ ಅನಾಹುತಗಳಿಗೆ ಎಂದೂ ಉತ್ತರಿಸಲಾರ.

ಹುಚ್ಚಯ್ಯನ ಹಣ ಸಾಗಿಸುವ ಕ್ರಿಯೆಯಿಂದ ಅರಮನೆ ಪ್ರವೇಶಿಸಿದ ಮರ್ಯಾ ದೇಸಾಯಿಗೆ ಆಪ್ತನಾಗುವುದರ ಮೂಲಕ ಅರಮನೆಯಲ್ಲಿಯೇ ತಳವೂರುತ್ತಾನೆ. ಮುಂದೆ ಸಿಂಗಾರವ್ವನ ಬಾಳಿಗೆ ಮುಳ್ಳಾಗಿ ತಗುಲಿಕೊಳ್ಳುತ್ತಾನೆ. ಸಿಂಗಾರವ್ವನ ತಂದೆಯ ಸೇಡಿನಿಂದ ಕುದಿಯುವ ಮರ್ಯಾ ಸೇಡಿನ ಉರಿಯಲ್ಲಿ ವಿವೇಕರಹಿತನಾಗಿ ವರ್ತಿಸುತ್ತಾನೆ. ತನ್ನ ಸೇಡು ತೀರಿಸಿಕೊಳ್ಳಲು ಗೌಡ ಸಿಗದಿದ್ದರೆ, ಗೌಡನ ಮಗಳ ಮೇಲೆ ತೀರಿಸಿ ಕೊಳ್ಳುವಲ್ಲಿ ಯಶಸ್ವಿಯಾಗುತ್ತಾನೆ. ಇಲ್ಲಿ ತಪ್ಪು ಗಂಡಿನದಾದರೂ ಶಿಕ್ಷೆ ಅನುಭವಿಸುವುದು ಹೆಣ್ಣು ಎಂಬುದಕ್ಕೆ ಸಿಂಗರವ್ವ ಮತ್ತು ಮರ್ಯಾನ ತಾಯಿ ಜ್ವಲಂತ ನಿದರ್ಶನವಾಗಿದ್ದಾರೆ.

ದೇಸಾಯಿಯ ಬಂಟನಾದ ಮರ್ಯಾ ಸಿಂಗಾರವ್ವಳಿಗೆ ಮತ್ತು ಕಿರುಕುಳ ಕೊಡುತ್ತಾನೆ. ಇದರಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸಿದರೂ ಸಾಧ್ಯವಾಗುವುದಿಲ್ಲ. ಹೆತ್ತ ತಂದೆಯಿಂದ, ಷಂಡ ಗಂಡನಿಂದ, ಮರ್ಯಾನಿಂದ ಹೀಗೆ ಇಷ್ಟೆಲ್ಲಾ ಕಷ್ಟ ನೋವು, ಸಂಕಟ ಶೋಷಣೆಗಳನ್ನು ಅನುಭವಿಸಿಯೂ ಸಹನಾ ಮೂರ್ತಿಯಾಗಿ 'ಪತಿಯೇ ಪರದೈವ'ವೆಂದು ನಡೆದುಕೊಳ್ಳುತ್ತಾಳೆ. ಅವಳು ದೇಸಾಯಿಯನ್ನು ಕುರಿತು ಹೇಳುವ ಮಾತುಗಳು ಅತ್ಯಂತ ಹೃದಯಸ್ಪರ್ಶಿಯಾಗಿವೆ. ''ಯಾರದೋ ತೊಡೆ ಮೇಲೆ ಹಾದೀ ಹೆಣವಾಗೋದಕ್ಕಿಂತ ಮನೆಹಂದರದಲ್ಲೇ ನಿನ್ನ ವಿಲಾಸಿನಿಯನ್ನಾಗಿ ಮಾಡಿಕೋ. ನಿನಗಾಗಿ ನಿನ್ನ ನೆಮ್ಮದಿಗಾಗಿ ತೊಡೆ ತೋರಿಸಲೂ ನಾನು ಸಿದ್ಧ. ಅದರಲ್ಲಿ ತಪ್ಪೇನಿಲ್ಲ, ಆದರಿಂದ ನನಗೆ ನಾಚಿಕೆಯೂ ಆಗುವುದಿಲ್ಲ''೧೦ ಎಂಬ ಮಾತುಗಳಲ್ಲಿ ಸಿಂಗಾರವ್ವನ ಮನದಾಳದ ನೋವಿದೆ. ಗಂಡನಿಗಾಗಿ ಎಂಥ ತ್ಯಾಗಕ್ಕೂ ಅವಳು ಸಿದ್ಧಳಾದರೂ ದೇಸಾಯಿ ಮಾತ್ರ ಮಾಯಾಬಾಲನಾಗುತ್ತಾನೆ. ಅವಳ ಮಾತುಗಳು ಅವನಲ್ಲಿ ಯಾವುದೇ ಪರಿಣಾಮ ಉಂಟುಮಾಡುವುದಿಲ್ಲ.

ಗಂಡಸಿನ ದೌರ್ಬಲ್ಯಗಳನ್ನು ಕುರಿತು ನಮ್ಮ ಪುರುಷ ಸಮಾಜ ಎಂದೂ ಚಿಂತಿಸುವುದಿಲ್ಲ. ಗಂಡ ಷಂಡನಾಗಿದ್ದರೂ, ಮನೆತನದ ಮರ್ಯಾದೆಯನ್ನು ಕಾಪಾಡಬೇಕೆಂದು, ಗಂಡಸರ ಗುಟ್ಟನ್ನು ರಟ್ಟುಮಾಡದೇ ಹೆಣ್ಣು ತನ್ನ ಭಾವನೆಗಳನ್ನು ಅದುಮಿಟ್ಟುಕೊಂಡು ಬದುಕುವುದು ಅವಳ ಕರ್ತವ್ಯವಾಗಿದೆ. ಸಿಂಗಾರವ್ವ ತನ್ನ ಗಂಡನಿಗೆ ಸುಖ ಕೊಡಲು ಸಿದ್ಧಳಿದ್ದರೂ ದೇಸಾಯಿ ಬೇರೆ ಹೆಣ್ಣುಗಳನ್ನು ಅರಸಿ ಹೋಗುವುದು ತಪ್ಪಲ್ಲ. ಆದರೆ ಇದೇ ಕೆಲಸ ಹೆಣ್ಣು ಮಾಡಿದರೆ ಮಹಾಪರಾಧ! ಸಮಾಜದ ಕಣ್ಣಲ್ಲಿ ಅವಳು ವ್ಯಭಿಚಾರಿ, ಚಾರಿತ್ರ್ಯಹೀನಳಾಗುತ್ತಾಳೆ. ಇದು ನಮ್ಮ ಸಮಾಜದಲ್ಲಿ ಹೆಣ್ಣಿನ ಬಗೆಗಿರುವ ದೃಷ್ಟಿಕೋನವನ್ನು ಸೂಚಿಸುತ್ತದೆ. ತಂದೆಗೆ ಹೆಗ್ಗಳಿಕೆಯ ವಸ್ತುವಾದರೆ, ಸರಗಂ ದೇಸಾಯಿಗೆ ಪ್ರದರ್ಶನದ ಗೊಂಬೆ, ಇನ್ನು ಮರ್ಯಾನಿಗೆ ಸಿಹಿನ ಆಗರ ಸಿಂಗಾರವ್ವ!.

ದೇಸಾಯಿ ಸಿಂಗಾರವ್ವನೊಂದಿಗೆ ತೋರುವ ಋಣಾತ್ಮಕ ಭಾವನೆಗಳು ಮತ್ತು ತನ್ನ ಮೂಲಭೂತ ಕರ್ತವ್ಯದಿಂದ ಚ್ಯುತನಾದಾಗ, ಅನಿವಾರ್ಯವಾಗಿ ಮರ್ಯಾ ಸಿಂಗಾರವ್ವನ ಹೃದಯದಲ್ಲಿ ಸ್ಥಾನ ಪಡೆಯುತ್ತಾನೆ. ಬಾಲ್ಯದಿಂದಲೂ ಸಿಂಗಾರವ್ವ ಕಟ್ಟಿಕೊಂಡ ಕನಸು ಮಕ್ಕಳನ್ನು ಪಡೆಯಬೇಕೆಂಬುದು. ಮರ್ಯಾನಿಂದ ಆ ಆಸೆ ಫಲಿಸಿದಾಗ ಸಂತೋಷಗೊಳ್ಳುತ್ತಾಳೆ ಈ ರೀತಿಯಲ್ಲಿ ಸಿಂಗಾರವ್ವ ಗರ್ಭಧರಿಸಿದ್ದು ಅನೈತಿಕವೆಂದು ಅವಳ ಗರ್ಭದಲ್ಲಿರುವುದೂ ಹಾದರದ ಕೂಸೆಂದು ಹೇಳಿ ,ಗರ್ಭಕ್ಕೆ ತಲೆಯಿಂದ ಹಾಯ್ದು ನಾಶಪಡಿಸಲು ಪ್ರಯತ್ನಿಸುತ್ತಾನೆ. ಇಲ್ಲಿ ತನ್ನ ತಪ್ಪನ್ನು ಮುಚ್ಚಿಕೊಂಡು ಅಮಾನವೀಯವಾಗಿ ವರ್ತಿಸುವುದು ಅತ್ಯಂತ ಹೇಯವಾದುದು. ದೇಸಾಯಿ ಹಾದರದ ಕೂಸು ಎಂದು ಹೇಳಿದ್ದನ್ನು ಕೇಳಿದ ಸಿಂಗಾರವ್ವ ''ನೀನು ಗಂಡಸಾಗಿದ್ದರ ನಾ ಅಮ್ಮೀದರಾಗ ಈ ಅರಮನೆ ತುಂಬ ಮಕ್ಕಳ್ನ ಹಡೀತಿದ್ದೆ-ಆ ಮಕ್ಕಳೆಲ್ಲ ಅರಮನೆ ತುಂಬ ಗಲಗಲ ಗದ್ದಲ ಮಾಡಿಕೊಂಡ ಆಡತಿದ್ದರ, ಆಗ ನಿನ್ನ ಅರಮನಿ ಚಂದ ನೋಡಬೇಕಿತ್ತು''೧೧ ಇಲ್ಲಿ ಸಿಂಗಾರವ್ವ ಆಡುವ ಒಂದೊಂದು ಮಾತುಗಳೂ ದೇಸಾಯಿಯನ್ನು ಆಘಾತಗೊಳಿಸುತ್ತವೆ. ಅವನ ಗಂಡಸುತನವನ್ನೇ ಪ್ರಶ್ನಿಸುತ್ತವೆ.

ಸಿಂಗಾರವ್ವ ಮೊದಲಿನಿಂದಲೂ ಒಬ್ಬ ಆದರ್ಶ ಹೆಣ್ಣಾಗಿ ಚಿತ್ರಿತವಾಗಿದ್ದಾಳೆ. ಹಿರಿಯ ದೊರೆಸಾನಿಯ

ಒತ್ತಾಸೆಯನ್ನು ಈಡೇರಿಸಲೋ, ವಂಶ ಬೆಳೆಯ ದೃಷ್ಟಿಯಿಂದಲೋ, ದೇಸಾಯಿಯ ನಿಷ್ಕ್ರಿಯತೆಯಿಂದಲೋ ಅವಳು ಮರ್ಯಾನೊಂದಿಗೆ ಸೇರುತ್ತಾಳೆಯೇ ವಿನಃ ತನ್ನ ಮನಸ್ಸಿಗೊಪ್ಪಿ ದೈಹಿಕ ಕಾಮನೆಗಳಿಂದಾಗಿ ಅಲ್ಲವೆಂಬುದಕ್ಕೆ ಕಾದಂಬರಿಯಲ್ಲಿ ಹಲವು ನಿದರ್ಶನಗಳಿವೆ.

ದೇಸಾಯಿಯು ತಾನು ಸತ್ತ ಮೇಲೂ ಸಹ, ಸಿಂಗಾರೆವ್ವ ಶೋಷಣೆಯ ವರ್ತುಲದಿಂದ ಮುಕ್ತಳಾಗುವುದಿಲ್ಲ. ದೇಸಾಯಿ ಬರೆದಿಟ್ಟ ಪತ್ರದ ಕಾರಣದಿಂದ ಅವಳು ತಾನೇ ಕೊಲೆಗಾರಳೆಂದು ಒಪ್ಪಿಕೊಂಡು ಜೈಲು ಸೇರುವ ಸನ್ನಿವೇಶವು ಅತ್ಯಂತ ಹೃದಯವಿದ್ರಾವಕವಾಗಿದೆ. ಹೀಗೆ ಜೈಲು ಸೇರಿದ ಸಿಂಗಾರೆವ್ವ ರವಿಚಂದ್ರನಿಗೆ ಜನ್ಮಕೊಡುವುದರಲ್ಲಿ ಹೊಸ ಮೌಲ್ಯಗಳ ಹುಟ್ಟಿದೆ, ಜೊತೆಗೆ ಅರಮನೆಯನ್ನು ಶಾಲೆಗೆ ದಾನ ಕೊಡುವುದರಲ್ಲಿ ಉದಾತ್ತತೆ ಇದೆ. ಸಿಂಗಾರೆವ್ವನ ಬಯಕೆಯ ಬೀಜ ಮೊಳೆಯುವುದು ಈ ಆಶಯದಲ್ಲಿದೆ.

ಕಾದಂಬರಿಯ ಒಡಲೊಳಗೆಲ್ಲ ಸಿಂಗಾರೆವ್ವನ ಶೋಷಣೆಯೇ ವಿಜೃಂಭಿಸಿದೆ. ಅವಳ ಅಂತರಾಳದ ಬೇಗುದಿ ಪ್ರತಿ ಪುಟದಲ್ಲಿಯೂ ಸೇರಿಕೊಂಡಿದೆ. ಕಂಬಾರರ ಈ ಕಾದಂಬರಿಯು ವಸ್ತು ಮತ್ತು ತಂತ್ರದ ದೃಷ್ಟಿಯಿಂದ ಎಮಿಲಿ ಬ್ರಾಂಟಿಯ ಪ್ರಸಿದ್ಧ ರಮ್ಯ ಕಾದಂಬರಿ 'ವುದರಿಂಗ ಹೈಟ್ಸ್'ನ್ನು ಹೋಲಿಸಿ ಆವೆರಡರಲ್ಲೂ ಸಾಮ್ಯತೆ ಇರುವುದೆಂದು ಆರ್ಕೆ ಮಣಿಪಾಲ ಅವರು 'ಸಾಹಿತ್ಯ: ಆಶಯ ಮತ್ತು ವಿನ್ಯಾಸ' ಎಂಬ ಕೃತಿಯಲ್ಲಿ ಅಭಿಪ್ರಾಯ ಪಡುತ್ತಾರೆ.

ಸ್ವಾತಂತ್ರ್ಯೋತ್ತರದ ಸಂದರ್ಭದಲ್ಲಿ ಬರುವ ಚದುರಂಗರ ವೈಶಾಖ ಕಾದಂಬರಿಯಲ್ಲಿ ರುಕ್ಮಿಣಿಯ ಬದುಕು ಕೂಡಾ ಅತ್ಯಂತ ಶೋಚನೀಯ ಮಟ್ಟದ್ದಾಗಿದೆ. ಸಿಂಗಾರೆವ್ವನಂತೆ ಅವಳೂ ಪುರುಷ ಶೋಷಣೆಗೆ ಗುರಿಯಾಗುತ್ತಾಳೆ. ಸಿಂಗಾರೆವ್ವ ಬಂಜೆ ಪಟ್ಟದಿಂದ ಮುಕ್ತಳಾಗಲು ಮರ್ಯಾನೊಂದಿಗೆ ಸೇರಿದರೆ, ರುಕ್ಮಿಣಿ ಜೈವಿಕ ಒತ್ತಡದಿಂದ ಲಕ್ಕನನ್ನು ಸೇರುವಲ್ಲಿ ಸಾಮ್ಯತೆಯಿದೆ. ಆದರೆ ರುಕ್ಮಿಣಿ ಮಾವಯ್ಯ ಕೃಷ್ಣಶಾಸ್ತ್ರಿಯ ಲೈಂಗಿಕ ಶೋಷಣೆಗೆ ಬಲಿಯಾಗುತ್ತಾಳೆ. ಇದೇ ಸಂದರ್ಭದಲ್ಲಿ ಬರೆಯುವ ಇತರ ಪ್ರಮುಖ ಬರಹಗಾರರಾದ ಬರಗೂರ ರಾಮಚಂದ್ರಪ್ಪ, ಕುಂ. ವೀರಭದ್ರಪ್ಪ ಹಾಗೂ ಇನ್ನುಳಿದವರು ಲಿಂಗಭೇದದ ವಿರುದ್ಧ ಬಂಡೆದ್ದಿದ್ದಾರೆ. ಗಂಡು-ಹೆಣ್ಣುಗಳ ಸಮಾನತೆಯ

ವಿರುದ್ಧ ತಮ್ಮ ಸಾಹಿತ್ಯದಲ್ಲಿ ಪ್ರಖರವಾದ, ದಿಟ್ಟವಾದ ನಿಲುವು ತಳೆದಿದ್ದಾರೆ.

ಒಟ್ಟಾರೆಯಾಗಿ ನವ್ಯೋತ್ತರ ಕಾಲಘಟ್ಟದಲ್ಲಿ ಬರುವ 'ಸಿಂಗಾರೆವ್ವ ಮತ್ತು ಅರಮನೆ' ಒಂದು ಪ್ರಮುಖ ಕಾದಂಬರಿಯಾಗಿದೆ. ಗೌತ, ದೇಸಾಯಿ ಮತ್ತು ಮಂಗ್ಯಾ ಈ ಮೂವರು ಸಿಂಗಾರೆವ್ವನ ಜೀವನವನ್ನು ಬೇರೆ-ಬೇರೆ ಕೋನಗಳಿಂದ ಪ್ರವೇಶಿಸಿ, ಪರಸ್ಪರ ಸಂಬಂಧಗಳಲ್ಲಿ ಮತ್ತು ಸಿಂಗಾರೆವ್ವನೊಡನೆ ಸಂಬಂಧದಲ್ಲಿ ಒಟ್ಟಿಗೇ ನಿಜವಾಗಿ ಕಾಣುತ್ತಾರೆ. ಇಂಥ ಸಂಕೀರ್ಣ ಸಂಬಂಧಗಳಲ್ಲಿ ಇಷ್ಟು ಸಹಜವಾಗಿಯೇ ತಂದೊಡ್ಡುವ ನೂರು ಬಗೆಯ ಸವಾಲುಗಳಲ್ಲಿ ಸಿಂಗಾರೆವ್ವ ವ್ಯಕ್ತಿತ್ವ ಅದರಲ್ಲೂ ಆಳ ಅಗಲಗಳಲ್ಲಿ ಎದ್ದು ನಿಲ್ಲುತ್ತದೆ.''೧೨ ಎನ್ನುವ ಟಿ.ಪಿ. ಅಶೋಕ ಅವರ ಮಾತಿನಲ್ಲಿ ತಥ್ಯವಿದೆ.

ಪುರುಷ ಪ್ರಧಾನ ಸಾಮಾಜಿಕ ವ್ಯವಸ್ಥೆಯಲ್ಲಿ ಹೆಣ್ಣಿಗೆ ಸ್ವತಂತ್ರ ವ್ಯಕ್ತಿತ್ವವಿಲ್ಲ. ಅವಳು ಗಂಡು ಹೇಳಿದಂತೆ ಕೇಳಿಕೊಂಡು ಬಿದ್ದಿರಬೇಕೆಂಬುದು ಪರಂಪರಾಗತವಾಗಿ ನಡೆದುಕೊಂಡು ಬಂದಿರುವ ಪದ್ಧತಿಯಾಗಿದೆ. ಆದರೆ ಅದಕ್ಕೂ ಒಂದು ಮಿತಿ ಇರುತ್ತದೆ. ಅದು ಮೀರಿದ ಮೇಲೆ ಸಿಟ್ಟುಗೊಳ್ಳುವುದು ಅನಿವಾರ್ಯ ಅಲ್ಲವೇ?

ಚಂದ್ರಗಿರಿಯ ತೀರದಲ್ಲಿ

ಕನ್ನಡ ಸಾಹಿತ್ಯದಲ್ಲಿ ಸಂದರ್ಭದಲ್ಲಿ ಶಿಶುನಾಳ ಷರೀಫ ಸಾಹೇಬರಿಂದ ಮುಸ್ಲಿಂ ಸಾಹಿತಿಗಳ ಪರಂಪರೆ ಪ್ರಾರಂಭಗೊಳ್ಳುತ್ತದೆ. ಶಿಶುನಾಳರ ತತ್ವಪದಗಳು ಹಿಂದೂ ಸಂಸ್ಕೃತಿಯ ಆಧ್ಯಾತ್ಮದ ನೆಲೆಯವೇ ಆಗಿವೆ. ಆದರೆ ನವ್ಯೋತ್ತರದ ಸಂದರ್ಭದ ,ಮುಸ್ಲಿಂ ಲೇಖಕರ ಕೃತಿಗಳಲ್ಲಿ ಮುಸ್ಲಿಂ ಸಂಸ್ಕೃತಿಯ ಬದುಕಿನ ಒಳನೋಟಗಳನ್ನು ಮತ್ತು ಧಾರ್ಮಿಕ ಆಚಾರಗಳ ಮಾನವ ವಿರೋಧಿ ಅಂಶಗಳ ಮೂರ್ತ ಚಿತ್ರಣವನ್ನು ನಾವು ಗಮನಿಸಬಹುದು. ಹೀಗಾಗಿ ನವ್ಯೋತ್ತರ ಸಾಹಿತ್ಯಕ್ಕೆ ಹೊಸಗನ್ನಡ ಸಾಹಿತ್ಯದಲ್ಲಿ ಮಹತ್ವದ ಸ್ಥಾನವಿದೆ.

ನವ್ಯೋತ್ತರ ಸಾಹಿತ್ಯದ ನೆಲೆ ವ್ಯಾಪಕವಾದುದು. ವೈದಿಕ ಅವೈದಿಕಗಳೇ ಅಲ್ಲದೆ , ಮುಸ್ಲಿಂ ಹಾಗೂ ದಲಿತ ಸಂಸ್ಕೃತಿಯ ಅನುಭವಗಳನ್ನು ಮೈಗೂಡಿಸಿಕೊಂಡಿದೆ. ಮುಸ್ಲಿಂ ಸಂಸ್ಕೃತಿಯನ್ನು ಆ ಜನಾಂಗದಿಂದ ಬಂದಿರುವ ಲೇಖಕರೇ ಬರೆದಾಗ ಅದು ಅತ್ಯಂತ ವಸ್ತುನಿಷ್ಠವಾಗಿಯೂ ಮತ್ತು ಸಹಜವಾಗಿಯೂ ಅಭಿವ್ಯಕ್ತಿಸಲು ಸಾಧ್ಯವಾಗುತ್ತದೆ. ಈ ಹಿನ್ನೆಲೆಯಲ್ಲಿ ಸಾರಾ ಅಬೂಬಕ್ಕರ್, ಬಾನುಮುಷ್ತಾಕ್ , ಬೋಳುವಾರು ಮಹ್ಮದ್ ಕುಂಞ, ಫಕೀರ್ ಮಹ್ಮದ್ ಕಟ್ಪಾಡಿ ಮುಂತಾದವರ ಕೃತಿಗಳು ಪ್ರಮುಖವೆನಿಸುತ್ತವೆ.

ಸಾರಾ ಅಬೂಬಕ್ಕರ್ ಮುಸ್ಲಿಂ ಮಹಿಳೆಯರ ದಾರುಣ ಬದುಕನ್ನು ಕುರಿತು ಚಿತ್ರಿಸಿದ್ದಾರೆ. ಬುರುಖಾದ ಹಿಂದೆ ನವೆಯುವ ಬದುಕಿನ ದುರಂತವನ್ನು, ಧಾರ್ಮಿಕ ಅನ್ಯಾಯವನ್ನು ,ಧರ್ಮದ ಕಟ್ಟಳೆಗಳನ್ನು ಮೆಟ್ಟಿ ನಿಂತು ದಿಟ್ಟತನದಿಂದ ಅವುಗಳನ್ನು ಟೀಕಿಸಿದ್ದಾರೆ. ಪುರುಷ ಪ್ರಧಾನ ಸಮಾಜ ಮಹಿಳೆಯನ್ನು ಯಾವ ರೀತಿ ಶೋಷಿಸುತ್ತದೆ ಎಂಬುದು ಅವರ ಕೃತಿಗಳ ಮುಖ್ಯದನಿ. ಸಂಪ್ರದಾಯವಾದಿಗಳ ಕಪಿಮುಷ್ಟಿಯಲ್ಲಿ ಮಹಿಳೆ ಸಿಲುಕಿ ಎಂಥ ಸಂಕಷ್ಟ ಅನುಭವಿಸುತ್ತಾಳೆ ಎನ್ನುವುದೇ ಇವರ ಒಟ್ಟು ಸಾಹಿತ್ಯದ ಮಥಿತಾರ್ಥ.

ಸಾರಾ ಅವರ ಕೃತಿಗಳಲ್ಲಿ 'ಚಂದ್ರಗಿರಿಯ ತೀರದಲ್ಲಿ ' ಪ್ರಮುಖ ಕೃತಿ . ಈ ಹಿಂದೆ ಇದು ಸಾಕಷ್ಟು ವ್ಯಾಪಕವಾದ ಚರ್ಚೆಗೂ ಒಳಗಾಗಿದೆ. ಈ ಕೃತಿಯ ಮುನ್ನುಡಿಯಲ್ಲಿ ಸಾರಾ ಅವರು 'ಧರ್ಮಗ್ರಂಥಗಳಲ್ಲಿರುವುದನ್ನು ನಿತ್ಯ ಜೀವನದಲ್ಲಿ ಅನುಷ್ಠಾನಕ್ಕೆ ತರುವಾಗ ಹೆಣ್ಣಾದವಳು ಯಾವ ರೀತಿಯ ಮಾನಸಿಕ ಚಿತ್ರಹಿಂಸೆಗೆ

ಗುರಿಯಾಗುತ್ತಾಳೆಂದು ಹೇಳುವುದೇ ನನ್ನ ಉದ್ದೇಶವಾಗಿದೆ ಎಂದಿದ್ದಾರೆ. ಲೇಖಕಿ ಸಾರಾ ಅವರು ಈ ಕೃತಿಯಲ್ಲಿ ಮುಖ್ಯವಾದ ಸಮಸ್ಯೆಗಳಿಗೆ ಒತ್ತು ನೀಡುತ್ತಾರೆ. 'ಧರ್ಮವೆಂಬುದು ಒಂದು ಅಫೀಮು ಇದ್ದಂತೆ'. ಇಂಥ ಧಾರ್ಮಿಕ ವ್ಯವಸ್ಥೆಯಲ್ಲಿ ಪುರುಷ ಸ್ತ್ರೀಯನ್ನು ನಡೆಸಿಕೊಳ್ಳುವ ರೀತಿ, ಮಹಿಳೆಯ ಶೋಷಣೆಯ ಸ್ಥಿತಿ, ಹೆಣ್ಣು ಗಂಡೆಂಬ ತಾರತಮ್ಯ, ಪುರುಷ ಪ್ರಾಬಲ್ಯದಡಿಯಲ್ಲಿ ಸ್ತ್ರೀ ದಾಸ್ಯತೆ, ಗಂಡು ತನ್ನ ಮೇಲೆ ನಡೆಸುವ ಅನ್ಯಾಯ, ಪುರುಷಾಧಿಕಾರದ ಏಕಸ್ವಾಮ್ಯಗಳನ್ನು ಚಂದ್ರಗಿರಿಯ ತೀರದಲ್ಲಿ ಶೋಧಿಸುವ ಯತ್ನ ಮಾಡಲಾಗಿದೆ. 'ಚಂದ್ರಗಿರಿಯ ತೀರದಲ್ಲಿ ಕಾದಂಬರಿಯ ಸಂಕ್ಷಿಪ್ತ ರೂಪ ಹೀಗಿದೆ.

ಕಾದಂಬರಿಯ ನಾಯಕಿ ನಾದಿರಾ ನಿಕಾಹ್ ಮಾಡಿಕೊಂಡ ರಶೀದನೊಂದಿಗೆ ನೆಮ್ಮದಿಯ ಜೀವನ ನಡೆಸುತ್ತಿರುತ್ತಾಳೆ. ಈ ಮಧ್ಯೆ ಗಂಡುಮಗುವೊಂದು ಹುಟ್ಟಿ ಅವರನ್ನು ಇನ್ನಷ್ಟು ಹತ್ತಿರಕ್ಕೆ ತರುತ್ತದೆ. ತವರು ಮನೆ ಕಳಿಯೂರು ಮತ್ತು ಗಂಡನ ಮನೆ ಕಾವಳಿಗಳ ನಡುವೆ ಚಂದ್ರಗಿರಿ ನದಿ ಹರಿಯುತ್ತದೆ. ನಾದಿರಾಳ ತಂದೆ ಮಹಮ್ಮದ್‌ಖಾನರಾಗಲಿ, ಗಂಡ ರಶೀದನಾಗಲಿ ಆಕ್ಷೇಪ ಹೇಳಿಕೊಳ್ಳುವಂಥ ಸ್ಥಿತಿವಂತರಲ್ಲ.

ಮಹಮ್ಮದ್‌ಖಾನರು ತಮ್ಮ ಹಿರಿಯ ಮಗಳು ಜಮೀಲಳ ಮದುವೆಯ ಖರ್ಚಿಗಾಗಿ ಅಳಿಯ ರಶೀದನಲ್ಲಿ ಹಣದ ಸಹಾಯ ಕೇಳುತ್ತಾರೆ. ರಶೀದ ತನ್ನಲ್ಲಿ ಹಣವಿಲ್ಲವೆಂದು ವಾಸ್ತವ ಸ್ಥಿತಿಯನ್ನು ಹೇಳುತ್ತಾನೆ. ಆದರೆ ಮಹಮ್ಮದ್‌ಖಾನರು ಇದರಿಂದ ತಪ್ಪು ತಿಳಿದುಕೊಂಡು ಅಳಿಯನ ಮೇಲೆ ಕೋಪಗೊಂಡು ತವರ ಮನೆಗೆ ಮಗಳನ್ನು ಕರೆದುಕೊಂಡು ಹೋಗುತ್ತಾರೆ. ಹೀಗೆ ಅಳಿಯ ಮಾವನಲ್ಲಿ ಉಂಟಾದ ಮನಸ್ತಾಪ ನಾದಿರಾಳ ಬದುಕನ್ನೇ ಧ್ವಂಸಗೊಳಿಸುತ್ತದೆ. ಧಾರ್ಮಿಕ ಸಂಕೋಲೆಯಲ್ಲಿ ಸಿಕ್ಕು ತಲ್ಲಾಕದ ಕಾರಣದಿಂದಾಗಿ ಗಂಡ ಹೆಂಡತಿ ಬೇರ್ಪಡುತ್ತಾರೆ. ಪುನಃ ಎರಡನೇ ಮದುವೆಯಾಗಲು ಒಪ್ಪದ ನಾದಿರಾಳ ಜೀವನ ಸಾವಿನಲ್ಲಿ ಪರ್ಯಾವಸಾನವಾಗುವದರೊಂದಿಗೆ ಕಾದಂಬರಿ ಕೊನೆಗೊಳ್ಳುತ್ತದೆ.

ನಾದಿರಾ ಬದುಕಿನಲ್ಲಿ ಬಿರುಕು ಉಂಟಾಗುವುದೇ ಅವಳ ತಂದೆ ಮಹಮ್ಮದ್‌ಖಾನರಿಂದ. ಜಮೀಲಾಳ ಮದುವೆಗೆ ವರದಕ್ಷಿಣೆಯ ಹಣ ಹೊಂದಿಸುವದಕ್ಕಾಗಿ ಮಹಮ್ಮದ್ ಖಾನ ರಶೀದನಲ್ಲಿ ಸಹಾಯ ಕೇಳಲು ಹೋಗುವುದರಿಂದಲೇ

ನಾದಿರಾಳ ಬದುಕಿನ ಬುನಾದಿ ಅದುರುತ್ತದೆ. ವರದಕ್ಷಿಣೆಯೆಂಬ ಪೆಡಂಭೂತದಿಂದಲೇ ದೇಶದಲ್ಲಿ ಮಹಿಳೆಯರು ಪುರುಷರಿಡುವ ಚಿತ್ರಹಿಂಸೆಗೆ ಒಳಗಾಗುತ್ತಾರೆ. ಶೋಷಣೆಗೆ ಗುರಿಯಾಗುತ್ತಾರೆ. ಆದರೆ ಇಲ್ಲಿಯ ಸಂದರ್ಭ ಮಾತ್ರ ಸ್ವಲ್ಪ ಭಿನ್ನವಾಗಿದೆ.

042161

ಬೆಳೆದುನಿಂತ ಮಗಳು ಜಮೀಲಾಳ ಮದುವೆಗೆ ರಶೀದನಲ್ಲಿ ಹಣ ಕೇಳುವುದೇನೋ ಸರಿ. ಅವನಲ್ಲಿ ಹಣ ದೊರೆಯದಿದ್ದರೆ ನಾದಿರಾಳನ್ನು ಕರೆದುಕೊಂಡು ಹೋಗಿ ಅವಳ ಸಂಸಾರ ಒಡೆಯುವುದರಲ್ಲಿ ಅರ್ಥವೇನಿದೆ ? ಇದರಲ್ಲಿ ಅವಳ ತಪ್ಪೇನಿದೆ ಎನ್ನುವ ಪ್ರಶ್ನೆ ಸಹಜವಾಗಿ ಮೂಡುತ್ತದೆ. ರಶೀದ ಖಾನ ಮತ್ತು ಮುಸ್ತಫ ಖಾನರ ನಡುವೆ ಏರ್ಪಟ್ಟ ವೈಮನಸ್ಸಿನಿಂದ ನಾದಿರಾಳ ಸುಂದರ ಬದುಕು ಅಲ್ಲೋಲ ಕಲ್ಲೋಲವಾಗುತ್ತದೆ. ಅಳಿಯನ ಮೇಲಿನ ಸಿಟ್ಟು ಮಗಳ ಬಾಳಿನ ಕೇಡಾಗಿ ಪರಿಣಮಿಸುತ್ತದೆ. ಮಗಳ ಸಂಸಾರವನ್ನು ಒಡೆಯುವ ಮನಸ್ಸು ಮುಸ್ತಫ ಖಾನರಲ್ಲಿಲ್ಲ. ಆದರೆ ಖಾನರ ಆರ್ಥಿಕ ಸ್ಥಿತಿಯ ಜೊತೆಗೆ ಅವರ ಹಠ ನಾದಿರಾಳ ಕೌಟುಂಬಿಕ ವಿಘಟನೆ ಕಾರಣವಾಗುತ್ತದೆ. ಅನ್ಯೋನ್ಯವಾಗಿದ್ದ ಪತಿ ಪತ್ನಿಯರನ್ನ ಅಗಲಿಸಿ ಒಂದು ಹೆಣ್ಣನ್ನು ಕಣ್ಣೀರಿನಲ್ಲಿ ಕೈತೊಳೆಯುವಂಥ ಸ್ಥಿತಿಗೆ ಕಾರಣವಾದ ಮುಸ್ತಫ ಖಾನರ ನಡವಳಿಕೆ ಪುರುಷ ಪಾರಮ್ಯಕ್ಕೆ ಸಾಕ್ಷಿಯಾಗಿದೆ. ಜಮೀಲಾಳ ವಿವಾಹದ ನಂತರ ಮುಸ್ತಫ ಖಾನರ ಆರ್ಥಿಕ ಸ್ಥಿತಿ ಮತ್ತಷ್ಟು ಹದಗೆಡುತ್ತದೆ. ಜಮೀಲಾಳ ಸ್ಥಾನದಲ್ಲಿ ಈಗ ನಾದಿರಾ ಬೀಡಿಕಟ್ಟಿ ಮನೆ ನಿಭಾಯಿಸುತ್ತಾಳೆ. ಇದರಿಂದ ಮುಸ್ತಫ ಖಾನರು ಮಗಳನ್ನು ಪುನಃ ಗಂಡನ ಮನೆಗೆ ಕಳಿಸದಿರುವುದಕ್ಕೆ ನಾದಿರಾಳೇ ಕಂಡುಕೊಳ್ಳುವ ಕಾರಣ ಉತ್ತರದಲ್ಲಿ 'ತಂದೆ ಎಂದೂ ತನ್ನನ್ನು ಕಳುಹಿಸಲಾರರು. ಕಳಿಸಿದರೆ ಇಲ್ಲಿ ಬೀಡಿ ಕಟ್ಟುವವರಾರು? ಬೀಡಿ ಕಟ್ಟದೆ ಹೋದರೆ, ಆ ಆದಾಯವಿಲ್ಲದೆ ಹೋದರೆ ತಂದೆಗೆ ಬದುಕು ಕಷ್ಟವಾಗುತ್ತದೆ'೧೩ ಎನ್ನುವಲ್ಲಿ ಹೆಣ್ಣು ಹಗಲು ರಾತ್ರಿ ಗಾಣದೆತ್ತಿನಂತೆ ದುಡಿಯಬೇಕೆಂಬುದು ಗಂಡಸಿನ ಅಭಿಪ್ರಾಯ. ನಾಲ್ಕು ಗೋಡೆಗಳ ಮಧ್ಯ ಬಂಧಿಯಾಗಿ ಜೀವಿಸುವುದೇ ಹೆಣ್ಣಿನ ಪರಮಗಂತವ್ಯ ಎಂದು ಗಂಡು ಭಾವಿಸುತ್ತದೆ. ಅವಳ ನೋವು, ನಲಿವು, ಸುಖ-ದುಃಖಗಳ ಬಗ್ಗೆ ಎಂದೂ ತಲೆಕೆಡಿಸಿಕೊಳ್ಳುವುದಿರುವುದು ಹೆಣ್ಣಿನ ನಿರ್ಲಕ್ಷ್ಯವನ್ನು, ಪುರುಷವರ್ಗದ ಪಾರಮ್ಯವನ್ನು ನಿದರ್ಶಿಸುತ್ತದೆ.

ನಾದಿರಾ ತನ್ನ ಗಂಡನನ್ನು ಪುನಃ ಸೇರಲು ಕಾವಳ್ಯಗೆ ಕಳಿಸಿಕೊಡಲು ತಾಯಿಯನ್ನು ಅಂಗಲಾಚಿ

AKSHARA GRANTHALAYA
ACCN NO:042161

ಕೇಳಿಕೊಳ್ಳುವಲ್ಲಿ ಅವಳ ಮನೋವೇದನೆ ಅರ್ಥವಾಗುತ್ತದೆ. ಅವಳನ್ನು ಕಳುಹಿಸುವ ಸ್ವಾತಂತ್ರ್ಯ ತಾಯಿಗೂ ಇಲ್ಲ. ಇಲ್ಲಿ ಅವಳೂ ಪರತಂತ್ರಳೇ! ಬಾಯಿಯಿದ್ದೂ ಮೂಕಳಾಗಿದ್ದಾಳೆ. ಮಗಳ ಪರವಾಗಿ ಮಾತನಾಡಿ ಫಾತಿಮಾ ಮುಕ್ರಿಶಾನರಿಂದ ಒಂದೆರಡು ಸಲ ಏಟನ್ನು ತಿಂದಿದ್ದಾಳೆ. ಹೀಗಾಗಿ ಅವರ ಎದುರು ನಿಂತು ಯಾರೊಬ್ಬರೂ ಬಾಯಿತೆರೆದು ಮಾತನಾಡದಂಥ ಸ್ಥಿತಿಯನ್ನು ಮುಕ್ರಿಶಾನ ನಿರ್ಮಾಣಮಾಡಿದ್ದಾರೆ. ತನ್ನ ಮೇಲೆ ಎಷ್ಟೇ ಘೋರವಾದ ಅನ್ಯಾಯ ಶೋಷಣೆ ನಡೆದರೂ ಕೂಡಾ,ಯಾವ ಸ್ತ್ರೀಪಾತ್ರವೂ ಪುರುಷನ ದೌರ್ಜನ್ಯವನ್ನು ಪ್ರತಿಭಟಿಸಿ ಪ್ರಶ್ನಿಸುವ ಧೈರ್ಯ ತೋರಿಸುವುದಿಲ್ಲ.

ಸಮಾಜದಲ್ಲಿ ಗಂಡಸಿಗೆ ಎಷ್ಟೊಂದು ಮಹತ್ವವಿದೆ ಎಂಬುದನ್ನು ಇನ್ನೊಂದು ಉದಾಹರಣೆಯ ಮೂಲಕ ಲಕ್ಷಿಸಬಹುದು. ಮುಕ್ರಿಶಾನರು ರಹಿಮನಿಗೆ ತಿಳಿಸದೇ ಮಗಳನ್ನು ಕರೆತಂದ ಮೇಲೆ ನಾದಿರಾ ತವರುಮನೆಯಲ್ಲಿ ಇರತೊಡಗುತ್ತಾಳೆ. ಒಂದು ದಿನ ಆಚಾನಕ ಆಗಿ ಬಂದ ರಹಿಮನ ತಾಯಿ ಅಮಿನಾ,ಯಾರಿಗೂ ಹೇಳದೇ ಕೇಳದೇ ನಾದಿರಾಳ ಮಗುವನ್ನು ಎತ್ತಿಕೊಂಡು ಹೋಗುತ್ತಾಳೆ. ಇಲ್ಲಿ ಒಂದು ಅಂಶ ಬಹಳ ಮುಖ್ಯವೆನಿಸುತ್ತದೆ. ಅದೇ ಮಗು ಹೆಣ್ಣಾಗಿದ್ದರೆ ಅಮಿನಾ ಆ ಮಗುವನ್ನು ಒಯ್ಯುವ ಪ್ರಮೇಯವೇ ಬರುತ್ತಿರಲಿಲ್ಲ. ಹೀಗಾಗಿ ಕಾದಂಬರಿಯ ಈ ಅಂಶ ಕೂಡಾ ಗಂಡು ಮುಖ್ಯವೆಂದು ಪರಿಗಣಿಸಿ, ಹೆಣ್ಣನ್ನು,ಹೆಣ್ಣು ಮಗುವನ್ನು ಗೌಣಗೊಳಿಸಿರುವ ಸ್ಪಷ್ಟಸೂಚನೆಯು ಎದ್ದುಕಾಣುತ್ತದೆ.

ಈ ಮೊದಲು ಹೇಳಿದ ಎಲ್ಲ ಸಂದರ್ಭಗಳಿಗಿಂತಲೂ,'ಆತ್ಮ ಒಂದು ದೇಹವೆರಡು' ಎಂಬಂತಿರುವ ಗಂಡ ಹೆಂಡತಿಯನ್ನು ತನ್ನ ಸ್ವಾರ್ಥಕ್ಕಾಗಿ ಬೇರ್ಪಡಿಸುವ ಮುಕ್ರಿಶಾನರ ಕೃತ್ಯ ಪುರುಷಕ್ರೌರ್ಯದ ಸಂಕೇತವಾಗಿದೆ. ನಾದಿರಾಳಿಗೆಗಂಡನ ಬಗೆಗೆ ಪ್ರೀತಿ ವಾತ್ಸಲ್ಯವಿರುತ್ತದೆ. ಆದರೂ ಮುಕ್ರಿಶಾನ ತನ್ನ ಮಗಳು ಅಳಿಯನೊಡನೆ ಸಂಸಾರ ಮಾಡಲು ಸಿದ್ಧಳಿಲ್ಲವೆಂದುಸುಳ್ಳುಹೇಳಿ 'ತಲ್ಲಾಕ' ಪಡೆಯುವುದರಿಂದ ಮಗಳ ಇಡೀ ಬದುಕನ್ನೇ ಛಿದ್ರ ವಿಛಿದ್ರಗೊಳಿಸುತ್ತಾನೆ.

ರಹಿಮ ತಲಾಕ ಹೇಳುವ ಕ್ರಿಯೆಯಲ್ಲಿಯೇ ಕಾದಂಬರಿಯು ಕೇಂದ್ರವಿರುವುದು; ಕಾದಂಬರಿ ಹೊಸ ತಿರುವು

ಪಡೆಯುವುದು. ಮೂರನೇ ತಲಾಖ್ ನೀಡಿದ ಮೇಲೆ ಗಂಡ ಹೆಂಡರ ಸಂಬಂಧ ಮುರಿದು ಬೀಳುತ್ತದೆ. ಧರ್ಮಸೂಕ್ಷ್ಮವನ್ನರಿಯದ ಪುರುಷವರ್ಗ ವಿಕೃತಿಯಿಂದ ವರ್ತಿಸುತ್ತದೆ. ಒಬ್ಬ ವ್ಯಕ್ತಿ ತನ್ನ ಹೆಂಡತಿಯನ್ನು ತ್ಯಜಿಸಬೇಕಾದರೆ'' ಮೂರು 'ತಲಾಖ್ ಅನ್ನು' ಬೇರೆ ಬೇರೆಯಾಗಿ ಒಂದೊಂದು ತಿಂಗಳ ಅಂತರದಲ್ಲಿ ಹೇಳಬೇಕು ಮತ್ತು ಮೂರನೇ ತಲಾಖ್ ಹೇಳುವವರೆಗೂ ಆಕೆ ಗಂಡನ ಮನೆಯಲ್ಲೇ ಜೀವಿಸಬೇಕು ಎಂದು ಖುರಾನ್ ಸ್ಪಷ್ಟಪಡಿಸಿದೆ. ಮೂರು ತಿಂಗಳು ಗಂಡ ಹೆಂಡತಿ ಒಂದೇ ಮನೆಯಲ್ಲಿದ್ದರೆ ಆ ಅವಧಿಯಲ್ಲಿ ಅವರ ಪುನರ್ಮೈತ್ರಿ ಆಗಿಯೇ ಆಗುತ್ತದೆ. ಎಂಬ ವಿಶ್ವಾಸದಿಂದ ಖುರಾನ್ ಈ ರೀತಿ ತಾಕೀತು ಮಾಡಿರಬಹುದು. ಮೂರು ತಿಂಗಳು ಜೊತೆಗಿದ್ದರೂ ಪುನರ್ಮೈತ್ರಿ ಸಾಧ್ಯವಾಗದಿದ್ದರೆ ಆ ದಾಂಪತ್ಯ ಪುನಃ ಚಿಗುರಲಾರದು; ಆದ್ದರಿಂದ ಆಕೆ ಬೇರೊಬ್ಬನನ್ನು ವಿವಾಹವಾಗಬಹುದು'[೧೪] ಇಲ್ಲಿಯ ದುರಂತವೆಂದರೆ ಒಂದೇ ಬಾರಿಗೆ ಮೂರು ತಲಾಖ್ ಹೇಳಿ ಹೆಣ್ಣಿನ ಬಾಳಿಗೆ ಕೊಳ್ಳಿ ಇಡುವ ಮುಸ್ಲಿಂ ಪುರುಷವರ್ಗ ಖುರಾನನ್ನು ಸರಿಯಾಗಿ ಅರ್ಥೈಸಿಕೊಳ್ಳದೇ ನಡೆಯುವ ಪರಿಯನ್ನು ಲೇಖಕಿ ಸಾರಾ, ಕಾದಂಬರಿಯಲ್ಲಿ ಬಯಲುಗೊಳಿಸುತ್ತಾರೆ.

ಒತ್ತಾಯದಿಂದ ರಶೀದ್‌ನಿಂದ ನಾದಿರಾಳ ತಲಾಖ್ ಪಡೆದ ಮುತ್ತ್ಯದ ಖಾನ ಅನಾರೋಗ್ಯದಿಂದ ಹಾಸಿಗೆಹಿಡಿದ ಮೇಲೆ ನಾದಿರಾ ತನ್ನ ಗಂಡ ಮತ್ತು ಮಗುವಿಗಾಗಿ ಹಂಬಲಿಸುತ್ತಾಳೆ. ಪುನಃ ಗಂಡನ ಮನೆಗೆ ಹೋಗಲು ಇಚ್ಛಿಸುತ್ತಾಳೆ. 'ಓರ್ವ ಮುಸ್ಲಿಂ ಮಹಿಳೆಗೆ ಆಕೆಯ ಗಂಡನು 'ತಲಾಖ್' ನೀಡಿದರೆ ಪುನಃ ಆ ಪತಿ ಪತ್ನಿಯರು ಒಂದುಗೂಡಲು ಬಹಳ ದೊಡ್ಡ ಅಡಚಣೆ ಇದೆ. ಈ ತಲಾಖ್ ಪದ್ಧತಿ ಕೂಡಾ ತೀರಾ ಏಕಪಕ್ಷೀಯವಾಗಿದ್ದು, ಓರ್ವ ಪುರುಷನು ಮೂರು ಬಾರಿ 'ತಲಾಖ್' ಎಂದು ಉಚ್ಚರಿಸಿ ತನ್ನ ಪತ್ನಿಯನ್ನು ವಿಚ್ಛೇದನಗೊಳಿಸಬಹುದಾಗಿದ್ದು, ಪತ್ನಿಯೋರ್ವಳು ತನ್ನ ಪತಿಯಿಂದ ವಿಚ್ಛೇದನ ಪಡೆಯುವುದು ಸುಲಭದ ಮಾತೇನೂ ಅಲ್ಲ. ಗಂಡನಾದವನು ಕ್ಷುಲ್ಲಕ ಕಾರಣ ನೀಡಿ ಹೆಂಡತಿಗೆ ವಿಚ್ಛೇದನ ನೀಡಿದರೂ ಅವರು ಪುನಃ ಒಂದುಗೂಡ ಬಯಸಿದರೆ ಪತ್ನಿಯಾದವಳು ಇನ್ನೊಬ್ಬನನ್ನು ವಿವಾಹವಾಗಿ ಆತನಿಂದ ವಿಚ್ಛೇದನಗೊಂಡವಳಾಗಿರಬೇಕೆಂಬುದು ಧರ್ಮದ ನಿಯಮ'[೧೫] ವಾಗಿದೆ. ನಾದಿರಾಗೆ ಈ ವಿಷಯ ತಿಳಿದಿರುವುದಿಲ್ಲ. ವಿದ್ಯಾಭ್ಯಾಸ ಪಡೆದಿದ್ದರೆ ಅವಳು ಈ ಸಂಕೋಲೆಯಿಂದ ಹೊರಬರುತ್ತಿದ್ದಳೇನೋ?

ಮೊದಲಿನ ಗಂಡನ ಜೊತೆ ಮತ್ತೆ ಸಂಸಾರ ಮಾಡುವುದಾದರೆ, ಮತ್ತೆ ಬೇರೊಬ್ಬನೊಂದಿಗೆ ನಿಕಾಹ್ ಮಾಡಿಕೊಂಡು ಆತನೊಂದಿಗೆ ಒಂದು ರಾತ್ರಿ ಕಳೆಯಬೇಕೆಂಬ ಮೌಲ್ವಿಗಳು ಹೇಳಿರುವುದನ್ನು ಕೇಳಿದ ನಾದಿರಾಳಿಗೆ ದಿಕ್ಕೇ ತಪ್ಪಿದಂತಾಗುತ್ತದೆ. "ಈ ಗಂಡಸರು ಹೇಳಿದಂತೆ ಒಂದು ರಾತ್ರಿ ಒಬ್ಬನ ಜೊತೆ ಕಳೆಯಲು, ಒಂದು ಹೊತ್ತು ತನ್ನ ದೇಹವನ್ನು ಒಬ್ಬನಿಗೆ ಒಪ್ಪಿಸಲು ನಾನೇನು ದನವೇ ? ಹೃದಯ, ಭಾವನೆಗಳೇನೂ ಇಲ್ಲದ ಒಂದು ಮೃಗ ನಾನು ಎನ್ನುವಂತೆ ಇವರು ವರ್ತಿಸುತ್ತಾರಲ್ಲ ? ಏನೇ ಆದರೂ, ಯಾರೋ ಒಬ್ಬನ ಜೊತೆಯಲ್ಲಿ ಒಂದು ರಾತ್ರಿ ಕಳೆಯಲು ನನ್ನಿಂದ ಸಾಧ್ಯವೇ ಇಲ್ಲ''[೧೬] ಎನ್ನುವ ನಿರ್ಧಾರಕ್ಕೆ ನಾದಿರಾ ಬರುತ್ತಾಳೆ.

ನಾದಿರಾ ಇಲ್ಲಿ ಯಾವ ತಪ್ಪನ್ನು ಮಾಡದಿದ್ದರೂ ಪುರುಷ ಮಾಡಿದ ತಪ್ಪಿಗಾಗಿ ಇಲ್ಲಿ ಶಿಕ್ಷೆಯನ್ನು ಅನುಭವಿಸಬೇಕಾಗುತ್ತದೆ. ಧರ್ಮ ನಿಜವಾಗಿಯೂ ಹೆಣ್ಣಿನ ಮೇಲೆ ಇಂತಹ ಒಂದು ನಿಯಮವನ್ನು ಹೇರಿದೆಯೇ ಎನ್ನುವ ಪ್ರಶ್ನೆಯನ್ನು ಲೇಖಕಿಯೇ ಕೇಳಿಕೊಳ್ಳುತ್ತಾಳೆ. 'ಧರ್ಮದ ನಿಯಮಗಳು ಪ್ರಶ್ನಾತೀತವಾಗಿವೆ. ಗಂಡು ಹೇಳುವುದನ್ನು ಹೆಣ್ಣು ಕೇಳಬೇಕೆ ಹೊರತು, ಗಂಡು ವಿಧಿಸುವುದನ್ನು ಹೆಣ್ಣು ತಲೆಬಾಗಿ ಸ್ವಾಗತಿಸಬೇಕೆ ಹೊರತು ಹೀಗೇಕೆ' ಎಂದು ಪ್ರಶ್ನಿಸುವ ಅಧಿಕಾರ ಹೆಣ್ಣಿಗೆ ಇಲ್ಲವೇ ಇಲ್ಲವಲ್ಲ ? ಮುಸ್ಲಿಂ ಹೆಣ್ಣಿಗೆ ಧ್ವನಿಯೇ ಇಲ್ಲ''[೧೭] ದಿರುವುದು ಕಾದಂಬರಿಯುದ್ದಕ್ಕೂ ಗೋಚರಿಸುತ್ತದೆ. ಮುಸ್ಲಿಂ ಸಮಾಜದಲ್ಲಿ ಪುರುಷರು ಸ್ತ್ರೀ ಶೋಷಣೆಗೆ ಸ್ವಾರ್ಥದ ಸಾಧನವನ್ನಾಗಿ ತಲಾಖನ್ನು ಹೇಗೆ ಬಳಸಿಕೊಳ್ಳುತ್ತ ಬರಲಾಗಿದೆ ಎಂಬುದನ್ನು ಇಲ್ಲಿ ಚಿತ್ರಿಸಿದ್ದಾರೆ. ಪುರುಷ ವರ್ಗದ ಹೇರಿಕೆಯು ಸ್ತ್ರೀ ಬದುಕಿನ ದುರಂತತೆಗೆಲ್ಲ ಕಾರಣವಾಗುತ್ತದೆ.

ಎರಡನೆಯ ಮದುವೆಗೆ ಇಷ್ಟವಿರದ ನಾದಿರಾ ಕೌಟುಂಬಿಕ ಒತ್ತಡಗಳಿಗೆ ಮಣಿಯುವುದು ತನ್ನ ಪ್ರೀತಿಯ ರಶೀದನನ್ನು ಪುನಃ ಸೇರುವ ಹಂಬಲದಿಂದ ಮಾತ್ರ. ತಂದೆಯ ವಯಸ್ಸಿನ ಅಲಿಯೊಡನೆ ಅವಳ ನಿಕಾಹ್ ನಡೆದೇ ಹೋಗುತ್ತದೆ. ಸ್ವಾಭಿಮಾನಿಯಾದ ನಾದಿರಾಳಿಗೆ ಅಲಿಯೊಡನೆ ಒಂದು ರಾತ್ರಿ ಕಳೆಯುವುದು ಅಸಹ್ಯವೆನಿಸುತ್ತದೆ. 'ಅಲ್ಲಾ ಕರುಣಿಸಿದರೆ ನಾವು ನ್ಯಾಯ ತೀರ್ಮಾನದ ದಿನ ಭೇಟಿಯಾಗೋಣ' ಎಂಬ ನಿರ್ಧಾರದಿಂದ ಮಸೀದಿಯ ಕೊಳದಲ್ಲಿ ಧುಮುಕಿ ತನ್ನ ಜೀವನವನ್ನು ಅಂತ್ಯಗೊಳಿಸಿಕೊಳ್ಳುವುದು ಇಡೀ ಸ್ತ್ರೀಕುಲದ ಶೋಷಣೆಯ ಪ್ರತೀಕವಾಗುತ್ತಾಳೆ.

ಬಲವಾದ ಮತಧರ್ಮದ ಆಚರಣೆಗಳು ಸ್ತ್ರೀಕುಲಕ್ಕೆ ಮಾರಕವಾಗುತ್ತವೆ. ಶಾಭಾನು ಪ್ರಕರಣ ಕೂಡಾ ಇಡೀ ಸಮುದಾಯವನ್ನ ತಲ್ಲಣಗೊಳಿಸಿತು.

ಸಾರಾ ಅವರು ಗಂಡಸರು ತಮ್ಮ ಸ್ವಾರ್ಥಕ್ಕಾಗಿ ಖುರಾನನ್ನು ತಮಗಿಷ್ಟವಾದ ರೀತಿಯಲ್ಲಿ ಹೇಗೆ ತಿದ್ದುಪಡಿ ಮಾಡುತ್ತಾರೆಂಬ ಸತ್ಯ ಸಂಗತಿಯನ್ನು ಕಾದಂಬರಿಯಲ್ಲಿ ಕಟ್ಟಿಕೊಟ್ಟಿದ್ದಾರೆ. ಮುಸ್ಲಿಂ ಪುರುಷ ಕೇಂದ್ರಿತ ಮನಸ್ಸನ್ನು ಖಂಡಿಸಲು ಧರ್ಮದ ಮೌಲ್ವಿಗಳ ಮುಖಾಂತರ ಹೀಗೆ ಹೇಳಿಸಿದ್ದಾರೆ. 'ನಿಮಗೆ ಜನರಿಗೆ ಬುದ್ಧಿಯಿಲ್ಲ ಖುರಾನನ್ನ ಸರಿಯಾಗಿ ಅರ್ಥಮಾಡಿಕೊಳ್ಳುವುದಿಲ್ಲ. ಇನ್ನೊಂದೂ ನನಗೆ ಈ ಹೆಂಡತಿ ಬೇಡ ಎಂಬ ದೃಢವಾದ ನಿಶ್ಚಯದೊಡನೆ ನಾವು ಈ ಮೂರನೆಯ ಅವಕಾಶವನ್ನು ಉಪಯೋಗಿಸಿಕೊಳ್ಳಬೇಕು, ಆದರೆ ಈ ಮೂರನೆಯ ಅವಕಾಶವೂ ಮುಗಿದು ಪುನಃ ಒಬ್ಬನಿಗೆ ಅದೇ ಹೆಂಡತಿ ಬೇಕೆಂದಾದ ಪಕ್ಷದಲ್ಲಿ ಆಕೆ ಇನ್ನೊಬ್ಬನನ್ನು ವಿವಾಹವಾಗಿ ಆ ಗಂಡ ಹೆಂಡತಿ ಚೆನ್ನಾಗಿ ಬಾಳಲಾರದೆ ಆತನನ್ನು ಬಿಟ್ಟು ಬಂದವಳಾಗಿರಬೇಕು. ಮೊದಲಿನ ಗಂಡನನ್ನೇ ಮದುವೆಯಾಗಲಿಕ್ಕಾಗಿ ಒಬ್ಬನನ್ನ ಒಂದು ರಾತ್ರಿಗೆ ವಿವಾಹವಾಗಬೇಕೆಂದು ಖುರಾನಿನಲ್ಲಿ ಎಲ್ಲಿಯೂ ಹೇಳಿಲ್ಲ ಇದೆಲ್ಲ ಈ ಮೂರ್ಖ ಗಂಡಸರು ತಮ್ಮ ಶೌಕರ್ಯಕ್ಕಾಗಿ ಕೈಗೊಂಡ ಉಪಾಯಗಳು ಹೀಗೆ ಖುರಾನ ಹೇಳಿರುವುದು ಒಂದಾದರೆ ನೀವು ಮಾಡುವುದು ಇನ್ನೊಂದು' ೧೮ ಎಂಬ ಮಾತುಗಳಿಂದ ಲೇಖಕಿ ಪುರುಷ ಪ್ರಾಧಾನ್ಯತೆಯನ್ನು ಅಲ್ಲಗಳೆಯುತ್ತಾರೆ.

ಮುಕ್ತ್ಯದಖಾನ ತನ್ನ ಆರ್ಥಿಕ ಸ್ಥಿತಿಯನ್ನು ಸುಧಾರಿಸಿಕೊಳ್ಳಬೇಕೆಂಬ ಬಯಕೆಯಿಂದ ಮಧ್ಯವಯಸ್ಕ ಶ್ರೀಮಂತ ಹಲೀಂನೊಡನೆ ನಾದಿರಾಳ ವಿವಾಹಕ್ಕೆ ಒಪ್ಪುತ್ತಾನೆ. ಇಲ್ಲಿ ನಾದಿರಾಳ ದುರಂತದ ಹಿಂದೆ ಧರ್ಮದ ಕಟ್ಟಳೆ ಮತ್ತು ಆವಳ ತಂದೆಯ ಪುರುಷಕೇಂದ್ರಿತ ಕ್ರೌರ್ಯ ಹಾಗೂ ಆರ್ಥಿಕ ಒತ್ತಡಗಳು ಕೆಲಸ ಮಾಡುತ್ತವೆ. ''ಧಾರ್ಮಿಕ ಕಟ್ಟಳೆಯೊಂದು ನಾದಿರಾ-ರಶೀದರ ಮರುಮದುವೆಯ ಮಾರ್ಗದಲ್ಲಿ ಕಷ್ಟಗಳನ್ನು ನಿರ್ಮಿಸಿ ಅವರ ದುರಂತಕ್ಕೆ ಕಾರಣವಾಗುತ್ತದೆಯೆನ್ನುವುದು ನಿಜವಾದರೂ ಈ ದುರಂತದ ಬೀಜ ಬಿತ್ತುವವನು ನಾದಿರಾಳ ಮುಂಗೋಪಿ ಹಾಗೂ ಸರ್ವಾಧಿಕಾರಿ ಪ್ರವೃತ್ತಿಯ ತಂದೆ ಮುಕ್ತ್ಯದಖಾನ ಎನ್ನುವುದನ್ನು ಮರೆಯಲಾಗದು '' ೧೯

ಯಾವುದೇ ಮತ ಧರ್ಮವನ್ನು ನೋಡಿದರೂ 'ಸಕಲ ಜೀವಾತ್ಮರ ಲೇಸನ್ನು ಬಯಸುತ್ತವೆಯೇ ವಿನಃ ಕೆಡುಕನ್ನಂತೂ ಬಯಸವು. ಆದರೆ ಆಯಾ ಧರ್ಮದ ಅನುಯಾಯಿಗಳು ಮಾತ್ರ ತಮ್ಮ ಸ್ವಾರ್ಥ ಸಾಧನೆಗಾಗಿ ಅದರಲ್ಲಿ ಬದಲಾವಣೆಗಳನ್ನು ಮಾಡಿಕೊಂಡು ಧರ್ಮದ ಹೆಸರಿನಲ್ಲಿ ಜನತೆಯನ್ನು ಶೋಷಿಸುತ್ತಾರೆ. ಇಲ್ಲಿ ಸಾರಾ ಅವರು ತಮ್ಮ ಕಥಾ ನಾಯಕಿಯಾದ ನಾದಿರಾಳನ್ನು ಬಲಿಕೊಡುವುದರ ಮೂಲಕ ನಿಜವಾದ ಮಾನವೀಯ ಧರ್ಮದ ಸ್ಥಾಪನೆಗಾಗಿ ಪ್ರಯತ್ನಪಟ್ಟಿದ್ದಾರೆ. ನಾದಿರಾಳ ಸಾವು ಕೇವಲ ಒಂದು ಹೆಣ್ಣಿನ ಸಾವಾಗಿರದೇ ಅಸಂಖ್ಯಾತ ಮುಗ್ಧ ಮಹಿಳೆಯರ ಬದುಕಿನ ದುರಂತವನ್ನು ಸಾರುತ್ತದೆ. ಚಂದ್ರಗಿರಿಯ ತೀರದಲ್ಲಿಯ ನಾಯಕಿ ನಾದಿರಾ ಧಾರ್ಮಿಕ ವ್ಯವಸ್ಥೆಯಿಂದ ಶೋಷಣೆಗೆ ಗುರಿಯಾಗಿ ಆತ್ಮಹತ್ಯೆ ಮಾಡಿಕೊಂಡರೆ, 'ಸಹನಾ'ದ ನಾಯಕಿ 'ನಸೀಮಾ' ಧಾರ್ಮಿಕ ಕಟ್ಟಳೆಗಳನ್ನು ಮೀರಿ ಪುರುಷ ವ್ಯವಸ್ಥೆಯ ವಿರುದ್ಧ ಸಮರ ಸಾರುತ್ತಾಳೆ.

ಇದೇ ಸಂದರ್ಭದಲ್ಲಿ ಬಿ.ಟಿ.ಲಲಿತಾ ನಾಯಕರ 'ಗತಿ', 'ಹಳ ಹಳ' ಹಾಗೂ ಗೀತಾ ನಾಗಭೂಷಣ ಅವರ 'ಹಸಿಮಾಂಸ ಮತ್ತು ಹದ್ದು'ಗಳಲ್ಲಿ ಕೂಡಾ ಪುರುಷ ವ್ಯವಸ್ಥೆಯ ವಿರುದ್ಧ ಧ್ವನಿಯೆತ್ತುವ ಪಾತ್ರಗಳನ್ನು ಕಾಣಬಹುದು. 'ಗತಿ'ಯ ನಾಯಕಿ ಸೋಮಿಬಾಯಿ ಪುರುಷರ ಶೋಷಣೆಯನ್ನು ಅಸಹಾಯಕಿಯಂತೆ ಸಹಿಸಳು. 'ಹಸಿಮಾಂಸ ಮತ್ತು ಹದ್ದುಗಳು' ನಾಯಕಿ ಲಕ್ಷ್ಮಿಯಂಥ ಪಾತ್ರಗಳು ಕೂಡಾ ಹಸಿರಾಗಿ ಉಳಿಯುತ್ತವೆ.

ಇಲ್ಲಿ ಮುಖ್ಯವಾಗಿ ''ಸಾರಾ'' ಅವರಾಗಲಿ, ಕಟ್ಪಾಡಿ ಮತ್ತು ಕುಂಞ ಅವರಾಗಲಿ ಪುರುಷ ಪ್ರಧಾನ ಸಂಸ್ಕೃತಿಯನ್ನು ತಿರಸ್ಕರಿಸುತ್ತಲೇ, ಸ್ತ್ರೀ-ಪುರುಷರ ಸಮಾನ ಸಂಸ್ಕೃತಿಗಾಗಿ ಹಾತೊರೆದಿದ್ದಾರೆ. ಇಲ್ಲಿ ಸ್ತ್ರೀಪಾತ್ರಗಳು ಪ್ರಾಮುಖ್ಯತೆ ಪಡೆದಿವೆ. ಶತಮಾನಗಳಿಂದ ಮೂಲೆಗೆ ತಳ್ಳಲ್ಪಟ್ಟಿದ್ದ ಸ್ತ್ರೀ ನವ್ಯೋತ್ತರ ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ತುಂಬಾ ಅನಿವಾರ್ಯವಾಗುವಂತಹ ಪ್ರಾಮುಖ್ಯತೆಯನ್ನು ಪಡೆದಿದ್ದಾಳೆ. ಒಟ್ಟಾರೆಯಾಗಿ ನವ್ಯೋತ್ತರ ಸಂದರ್ಭದಲ್ಲಿ ಸಾರಾ ಅವರು ಮುಸ್ಲಿಂ ಮಹಿಳೆಯರು ಪುರುಷ ಪ್ರಾಬಲ್ಯದಲ್ಲಿ ನರಳುವ ಚಿತ್ರಣ ನೀಡುತ್ತಾರೆ. ಧಾರ್ಮಿಕ ಆಚಾರಗಳನ್ನು ಧರ್ಮದ ಹೆಸರಿನಲ್ಲಿ ನಡೆಯುವ ಅನ್ಯಾಯಗಳನ್ನು ಬಯಲುಗೊಳಿಸುತ್ತ ಸ್ತ್ರೀ ಸ್ವಾತಂತ್ರ್ಯಕ್ಕಾಗಿ ಹಾತೊರೆಯುವುದನ್ನು ಅವರ ಸಾಹಿತ್ಯದಲ್ಲಿ ಕಾಣಬಹುದು.

ಹುಲಿಗೆಮ್ಮ

ಹೈದ್ರಾಬಾದ ಕರ್ನಾಟಕದ ಬರಹಗಾರರಲ್ಲಿ ಡಾ| ಚೆನ್ನಣ್ಣ ವಾಲೀಕಾರರು ಮುಖ್ಯರು . ಕಾವ್ಯ , ಕಥೆ , ಕಾದಂಬರಿಗಳಲ್ಲಿ ಸಾಹಿತ್ಯ ಹಾಗೂ ಸಮಾಜದಲ್ಲಿ ಮಾನವೀಯತೆಯ ಅಂಶವನ್ನು ಗಂಭೀರವಾಗಿ ಪ್ರತಿಪಾದಿಸಿದ್ದಾರೆ.

ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಈವರೆಗೆ ಕಾಣದೇ ಇರುವಂಥ ಅನೇಕ ಹೊಸ ಆಯಾಮಗಳನ್ನು ನವ್ಯೋತ್ತರ ಸಾಹಿತ್ಯದಲ್ಲಿ ವಾಲೀಕಾರರು ಕಟ್ಟಿಕೊಟ್ಟಿದ್ದಾರೆ. ಅತ್ಯಂತ ಕೆಳಸ್ತರದ ಜನರ ಬದುಕನ್ನು ತೆರೆದ ಕಣ್ಣಿನಿಂದ ಗಮನಿಸಿದ ಇವರು ನೈಜ ಅನುಭವಗಳನ್ನು ಕಲಾತ್ಮಕವಾಗಿ ದಾಖಲಿಸಿದ್ದಾರೆ. ಒಂದು ಹೆಣ್ಣಿನ ಒಳಜಗತ್ತು , ಕೋಟೆಬಾಗಿಲು , ಹುಲಿಗೆಮ್ಮ , ಹಾಗೂ ಗ್ರಾಮಭಾರತ ಇವರ ಕಾದಂಬರಿಗಳಾಗಿವೆ.

ದಲಿತ - ಬಂಡಾಯದ ಸಂದರ್ಭದಲ್ಲಿ ಹೊರಹೊಮ್ಮಿದ ಇವರ ಸಾಹಿತ್ಯದಲ್ಲಿ ಸಾಮಾಜಿಕ ಪ್ರಜ್ಞೆ ದಟ್ಟವಾಗಿ ಮೇಳೈಸಿದೆ. ಶತಶತಮಾನಗಳಿಂದ ದುಡಿದುಣ್ಣುವ ಜನರ ದಾರಿದ್ರ್ಯದ ಬದುಕನ್ನು , ಜಮೀನ್ದಾರಿ ವ್ಯವಸ್ಥೆಯ ಕ್ರೂರ ಹಿಡಿತವನ್ನು ಮುಗ್ಧ , ಅಮಾಯಕ ಮಹಿಳೆಯರ ಮೇಲಾಗುವ ಹಿಂಸೆ , ಅನ್ಯಾಯ , ಅತ್ಯಾಚಾರಗಳನ್ನು ಯಾವ ಮುಲಾಜಿಲ್ಲದೇ ತಮ್ಮ ಕೃತಿಗಳಲ್ಲಿ ಅನಾವರಣಗೊಳಿಸಿದ್ದಾರೆ. ಹಳ್ಳಿಗಳ ಸಾಮಾಜಿಕ ಬದುಕನ್ನು ಚಿತ್ರಿಸುತ್ತಾ , ಅದರೊಳಗಿನ ಸಂಘರ್ಷವನ್ನು , ಅದು ಪಡೆಯುವ ಸಾಮಾಜಿಕ ಪಲ್ಲಟಗಳನ್ನು ಸೂಕ್ಷ್ಮವಾಗಿ ಬಿಡಿಸುತ್ತಾರೆ.
ಪ್ರಸ್ತುತ 'ಹುಲಿಗೆಮ್ಮ' ಕಾದಂಬರಿ ಒಂದು ಹೆಣ್ಣಿನ ದುರಂತ ಬದುಕನ್ನು ಕುರಿತದ್ದು . ಹುಲಿಗೆಮ್ಮ ಪಡುವ ಯಮಯಾತನೆ , ಅವಳು ಅನುಭವಿಸುವ ಲೈಂಗಿಕ ಹಿಂಸೆ , ಶೋಷಣೆ , ಅತ್ಯಾಚಾರಗಳಂಥ ಅಂಶಗಳನ್ನು ಗಂಭೀರವಾಗಿ ಚಿತ್ರಿಸಿದ್ದಾರೆ. ಹೆಣ್ಣಿನ ಎಲ್ಲ ರೀತಿಯ ಶೋಷಣೆಗೂ ಪುರುಷನೇ ಕಾರಣವೆಂಬುದಕ್ಕೆ 'ಹುಲಿಗೆಮ್ಮ' ಸಾಕ್ಷಿಯಾಗುತ್ತಾಳೆ.

ಹುಲಿಗೆವ್ವ ತಾರುಣ್ಯದಲ್ಲಿ ಸಂದರ್ಭವಶಕ್ಕೆ ಒಳಗಾಗಿ ಸಿದ್ದರಡ್ಡಿಗೆ ತನ್ನನ್ನು ಅರ್ಪಿಸಿಕೊಳ್ಳುತ್ತಾಳೆ . ಗರ್ಭಿಣಿಯಾದಾಗ ಪಂಚಾಯತಿ ಸೇರುತ್ತಾರೆ. ಸಾಹುಕಾರ ಶಿವಲಿಂಗ ಕೊಟ್ಟ ಹಣದಿಂದ ಗರ್ಭಪಾತ ಮಾಡಿಸಿ ಬೇರೆ ಕಡೆಗೆ ಹುಲಿಗೆವ್ವಳಿಗೆ ಮದುವೆಮಾಡಿಕೊಡುತ್ತಾರೆ. ಗಂಡ ಷಂಡನಾದ ಕಾರಣ ಮೈದುನನ ಜೊತೆಗೆ ಸಂಸಾರ ಮಾಡಬೇಕಾಗುತ್ತದೆ. ಈ ನರಕದಿಂದ ತಪ್ಪಿಸಿಕೊಳ್ಳಬೇಕೆಂದು ಮನೆಬಿಟ್ಟು ಹೊರಟ ಹುಲಿಗೆವ್ವಳನ್ನು ಸಾಹುಕಾರ ತಂದು ಮನೆಯಲ್ಲಿ ಇಟ್ಟುಕೊಳ್ಳುತ್ತಾನೆ. ಶಾಮರಾಯನ ಕೊಲೆನಂತರ ಶೇಷಪ್ಪ ಕುಲಕರ್ಣಿ ಅವಳನ್ನು ಇಟ್ಟುಕೊಳ್ಳುತ್ತಾನೆ. ನಂತರ ಶೇಷಪ್ಪ ಕುಲಕರ್ಣಿಯು ಕೊಲೆ ನಂತರ ಧರೆಪ್ಪಗೌಡನ ಪಾಲಾಗುತ್ತಾಳೆ . ಧರೆಪ್ಪಗೌಡನ ಬಂಧನದಲ್ಲಿದ್ದ ಹುಲಿಗೆವ್ವ ಕಾಶ್ಯಾನೊಂದಿಗೆ ಸಂಪರ್ಕವಿಟ್ಟುಕೊಂಡು , ಗೌಡನಿಲ್ಲದ ಸಂದರ್ಭನೋಡಿ ಅಲ್ಲಿಂದ ಕಾಶ್ಯಾನ ಜೊತೆ ಪರಾರಿಯಾಗುತ್ತಾಳೆ . ಕಾಶ್ಯಾ ತನಗೆ ಮೋಸ ಮಾಡಿದನೆಂದು ತಿಳಿದು ಗೌಡ ಅವನನ್ನು ತನ್ನ ಆಳುಗಳಿಂದ ಹುಡುಕಿಸಿ ಕೊಲೆ ಮಾಡಿಸುತ್ತಾನೆ. ಮುಂದೆ ಒಬ್ಬಂಟಿಯಾದ ಹುಲಿಗೆವ್ವ ಆತ್ಮಹತ್ಯೆಗೆ ಪ್ರಯತ್ನಿಸಿ ಹುಸೇನಬಿ ಎಂಬ ವೇಶ್ಯೆಯ ಸಹಾಯದಿಂದ ಬದುಕುಳಿದು ತಾನೂ ವೇಶ್ಯೆಯಾಗುತ್ತಾಳೆ.

ಕಾದಂಬರಿಯಲ್ಲಿ ಲೇಖಕರು ನಿರೂಪಕರಾಗಿ ಹುಲಿಗೆವ್ವನ ದುರಂತ ಬದುಕಿನ ಘಟನೆಗಳನ್ನು ಬಿಚ್ಚಿಡುತ್ತಾ ಜೀವನದುದ್ದಕ್ಕೂ ಅನುಭವಿಸಿದ ಭೀಕರ ದೃಶ್ಯಗಳನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸುತ್ತಾರೆ. ಕನ್ಯಾವಸ್ಥೆಯಲ್ಲಿದ್ದ ಹುಲಿಗೆವ್ವ ಸಿದ್ದರಡ್ಡಿಯ ಹೊಲಕ್ಕೆ ತನ್ನಣ್ಣ ಹಣಮನಿಗೆ ಬುತ್ತಿಕೊಡಲು ಹೊರಟ ಹುಲಿಗೆವ್ವಳನ್ನು ಅನಾಮತ್ತಾಗಿ ಬೆಳೆದ ಪೈರಿನೊಳಕ್ಕೆ ಸಿದ್ದರಡ್ಡಿ ಕೊಂಡೊಯ್ಯುತ್ತಾನೆ. ಕಾಮದ ಕಿಚ್ಚಿಗೆ ಈಡಾದ ಅವನಿಗೆ ಹುಲಿಗೆವ್ವನ ಯಾವ ಅಳು , ಚೀರಾಟಗಳು ಕೇಳಿಸುವುದಿಲ್ಲ . ಕಿವಳಾಗಿ ''ಸಾವ್ಕಾರ ನಿನ್ನ ಕಾಲ ಬೀಳತೀನಿ , ನನಗ ಬಿಟ್ಟು ಬಿಡು , ನಾ ನಿನಗೇನು ಕೆಟ್ಟದ್ದು ಮಾಡೀನಿ ? ಹಿಂಗ ನನಗ್ಯಾಕ ಇಲ್ಲಿಗಿ ತಂದೀದಿ ? '' ಎಂದ ಹುಲಿಗೆವ್ವಳಿಗೆ '' ಹುಲಿಗಿ ನೀ ನನಗೇನು ಮಾಡಿಲ್ಲ ನಿನ್ನ ರೂಪ, ವಯಸ್ಸು ನನಗ ಹುಚ್ಚು ಹಿಡಿಸ್ಯಾದ . ನಿನ್ನ ಬಿಟ್ಟು ನನಗಿರಾಕ ಸಾಧ್ಯ ಇಲ್ಲ '' ಅಂದ ಅವನಿಗೆ ''ಸಾವ್ಕಾರ ನಿಮ್ಮ ಕುಲಬ್ಯಾರ , ನಮ್ಮ ಕುಲ ಬ್ಯಾರೆ. ದೇವರಾಣೆ ಮಾಡಿ ಹೇಳತೀನಿ ನನಗ ಮುಟ್ಟಬ್ಯಾಡರಿ. ನನಗ ಮುಟ್ಟಿದರ ನನಗೇನು ನೀವು ಲಗ್ನಾ ಆಗತೀರ್ಯಾ? ಸುಮ್ನೆ ನನ್ನ ಸಂಸಾರ ಹಾಳು ಮಾಡುಬ್ಯಾಡ ಸಾವ್ಕಾರ ನಿನಗ ಕೈ ಜೋಡಿಸಿ ಬೇಡಕೊಂತೀನಿ '' ಎಂದು ಪರಿಪರಿಯಾಗಿ ಕೇಳಿಕೊಳ್ಳುತ್ತಾಳೆ.

''ಹುಲಿಗಿ ಇವತ್ತು ನೀ ಬೇಕಾದೋಟು ಬೇಡಿಕೋ ನನ್ನ ಪ್ರಾಣ ಕೊಟ್ಟರೂ ನಿನಗ ಬಿಡೂದಿಲ್ಲ ಈಗಷ್ಟೆ ಅಲ್ಲ ನೀ ಮುದುಕಿ ಆದರೂ ನಿನ್ನ ಜೋಡಿ ಇರತೀನಿ ತಿಳಿತಾ ? ''೨೧ ಎಂದು ಅವಳನ್ನು ನಂಬಿಸುತ್ತಾನೆ.

ಈ ರೀತಿಯಾಗಿ ಸಿದ್ಧರೆಡ್ಡಿಯು ಆಕ್ರಮಣಕ್ಕೆ ಒಳಗಾದ ಹುಲಿಗೆಮ್ಮನ ಈ ಸನ್ನಿವೇಶ ಅವಳು ಮುಂದನುಭವಿಸುವ ಬಾಳಿನ ದುರಂತಕ್ಕೆ ನಾಂದಿಯಾಗುತ್ತದೆ. ತನ್ನ ಶೀಲಹರಣವಾಗಿ ತನ್ನನ್ನು ಯಾರೂ ಮದುವೆಯಾಗುವುದಿಲ್ಲವೆಂದ ಹುಲಿಗಿಗೆ ಕೊನೆಯವರೆಗೂ ಕೈಬಿಡುವುದಿಲ್ಲ ಅವಳಿಗಾಗಿ ಮನೆಕಟ್ಟಿಸಿ ಇಡುವುದಾಗಿ ಪ್ರಮಾಣ ಮಾಡಿದ ಕೃತ್ಯ ಇಲ್ಲಿ ಹೊಳೆದಾಟಿದ ಮೇಲೆ ಅಂಬಿಗನನ್ನು ಮರೆತ ಪ್ರಯಾಣಿಕನನ್ನು ನೆನಪಿಸುತ್ತದೆ.

ಸಿದ್ಧರೆಡ್ಡಿಯ ದುರಾಕ್ರಮಣಕ್ಕೆ ಬಲಿಯಾದ ಹುಲಿಗಿ ಸಮಾಜದೆದುರು ತಲೆತಗ್ಗಿಸಬೇಕಾಗುತ್ತದೆ. ಅವಳ ಗರ್ಭದಲ್ಲಿ ಬೆಳೆಯುವ ಪಿಂಡಕ್ಕೆ ಕಾರಣವಾದ ಪುರುಷ ಸಿದ್ಧರೆಡ್ಡಿಯಾದರೂ ಇಲ್ಲಿ ತಪ್ಪಿತಸ್ಥಳಾಗಿ ನಿಲ್ಲುವುದು ಹೆಣ್ಣೇ! . ಆದರೆ ಪುರುಷ ಮಾತ್ರ ನಿರ್ದೋಷಿ ಎಂಬಂತೆ ಮೆರೆಯುವುದು ಪುರುಷ ವ್ಯವಸ್ಥೆಯ ಕ್ರೂರತೆಯನ್ನು ಬಿಂಬಿಸುತ್ತದೆ. ಅಕ್ರಮಗರ್ಭಧರಿಸಿದ ಹುಲಿಗಿಯನ್ನು ನ್ಯಾಯಪಂಚಾಯತಿಗ ಕರೆಸಿದರೆ ಸಿದ್ಧರೆಡ್ಡಿ ಪ್ರಮಾಣ ಮಾಡಿದ್ದನ್ನು ಹೇಳದೇ , ಹುಲಿಗಿ ತನ್ನ ಕಾಲಮೇಲೆ ತಾನೇ ಕಲ್ಲು ಹಾಕಿಕೊಳ್ಳುತ್ತಾಳೆ.

ಹಳ್ಳಿಗಳಲ್ಲಿ ಭದ್ರವಾಗಿ ಬೇರುಬಿಟ್ಟಿರುವ ಮೇಲ್ವರ್ಗದವರ ಜೀವಿತ ಕಲಹ ಸೂಚಿಸುತ್ತದೆ. ಹುಲಿಗಿಗಾದ ಅನ್ಯಾಯವನ್ನು ಸಿದ್ಧರೆಡ್ಡಿಯ ತಂದೆ ಶಿವಲಿಂಗರೆಡ್ಡಿ ತನ್ನ ಆರ್ಥಿಕ ಬಲದಿಂದ ಮುಚ್ಚಿಹಾಕುವ ಹುನ್ನಾರ ನಡೆಸುತ್ತಾನೆ. ''ನೋಡರಿ ಶಿವಬಸಪ್ಪನೋರೆ ಹುಡುಗ ಹುಡುಗಿ ಗುರಿ ತಿಳಿಲಾರ್ದ ಏನೋ ಮಾಡ್ಯಾವ. ನನ್ನ ಮಗನ ಲಗ್ನ ಈಗಾಗಲೇ ಆಗ್ಯಾದ ಲಗ್ನ ಆಗೋ ಮಾತು ಮುಗಿದ ಹೋಯಿತು . ನನ್ನ ಮಗ ಹರೇದ ಹುರುಪಿನಾಗ ಮಾಡಿದ ತಪ್ಪಿಗಿ ಏನು ದಂಡಾ ಕಟ್ಟಲಿ ಕಟ್ಟರಿ . ನಾ ಕೊಡಲಿಕ್ಕೆ ತಯಾರಿದ್ದೀನಿ ''೨೨ ಎಂಬ ಶಿವಲಿಂಗರೆಡ್ಡಿಯ ಮಾತುಗಳಿಗ ಪ್ರತಿಯಾಗಿ ಶಿವಬಸಪ್ಪ ''ಹಂಗ ಈ ಕೆಲಸ ಮಾಡಿದೋರ್ಗೆ ಐದು ಸಾವಿರ ರೂಪಾಯಿ ದಂಡ ನಾವು

ಹಾಕ್ಕೊತ ಬಂದೀವಿ. ಹುಲಿಗೆಮ್ಮನಿಗೆ ರವಿಕಿ ಕೊಟ್ಟೋರಿ ಮಾಡಿದಂಥ ಸಿದ್ದರಿಸ್ಗೆ ಐದು ಸಾವಿರ ದಂಡ ಹಾಕತೀವಿ'' ೨೩ ಎಂದು ನ್ಯಾಯ ತೀರ್ಮಾನಿಸುತ್ತಾರೆ.

ಒಂದು ಹೆಣ್ಣಿಗಾದ ಅನ್ಯಾಯ, ಅತ್ಯಾಚಾರ, ಶೋಷಣೆಯನ್ನು ಕೇವಲ ಹಣದ ಬಲದಿಂದ ಮುಚ್ಚಿ ಹಾಕುವ ಯತ್ನ ನಡೆಯುತ್ತದೆ. ಸಮಾಜದ ಒಳರಚನೆಯಲ್ಲಿ ಜರುಗುವ ಇಂಥ ಘಟನೆಗಳು ಇಡೀ ಸ್ತ್ರೀಲೋಕ ಅನುಭವಿಸುತ್ತಿರುವ ನೋವನ್ನು ಹುಲಿಗೆಮ್ಮ ಪ್ರತಿನಿಧಿಸಿದ್ದಾಳೆ. ಹೆಣ್ಣಿನ ಮೇಲೆ ನಡೆಯುವ ಶೋಷಣೆಯನ್ನು ಕೇವಲ ಹಣದಿಂದಲೇ ತೀರ್ಮಾನಿಸುವುದಾದರೆ, ಹೆಣ್ಣಿನ ಮೇಲೆ ಪುರುಷ ಪ್ರಭುತ್ವಕ್ಕೂ, ಆರ್ಥಿಕ ಭದ್ರತೆಯುಳ್ಳವರಿಗೆ ಪುಷ್ಟಿಯನ್ನು ನೀಡಿದಂತಾಗುತ್ತದೆಯೇನೋ ಅನ್ನಿಸುತ್ತದೆ.

ತವರು ಮನೆಯಿಂದ ಗಂಡನ ಮನೆಗೆ ಕಾಲಿರಿಸಿದ ಹುಲಿಗೆಮ್ಮ ಇಲ್ಲಿಯೂ ಕಷ್ಟದ ಕಡಲಿನ್ನೇ ಈಜುವ ಪರಿಸ್ಥಿತಿಯನ್ನು ಎದುರಿಸುತ್ತಾಳೆ. ಗಂಡನೊಂದಿಗೆ ಸುಖ - ಸಂಸಾರ ನಡೆಸಬೇಕೆಂಬ ಅವಳ ಕನಸು ಒಡೆದು ಚೂರು ಚೂರಾಗುತ್ತದೆ. ಭೀಮಣ್ಣ ಕೇವಲ ಹೆಸರಿಗಷ್ಟೇ ಗಂಡನಾಗಿದ್ದಾನೆ. ಅವನು ನಿರ್ವೀರ್ಯನಾದ ಕಾರಣ ಮೈದುನ ರಾಮಣ್ಣನೇ ಹುಲಿಗೆಮ್ಮನ ಪಾಲಿಗೆ ಗಂಡನಾಗುತ್ತಾನೆ. ಇಂಥ ಲೈಂಗಿಕ ಅನಾಚಾರವನ್ನು ಹುಲಿಗೆಮ್ಮ ವಿರೋಧಿಸುತ್ತಾಳಾದರೂ ಅವಳ ವಿರೋಧ ಪುರುಷ ಶಕ್ತಿಯ ಮುಂದೆ ವಿಫಲವಾಗುತ್ತದೆ. ಜೀವನವನ್ನು ಅದಮ್ಯವಾಗಿ ಪ್ರೀತಿಸುವ ಹುಲಿಗೆಮ್ಮನಿಗೆ ರಾಮಣ್ಣನ ಕಿರುಕುಳದಿಂದ ಬದುಕೇ ಬೇಸರವಾಗುತ್ತದೆ. ಗಂಡಸರು ಎಷ್ಟೊ ತಪ್ಪು ಮಾಡಿದರೂ ಯಾರೂ ಕೇಳುವುದಿಲ್ಲ. ಹೆಣ್ಣು ಒಂದು ತಪ್ಪು ಮಾಡಿದರೆ ಎಂಥ ಶಿಕ್ಷೆ ನೀಡುವರಲ್ಲ ಎಂದು ಹುಲಿಗೆಮ್ಮ ಎಷ್ಟೊ ಸಲ ಯೋಚಿಸಿದ್ದಳು.

ಮುಂಬಯಿಯಲ್ಲಿದ್ದ ಮಾದರ ಮಾರಗಿ ಹಳ್ಳಕ್ಕೆ ಬಟ್ಟೆ ಒಗೆಯಲು ಬಂದಾಗ ಅಲ್ಲಿ ಹೆಂಗಸರು ಕೇಳಿದ ಪ್ರಶ್ನೆಗಳಿಗೆ ''ಬಂಬಯಿ ಅಂದರ ಎಲ್ಲರಿಗೂ ತಾಯಿ ಇದ್ದಂಗ. ಅದು ಬಂದೋರಿಗೆಲ್ಲ ಕೆಲಸ ಕೊಡತಾದ, ಅನ್ನ ಕೊಡತಾದ, ಸಲುತಾದ, ಅಲ್ಲಿಗೆ ಬಂದೋರು ಯಾರು ಉಪಾಸ ಬೀಳಲ್ಲ'' ೨೪ ಎಂಬ ಮಾರಗಿಯ ಮಾತುಗಳು

ಹುಲಿಗಿಗೆ ಸ್ಫೂರ್ತಿಯಾಗುತ್ತದೆ. ಕೊನೆಗೆ ಬೊಂಬಾಯಿಯಾದರೂ ಸರಿ ಹೆಣ್ಣಾಗಿ ಬಾಳಬೇಕೆಂಬ ವಿಚಾರ ಹೊಳೆದು ಊರು ಬಿಡುತ್ತಾಳೆ.

ಊರು ಬಿಟ್ಟು ಬೊಂಬಾಯಿ ಸೇರಬೇಕೆಂದು ಹೊರಟ ಹುಲಿಗೆಮ್ಮ ರಾಮರಾಯ ಸಾಹುಕಾರನ ಕೈಯಲ್ಲಿ ಸಿಕ್ಕು ಒದ್ದಾಡುತ್ತಾಳೆ. ಒಬ್ಬ ಗಂಡುಳ್ಳ ಹೆಂಡತಿಯನ್ನು ಅಕ್ರಮವಾಗಿ ಇಟ್ಟುಕೊಂಡ ಕ್ರಮವನ್ನು ಯಾರೊಬ್ಬರೂ ಪ್ರಶ್ನಿಸದೇ ಇರುವುದು ಗಮನಾರ್ಹ, ವಾಸ್ತವದಲ್ಲಿ ಇದು ಜಮೀನ್ದಾರಿ ವ್ಯವಸ್ಥೆಯ ಕ್ರೂರತೆಯೂ ಹೌದು. ಹುಲಿಗೆಮ್ಮನ ಮನಸ್ಸಿಗೆ ವಿರುದ್ಧವಾಗಿ ಅವಳನ್ನು ಗೃಹಬಂಧನದಲ್ಲಿರಿಸಿರುವುದು ಮತ್ತು ಅವಳನ್ನು ಸೂಳೆಯೋಪಾದಿಯಲ್ಲಿ ಲೈಂಗಿಕ ಹಿಂಸೆಗೆ ಗುರಿಪಡಿಸುವುದು ಪುರುಷ ಕ್ರೌರ್ಯವನ್ನು ಎತ್ತಿ ತೋರಿಸುತ್ತದೆ.

ಒಂದು ಹೆಣ್ಣನ್ನು ಇಟ್ಟುಕೊಳ್ಳುವುದು ಗೌಡ-ಸಾಹುಕಾರರಿಗೆ ಪ್ರತಿಷ್ಠೆಯ ವಿಚಾರ. ಹುಲಿಗೆಮ್ಮನ ಮೇಲೆ ಮನಸ್ಸಿಟ್ಟ ಗೌಡ-ಕುಲಕರ್ಣಿಯರು ಸಂಚು ಹೂಡಿ ರಾಮರಾಯ ಸಾಹುಕಾರರನ್ನು ಬಲೆಗೆಳೆದುಕೊಳ್ಳುತ್ತಾರೆ. ನಂತರ ರಾಮರಾಯ ಸಾಹುಕಾರರ ಮನೆಯಿಂದ ಹುಲಿಗೆಮ್ಮಳನ್ನು ಕುಲಕರ್ಣಿಯ ಅಟ್ಟದ ಮನೆಗೆ ಸಾಗಿಸಲಾಗುತ್ತದೆ. ಕುಲಕರ್ಣಿ ಹುಲಿಗೆಮ್ಮನ ಗಂಡ ಭೀಮಣ್ಣನನ್ನು ಕರೆಯಿಸಿ, ''ನೋಡು ಭೀಮು ಆ ಸಾಹುಕಾರ ನಿನ್ನ ಹೆಂಡತಿಗೆ ಬಾಳ ತ್ರಾಸದಾಗ ಇಟ್ಟಿದ್ದ. ಅದಕ ನಾ ತಂದು ನನ್ನ ಅಟ್ಟದಾಗ ಇಟಗೊಂಡೀನಿ ನೀನು ನಂಬಲ್ಲ ದುಡಿಲಾಕ ಇರು. ಬೇಕಾದಂಗ ಉಣ್ಣು, ಬೇಕಾದಂಗ ಉಡು. ಈಗ ನಿನಗೂ ಯಾರ ಕಾಟ? ಇವತ್ತಿನಿಂದ ನನ್ನ ಮನ್ಯಾಗ ಇದ್ದು ಬಿಡು''[೯೫] ಎಂದು ಹೇಳುವ ಕುಲಕರ್ಣಿಯ ಮಾತುಗಳು ಭೀಮಣ್ಣನ ಮೇಲೆ ಯಾವ ಪರಿಣಾಮವನ್ನೂ ಉಂಟುಮಾಡುವುದಿಲ್ಲ. ಜೊತೆಗೆ ಆಗಲಿ ಎಂಬಂತೆ ಸಮ್ಮತಿ ಸೂಚಿಸುವುದು, ಅವನ ಪುರುಷಹೀನತೆಯ ಪ್ರತೀಕವಾಗಿದೆ. ಇಲ್ಲಿ ಕುಲಕರ್ಣಿ ಭೀಮಣ್ಣನನ್ನು ತನ್ನ ಮನೆಯಲ್ಲಿರಿಸಿಕೊಂಡರೆ ಜನ ತಪ್ಪು ತಿಳಿದುಕೊಳ್ಳುವುದಿಲ್ಲವೆಂದು ಕುಲಕರ್ಣಿ ಲೆಕ್ಕಾಚಾರ ಹಾಕುತ್ತಾನೆ. ಮತ್ತು ಹುಲಿಗೆಮ್ಮಳನ್ನು ಖಾಯಂ ಆಗಿ ಇಟ್ಟುಕೊಳ್ಳುವ ವಿಚಾರ ಕುಲಕರ್ಣಿಯದು. ಆದರೆ ಇಲ್ಲಿ ಹುಲಿಗೆಮ್ಮಳು ಗೌಣ, ಅವಳು ಮಂಚದಿಂದ ಮಂಚಕ್ಕೆ ಸಾಗುವ ವಸ್ತುವಾಗುತ್ತಾಳೆ.

ಕುಲಕರ್ಣಿಯ ಮನೆಯಲ್ಲಿದ್ದ ಹುಲಿಗೆವ್ವ ಮಹಡಿಯ ಮೇಲೆ ಸರ್ಪಗಾವಲಿನಲ್ಲಿ ದಿನದೂಡುವುದನ್ನು ನೆನೆದು ತನ್ನ ಬದುಕು ಬೀದಿ ಪಾಲಾಗುವುದನ್ನು ನೆನೆದು ಹಳಹಳಿಸುತ್ತಾಳೆ. ''ಥೂ ಈ ರೂಪಕ್ಕ ಬೆಂಕಿ ಹಾಕ ; ಹುಟ್ಟಿದೂರನ್ನ ಮರೆಸಿತು . ಗಂಡನ ಮನೆಯನ್ನ ಬಿಡಿಸಿತು , ರಾಮರಾಯ ಸಾಹುಕಾರನ ಜೀವ ತೊಗೊತು . ಅವನ ಜೊತೆ ರಾಮಣ್ಣನದು , ಆಳುಗಳದು ಜೀವ ಹೋಯಿತು . ಈಗೀಗ ಇಷ್ಟು ಜೀವಾ ಹೋದವು , ಇನ್ನೆಷ್ಟು ಜೀವ ಹೋಗತಾವೋ ಏನ ಸುಡ್ಯೋ . ಹೊಡಾಗ ನರಸಪ್ಪ ಕಾಕಾ ಬೇರೋ ಗಂಡಗ ನೋಡಿ ಕಡಲಿಲ್ಲ . ಆಯ್ತು ನನ್ನರೀಗತ ತೂತು ಬಿದ್ದ ರೀತಿಯಾಯಿತು . ಎಲ್ಲಿ ತೇಲತೀನೋ ಎಲ್ಲಿ ಮುಳಗತೀನೋ ? ಸುಡಗಿ ಬಾಯಾಗ ಮಣ್ಣ ಹಾಕ ಹೀಂಗ ಆಗಬೇಕಂತ ಬಂದಿದ್ದಳೇನಂತಿನಿ ರಂಡಿ''೨೬ ಎಂದು ಹುಲಿಗೆವ್ವ ತನ್ನ ರೂಪವೇ ತನ್ನ ಈ ಸ್ಥಿತಿಗೆ ಮುಳುವಾಯಿತೆಂದು ಭಾವಿಸಿಕೊಂಡು ಬದುಕಿನ ಅಸ್ಥಿರತೆಯ ಕುರಿತು ಯೋಚಿಸುತ್ತಾಳೆ.

ರಾಮರಾಯನ ಕೊಲೆ ಕೇಸಿನಲ್ಲಿ ಸಿಕ್ಕು ಜೈಲು ಸೇರಿದ ಧರೆಪ್ಪಗೌಡ ಕೇಸು ಖುಲಾಸೆ ಆಗಿ ಊರು ಸೇರುತ್ತಾನೆ . ಹುಲಿಗೆವ್ವ ಕುಲಕರ್ಣಿಯ ಮನೆಯಲ್ಲಿದ್ದುದನ್ನು ನೋಡಿ ಗೌಡನಿಗೆ ವಿಪರೀತ ಸಿಟ್ಟು . ಅವಳನ್ನು ಹೇಗಾದರೂ ಮಾಡಿ ದಕ್ಕಿಸಿಕೊಳ್ಳಬೇಕೆಂದು ಯೋಚಿಸಿ ಮೋಸದಿಂದ ಕುಲಕರ್ಣಿಯನ್ನು ಕೊಲ್ಲಿಸುತ್ತಾನೆ. ನಂತರ ಹುಲಿಗೆವ್ವಳನ್ನು ತನ್ನ ಮನೆಗೆ ಬರಲು ಹೇಳಿದಾಗ ಅವಳು ನಿರಾಕರಿಸುತ್ತಾಳೆ . ಅವಳ ಸಲುವಾಗಿಯೇ ಇಷ್ಟೆಲ್ಲ ಅನಾಹುತವಾದಾಗ ಸಿಟ್ಟಿಗೆದ್ದ ಗೌಡ ''ಎ ಕಾಳ್ಯಾ , ಸಿವ್ಯಾ , ಮಲ್ಯಾ ಏನು ನೋಡಕೋತ ನಿಂತೀರಲೆ ತಾಯಿಗಂಡ್ಯಾ . ಈ ಅಗ್ಗದ ಸೂಳಿಗಿ ಒಯ್ದು ನನ್ನ ತ್ವಟದಾಗ ಹಾಕಿ ಬಾಗಿಲಿಗೆ ಕೀಲಿ ಜಡಿದು ಬರ್ರಿ ''೨೭ ಎಂದು ಗೌಡ ಅಬ್ಬರಿಸುತ್ತಾನೆ. ಇಲ್ಲಿ ಹುಲಿಗೆವ್ವಳ ಪಾಲಿಗೆ ಸಂಕಟ , ನೋವು , ನಿರಾಸೆ , ಚಿಂತೆ , ಶೋಷಣೆಗಳೇ ದೊಡ್ಡ ನಿಧಿ . ಅವಳನ್ನು ಮಾನಸಿಕವಾಗಿಯೂ ದೈಹಿಕವಾಗಿಯೂ ಜರ್ಝರಿತಳನ್ನಾಗಿ ಮಾಡುತ್ತವೆ.

ಧರೆಪ್ಪಗೌಡನ ಆಳುಮಗ ಕಾಳ್ಯಾನಲ್ಲಿ ಮಾನವೀಯತೆ ಗುರುತಿಸಿದ ಹುಲಿಗೆವ್ವ ಅವನೊಂದಿಗೆ ಅಲ್ಲಿಂದ ಹೊರಟು ಹೋಗುವುದಾಗಿ ಯೋಚಿಸಿ ಸ್ವತಂತ್ರವಾಗಿ ಜೀವಿಸಲು ಪಾರಾಗಿ ಹೋಗುತ್ತಾಳೆ. ಆದರೆ ಗೌಡ ಕಾಳ್ಯಾನನ್ನು ಹುಡುಕಿಸಿ ಕೊಲೆ ಮಾಡಿಸುವುದರಿಂದ ಹುಲಿಗೆವ್ವನ ಬದುಕು ಮತ್ತೆ ನರಕವಾಗುತ್ತದೆ. . ದಿಕ್ಕುಗಾಣದ ಅವಳು

ಸಾಯಬೇಕೆಂದು ಯೋಚಿಸಿದರೂ ಸಾವು ಕೂಡಾ ಅವಳನ್ನು ತಿರಸ್ಕರಿಸುತ್ತದೆ. ಕೊನೆಗೆ ವೇಶ್ಯೆಯಾಗಿ ಬದುಕು ನಿರ್ವಹಿಸುತ್ತಾಳೆ . ಒಬ್ಬ ಆದರ್ಶ ಪತ್ನಿಯಾಗಿ ಬಾಳಬೇಕಾದ ಹುಲಿಗೆವ್ವ ಯಾವುದೋ ಕೆಟ್ಟ ಗಳಿಗೆಯಲ್ಲಿ ಪುರುಷನ ಕಾಮದ ಕಿಚ್ಚಿಗೆ ಬಲಿಯಾಗಿ ಇಡೀ ಬಾಳು ನರಕ ಸದೃಶ್ಯವಾಗುತ್ತದೆ. ಅವಳು ಒಬ್ಬರಿಂದ ಒಬ್ಬರಿಗೆ ಹಸ್ತಾಂತರಗೊಳ್ಳುತ್ತಲೇ ಬರುತ್ತಾಳೆ. '' ಹುಲಿಗೆವ್ವನ ಬದುಕಿನಲ್ಲಿ ಗಂಡುಗಳಿಗೆ ಬರವಿರಲಿಲ್ಲ ; ಆದರೆ ಅವಳ ಬದುಕಿನಲ್ಲಿ ಗಂಡನೊಬ್ಬನ ಬರವಿತ್ತು'' .೨೭ ಜಗತ್ತಿನ ಮಹಿಳೆ ಶತಶತಮಾನಗಳಿಂದ ಶೋಷಣೆ ,ದೌರ್ಜನ್ಯಗಳಿಗೆ ಒಳಗಾಗುತ್ತಲೇ ಬಂದಿರುವುದನ್ನು ನಾಟಕಕಾರರು ಹುಲಿಗೆವ್ವನ ಮುಖಾಂತರ ಬಿಚ್ಚಿಡುತ್ತಾರೆ. ಸಾಂಸ್ಕೃತಿಕವಾಗಿ, ಸಾಮಾಜಿಕವಾಗಿ , ಆರ್ಥಿಕವಾಗಿ ಮಹಿಳೆಯನ್ನು ಮೂಲೆಗೆ ತಳ್ಳಿ ಅವಳನ್ನು ಭೋಗದ ವಸ್ತುವನ್ನಾಗಿ ಮಾತ್ರ ಬಳಸಿಕೊಳ್ಳುತ್ತಲಿದೆ. ನಾಟಕಕಾರರ ಹುಲಿಗೆವ್ವ ಅನುಭವಿಸುವ ನೋವು , ಸಂಕಟ , ಹಿಂಸೆಗಳು ದೇವನೂರರ 'ಒಡಲಾಳ' , ಮ.ನ.ಜವರಯ್ಯನವರ 'ನಾಗಿ' ಯಲ್ಲಿ ಕಾಣಬಹುದಾದರೂ ಅವುಗಳಲ್ಲಿ ಭಿನ್ನತೆ ಇದೆ.

ಹುಲಿಗೆವ್ವ ಸಾಹುಕಾರ ಗೌಡ ಹುಲಕಗೇರಿಯವರಂಥ ಕಾಮುಕ ವ್ಯಕ್ತಿಗಳಿಗೆ ಬಲಿಯಾಗಿ ಲೈಂಗಿಕ ಹಿಂಸೆಗೆ ತುತ್ತಾದರೂ ಎಲ್ಲಿಯೂ ಅವಳು ದನಿ ಎತ್ತುವುದಿಲ್ಲ . ಪುರುಷರ ವಿರುದ್ಧ ಪ್ರತಿಭಟಿಸುವ ತಾಕತ್ತನ್ನು ಹುಲಿಗೆವ್ವ ತೋರಿಸುವುದಿಲ್ಲ . ಆದರೆ 'ಒಡಲಾಳ 'ದ ಸಾಕವ್ವನ ಸ್ಥಿತಿಗೆ ಆರ್ಥಿಕ ಭದ್ರತೆ ಇಲ್ಲದಿರುವುದು ಕಾರಣವಾಗುತ್ತದೆ. ಯಜಮಾನ ಸಂಸ್ಕೃತಿಗೆ ಸೇರಿದ ಪುರುಷ ವ್ಯವಸ್ಥೆಯಲ್ಲಿ 'ನಾಗಿ' ಮನೆಯ ಎಲ್ಲ ಸದಸ್ಯರಿಂದಲೂ ಕಷ್ಟಗಳನ್ನುಅನುಭವಿಸುವ ಚಿತ್ರಣವಿದೆ.

ಕಾದಂಬರಿಯ ಅಂತ್ಯವು ಅತ್ಯಂತ ಧ್ವನಿಪೂರ್ಣವಾದುದು . ವೇಶ್ಯೆಯಾದ ಹುಲಿಗಿಯನ್ನು ತಾಯಿಯೋ , ತಂಗಿಯೋ , ಅಕ್ಕನೋ ಎಂದು ಭಾವಿಸದೆ ಚಂದ್ರು ತನ್ನ ಬಾಳಸಂಗಾತಿಯನ್ನಾಗಿ ಸ್ವೀಕರಿಸುವ ವಿಚಾರ ಬಹಳ ಗಮನಾರ್ಹವಾದುದು . ಈ ಬಗೆಯ 'ಪ್ರಜ್ಞೆ' ಪುರುಷಪ್ರಧಾನ ವ್ಯವಸ್ಥೆಯಲ್ಲಿ ಸಾರ್ವತ್ರಿಕವಾಗಬೇಕೆಂಬ ದನಿ ಸ್ಪಷ್ಟವಾಗಿದೆ.

'ಕಾಮ' ಮನುಷ್ಯ ಬದುಕಿನಲ್ಲಿ ಪ್ರಧಾನ ಪಾತ್ರವಹಿಸಿದಾಗ ಉಂಟಾಗುವ ಅನಾಹುತಗಳು ನೂರಾರು 'ರಾಮಾಯಣವಿಂದು ವಿರಾಮವಾಯಣಂ ಕಥಾ' ಎಂದಿದ್ದಾರೆ ಕುವೆಂಪು. ಇಂಥ ನೂರಾರು ರಾಮಾಯಣ ಮಹಾಭಾರತಗಳು ಸಮಕಾಲೀನ ಬದುಕಿನಲ್ಲಿ ನಡೆಯುತ್ತಲೇ ಇವೆ. ಹುಲಿಗೆಮ್ಮನಂಥ ನೂರಾರು. ಕೃತಿಗಳು ಇಲ್ಲಿ ಗಮನಾರ್ಹ. ಅದರಲ್ಲೂ ಹೈದ್ರಾಬಾದ ಕರ್ನಾಟಕದಂಥ ಜಮೀನ್ದಾರ ವ್ಯವಸ್ಥೆಯಲ್ಲಿ 'ಸ್ತ್ರೀ ಬದುಕು' ಅತ್ಯಂತ ಕಠಿಣ, ದುರ್ಭರ. ಶಾಂತರಸರ 'ನಗ್ನಗೀತಾವಿ' ಯಂಥ ಕೃತಿಗಳು ಇಲ್ಲಿ ಹೆಚ್ಚು ಗಮನಾರ್ಹವೆನಿಸುತ್ತವೆ.

ಒಟ್ಟಾರೆಯಾಗಿ ಪುರುಷಪ್ರಧಾನವಾದ ಸಮಾಜದಲ್ಲಿ ಹೆಣ್ಣನ್ನು ಕೀಳಾಗಿ ನಡೆಸಿಕೊಂಡು ಬಂದ ಪುರುಷನ ಇನ್ನೊಂದು ಮುಖವನ್ನು ಈ ಕಾದಂಬರಿಯಲ್ಲಿ ಕಾಣಬಹುದಾಗಿದೆ. ಮಹಿಳೆಯರು ಎದುರಿಸುವ ಸಮಸ್ಯೆಗಳನ್ನು, ಒಳಹೋಟಗಳನ್ನು ಸೂಕ್ಷ್ಮವಾಗಿ ಶೋಧಿಸಲಾಗಿದೆ.

ಮಾಧವಿ

ಕನ್ನಡ ಮಹಿಳಾ ಕಾದಂಬರಿಗಾರ್ತಿಯರಲ್ಲಿ ಡಾ|| ಅನುಪಮಾ ನಿರಂಜನ ಅವರ ಹೆಸರು ಜನಜನಿತ. ವಸ್ತುನಿಷ್ಠವಾದ ವಿಶ್ಲೇಷಣೆ , ವೈಚಾರಿಕವಾದ ಆಲೋಚನೆಗಳ ಮೂಲಕ ಬದುಕಿನ ದಟ್ಟ ಅನುಭವಗಳನ್ನು ಅವರ ಕಾದಂಬರಿಗಳು ಕಟ್ಟಿಕೊಡುತ್ತವೆ. ವೃತ್ತಿಯಿಂದ ವೈದ್ಯೆ; ಪ್ರವೃತ್ತಿಯಿಂದ ಲೇಖಕಿಯಾದ ಅನುಪಮಾ ಅವರು ಸಾಮಾಜಿಕ ಪ್ರಜ್ಞೆಯನ್ನುಜಾಗೃತಗೊಳಿಸುತ್ತ ,ಬಂಡಾಯದ ಆಶಯಗಳನ್ನು ಹುಟ್ಟುಹಾಕುತ್ತ , ಹೆಣ್ಣಿನ ಮೇಲೆ ಗಂಡು ನಡೆಸುವ ಅನ್ಯಾಯ, ಅತ್ಯಾಚಾರ, ಶೋಷಣೆಯ ವಿವಿಧ ಮುಖಗಳನ್ನು ತಮ್ಮ ಕೃತಿಗಳಲ್ಲಿ ಬಿಚ್ಚಿಡುತ್ತಾರೆ..ಅಸಮಾನತೆಯನ್ನು ಸ್ತ್ರೀಪುರುಷರೆಂಬ ಭೇದವನ್ನು ನಿರ್ನಾಮ ಮಾಡುವ ಸಾಹಿತ್ಯ ನಿರ್ಮಾಣದತ್ತ ದಿಟ್ಟಹೆಜ್ಜೆ ಇಟ್ಟಿದ್ದಾರೆ.

''ಭಾರತೀಯ ನಾರಿ ಅನೇಕ ಸಾಮಾಜಿಕ ಸ್ತರಗಳ, ಐತಿಹಾಸಿಕ ಯುಗಗಳ ಮತ್ತು ರಾಜಕೀಯ ಪರಿಸ್ಥಿತಿಗಳ ಮೂಲಕ ಹಾದು ಬಂದಿದ್ದಾಳೆ . ಬೆಂಕಿಯನ್ನು, ನೀರನ್ನು ಆಕೆ ಒಂದೇ ರೀತಿಯಲ್ಲಿ ದಾಟಿ ಬಂದಿದ್ದಾಳೆ. ಸೇವೆಯೇ ಅವಳ ಸ್ವಭಾವವಾಗಿದೆ. ತ್ಯಾಗವೇ ಅವಳ ಪಾಥೇಯವಾಗಿದೆ.- ಅಂದರೆ ಬಾಳಿನ ಬುತ್ತಿಯಾಗಿದೆ. ಈ ಕಥೆ ಉದಾತ್ತವಾಗಿದೆ; ಕರುಣಾಜನಕವಾಗಿದೆ ; ಕಠೋರವಾಗಿಯೂ ಇದೆ'' ಎಂದು ಮಾಧವಿ ಕಥೆಯನ್ನು ಕುರಿತು , 'ಭಾರತೀಯ ಸಮಾಜದ ಐತಿಹಾಸಿಕ ವಿಶ್ಲೇಷಣೆ ' (ಅನು: ಪ್ರಧಾನ ಗುರುದತ್ತ -೧೯೭೩) ಎಂಬ ತಮ್ಮ ಪುಸ್ತಕದಲ್ಲಿ ಭಗವತ ಶರಣ ಉಪಾಧ್ಯಾಯ ಬರೆಯುತ್ತಾರೆ ''೨೮.

'ಮಾಧವಿ' ಪ್ರಕಟವಾದದ್ದು ೧೯೭೫ರ ಮಹಿಳಾ ವರ್ಷದಲ್ಲಿ ಆಗ ಅದೇ ತಾನೇ ಭಾರತದಲ್ಲಿ 'ಮಹಿಳಾ ಚಳುವಳಿ' ಬೇರು ಬಿಡುತ್ತಿತ್ತು ಎಂದು ಹೇಳಲಾಗುತ್ತದೆ. ಈ 'ಮಾಧವಿ ' ಕಾದಂಬರಿಯ ರಚನೆಗೆ ಖ್ಯಾತ ಸಮಾಜ ವಿಜ್ಞಾನಿ ಶ್ರೀಮತಿ ಇರಾವತಿ ಕರ್ವೆಯವರ ಕೃತಿ 'ಯುಗಾಂತ' ಪ್ರೇರಣೆಯನ್ನು ಒದಗಿಸಿತೆಂದು ಲೇಖಕಿ ಅನುಪಮಾ ಅವರು ಕಾದಂಬರಿಯಲ್ಲಿ ಹೇಳಿಕೊಂಡಿದ್ದಾರೆ. 'ಯುಗಾಂತ' ಓದಿದಾಗ ಪುರಾಣದ ವ್ಯಕ್ತಿಗಳನ್ನೂ ಆಗಿನ ಸಮಾಜವನ್ನು ವೈಜ್ಞಾನಿಕವಾಗಿ ವಿಶ್ಲೇಷಿಸುವುದು ಸಾಧ್ಯ ಮತ್ತು ಅಗತ್ಯವೆಂದು ಲೇಖಕಿ ಮನಗಂಡು ಮಾಧವಿ ಕೃತಿ ರಚಿಸಿದರು. ಶ್ರೀಪಾದ ಅಮೃತ ಡಾಂಗೆಯವರ 'India from Primitive Communism to Slavery ' ಕೃತಿಯೂ ಪ್ರಭಾವ

ಬೀರಿರುವುದನ್ನು ಅನುಪಮಾ ಹೇಳಿಕೊಂಡಿದ್ದಾರೆ. ಮಾರ್ಕ್ಸ್‌ವಾದೀ ದೃಷ್ಟಿಕೋನದ ದಾಂಗೆಯವರ ಕೃತಿ ಮತ್ತು ಶ್ರೀಮತಿ ಇರಾವತಿ ಕರ್ವೆಯವರ 'ಯುಗಾಂತ' ಇವೆರಡೂ ಕೃತಿಗಳು ಪ್ರಾಚೀನ ಭಾರತವನ್ನು ಕುರಿತು ವೈಚಾರಿಕ ವಿಶ್ಲೇಷಣೆಗಳಾಗಿವೆ.

ಮಾಧವಿಯ ವಸ್ತು ಮಹಾಭಾರತದಲ್ಲಿಯ ಉಪಕಥೆ. ಕುರುವಂಶದ ಮೂಲಪುರುಷ ಯಯಾತಿ. ಭೀಷ್ಮನಿಗಿಂತ ಸುಮಾರು ಆರು ತಲೆಮಾರುಗಳ ಹಿಂದಿನವನಾದ್ದರಿಂದ 'ಮಾಧವಿ' ಕಥೆ ಮಹಾಭಾರತಕ್ಕಿಂತ ಮೂರು ಶತಮಾನಗಳಷ್ಟು ಹಿಂದಿನದೆಂಬುದು ಸ್ಪಷ್ಟವಾಗುತ್ತದೆ. ಹಳೆಯ ಪುರಾಣದ ಕವಚದಲ್ಲಿ ಸಮಕಾಲೀನ ಸತ್ಯವನ್ನು ಕಾದಂಬರಿ ಹೇಗೆ ಗರ್ಭೀಕರಿಸಿಕೊಂಡಿದೆ ಎಂಬುದನ್ನಿಲ್ಲಿ ಸಂಕ್ಷಿಪ್ತವಾಗಿ ನೋಡಬಹುದು.

ಯಯಾತಿಯ ಒಬ್ಬಳೇ ಮಗಳು ಮಾಧವಿ. ಸುಕೋಮಲೆಯಾದ ಅವಳ ಸ್ವಯಂವರಕ್ಕಾಗಿ ಏರ್ಪಾಡು ನಡೆಯುತ್ತಿರುತ್ತದೆ. ಆಕೆ ಭಾವೀ ಜೀವನದ ಕನಸು ಕಾಣುತ್ತಿದ್ದಳು. ವಿಶ್ವಾಮಿತ್ರನ ಶಿಷ್ಯನಾದ ಗಾಲವ ಯಯಾತಿಯ ಆಸ್ಥಾನಕ್ಕೆ ಆಗಮಿಸುತ್ತಾನೆ. ತನ್ನ ಗುರು ವಿಶ್ವಾಮಿತ್ರನಿಗೆ ಗುರುದಕ್ಷಿಣೆ ಒಪ್ಪಿಸಬೇಕಾಗಿದ್ದು, ಮೈಯೆಲ್ಲ ಬೆಳ್ಳಗೂ, ಒಂದು ಕಿವಿ ಕಪ್ಪಗೂ ಇರುವ ಎಂಟು ನೂರು ಕುದುರೆಗಳನ್ನು ಸಂಪಾದಿಸುವ ವಿಷಯವನ್ನು ಯಯಾತಿಗೆ ಅರುಹುತ್ತಾನೆ. ಕುದುರೆಗಳ ಬದಲಾಗಿ ಯಯಾತಿ ತನ್ನ ಮಗಳು ಮಾಧವಿಯನ್ನೇ ಗಾಲವನಿಗೆ ದಾನ ಕೊಡುತ್ತಾನೆ.

ಮುಂದೆ ಗಾಲವನ ಒಪ್ಪಂದದ ಪರಿಣಾಮವಾಗಿ ಇಕ್ಷ್ವಾಕುವಂಶದ ಹರ್ಯಶ್ವನಲ್ಲಿ ಮಾಧವಿ ಒಂದು ವರ್ಷವಿದ್ದು, 'ವಸುಮನ'ನೆಂಬ ಪುತ್ರನನ್ನು ಹೆತ್ತು ರಾಜನಿಗೆ ಒಪ್ಪಿಸುತ್ತಾಳೆ. ಆಗ ಗಾಲವನಿಗೆ ಎರಡು ನೂರು ಕುದುರೆಗಳು ಸಿಗುತ್ತವೆ. ಆ ಮೇಲೆ ಕಾಶಿಯ ದಿವೋದಾಸನಲ್ಲಿದ್ದಾಗ ಮಾಧವಿ ಪ್ರತರ್ದನ ಎಂಬ ಮಗುವಿಗೆ ಜನ್ಮ ನೀಡುತ್ತಾಳೆ. ಗಾಲವನಿಗೆ ಪುನಃ ಎರಡು ನೂರು ಕುದುರೆಗಳು ಲಭಿಸುತ್ತವೆ. ಅನಂತರ ಭೋಜ ನಗರದ 'ಉಶೀನರ'ನಿಂದ ಶಿಬಿ ಹುಟ್ಟಿದಾಗ ಗಾಲವ ಮತ್ತೆ ಎರಡು ನೂರು ಕುದುರೆಗಳನ್ನು ಪಡೆಯುತ್ತಾನೆ. ವಿಶ್ವಾಮಿತ್ರನಿಗೆ ಕೊಡಬೇಕಾದುದು ಎಂಟುನೂರು ಕುದುರೆಗಳು. ಈಗ ಗಾಲವನಲ್ಲಿ ಇದ್ದುದು ಆರುನೂರು. ಮಿಕ್ಕನ್ನೂ ಎರಡು ನೂರು ಕುದುರೆಗಳ

ಬದಲಾಗಿ ಗಾಲವ ವಿಶ್ವಾಮಿತ್ರನಿಗೆ ಮಾಧವಿಯನ್ನೇ ಒಪ್ಪಿಸುತ್ತಾನೆ. ಇಲ್ಲಿ ವಿಶ್ವಾಮಿತ್ರನಿಂದ ಅಷ್ಟಕನೆಂಬ ಪುತ್ರ ಜನಿಸುತ್ತಾನೆ. ಐದು ವರ್ಷಗಳ ತರುವಾಯ ಗಾಲವ ಮಾಧವಿಯನ್ನು ಕರೆದೊಯ್ದಾಗ, ಯಯಾತಿ ಪಶ್ಚಾತ್ತಾಪಪಟ್ಟು ಸ್ವಯಂವರವನ್ನು ಏರ್ಪಡಿಸುತ್ತಾನೆ. ಮಾಧವಿ ಹಿಡಿದ ಹಾರವನ್ನು ಎಸೆದು, ನೆರೆದ ರಾಜರನ್ನೆಲ್ಲ ತಿರಸ್ಕರಿಸಿ, ಕಾಡಿಗೆ ತಪಸ್ಸಿಗೆಂದು ಹೋಗುವುದರೊಂದಿಗೆ ಕಥೆ ಮುಕ್ತಾಯಗೊಳ್ಳುತ್ತದೆ.

ಪಿತೃಪ್ರಧಾನ ಸಂಸ್ಕೃತಿಯಲ್ಲಿ ಸ್ತ್ರೀ ಯಾವ ವರ್ಗಕ್ಕೆ ಸೇರಿದ್ದರೂ ಸಮಾಜದಲ್ಲಿ ಅವಳ ಸ್ಥಾನ ಶೂದ್ರರಿಗಿಂತ ಕಡಿಮೆಯಾದ್ದುದನ್ನು ಭಾರತಾಧ್ಯಯನ ಮಾಡಿದ ಅನೇಕ ವಿದೇಶಿ ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ಹೆಣ್ಣಿನ ಶೋಷಣೆಯನ್ನೇ ಕೇಂದ್ರ ವಸ್ತುವನ್ನಾಗಿ ಪಡೆದುದನ್ನು ಇಲ್ಲಿ ನಾವು ಗಮನಿಸಬಹುದು. ಮಾಧವಿ ರಾಜಕುಮಾರಿಯಾಗಿ ಹುಟ್ಟಿದ್ದರೂ, ಸಾಮಾನ್ಯ ಸ್ತ್ರೀಯರಂತೆಯೇ ಕಷ್ಟ-ನಷ್ಟಗಳನ್ನು ಅನುಭವಿಸುವ ಪ್ರಸಂಗ ಗಮನ ಸೆಳೆಯುತ್ತದೆ. ಪುರುಷ ಪ್ರಧಾನ ಸಂಸ್ಕೃತಿಯಲ್ಲಿ ಮಹಿಳೆ ಎಂತಹುದೇ ಎತ್ತರದ ಪದವಿಯಲ್ಲಿರಲಿ, ಉಚ್ಛ ಕುಲದಲ್ಲಿರಲಿ ಅವಳ ಶೋಷಣೆ ಮಾತ್ರ ತಪ್ಪಿರಲಿಲ್ಲವೆಂಬ ಅಂಶ ಮಾಧವಿ ಕಾದಂಬರಿಯಿಂದ ಸ್ಪಷ್ಟವಾಗುತ್ತದೆ. ಅಂದಿನ ಸಮಾಜದ ದಬ್ಬಾಳಿಕೆಗೆ ಕಾರಣವಾದ ಮಾಧವಿ ತನ್ನದೆಲ್ಲವನ್ನು ಕಳೆದುಕೊಂಡು, ಭಾವೀ ಕನಸುಗಳನ್ನೆಲ್ಲ ಸುಟ್ಟುಕೊಂಡು, ಮನಸ್ಸನ್ನು ಕಲ್ಲಾಗಿಸಿಕೊಂಡು ಅಂತಹ ವ್ಯವಸ್ಥೆಯಲ್ಲಿಯೇ ಜೀವಚ್ಛವವಾಗಿ ಬದುಕುತ್ತಿರುವುದು ಅಗಾದ ಪರಿಣಾಮ ಉಂಟು ಮಾಡುವಂಥದ್ದಾಗಿದೆ. ಮಾಧವಿ ಹುಟ್ಟಿದಾಗ, 'ಹೆಣ್ಣು ಕೂಸು' ಎಂಬ ಶಬ್ದ ಕಿವಿಗೆ ಬೀಳುತ್ತಲೇ ಯಯಾತಿ ಮಹಾರಾಜ ತನಗೆ ಕಾರ್ಯಭಾರವಿದೆ ಬರುವುದಿಲ್ಲವೆಂದು ತನ್ನ ತಿರಸ್ಕಾರವನ್ನು ಸೂಚಿಸುತ್ತಾನೆ. ಮರುದಿನ ಮಹಾರಾಣಿ ವಿಷಮ ಜ್ವರದಿಂದ ಬಳಲಿ, ರಕ್ತಸ್ರಾವವಾಗಿ ಸಾವನ್ನಪ್ಪುತ್ತಾಳೆ. ''ಹೆಣ್ಣಾಗಿ ಹುಟ್ಟಿ ಹಾಲದೂಡಿತ ತಾಯಿಗೆ ಮೃತ್ಯುವು ಆಯಿತು ಈ ಮಗು ಅಶುಭಕುವರ ಮುದ್ದ'' ಎನ್ನುವ ಯಯಾತಿ ರಾಜನ ಮನಸ್ಸಿನಲ್ಲಿ ಹೆಣ್ಣಿನ ಬಗೆಗಿರುವ ವಿಕೃತ್ಯಭಾವನೆಯನ್ನು ಇಲ್ಲಿ ಗುರುತಿಸಬಹುದು.

ಮೊದಲೇ ಮಾಧವಿಯ ಬಗ್ಗೆ ತಿರಸ್ಕೃತ ಮನೋಭಾವವಿರುವ ಯಯಾತಿ, ಗಾಲವನಿಗೆ ಅವಳನ್ನು ದಾನಕೊಡುವುದು ಹೊಸ ತಿರುವಿಗೆ ಕಾರಣವಾಗುತ್ತದೆ. '' ಮಾಧವಿಯನ್ನು ಕೊಡಲು ಯಾವ ಅಭ್ಯಂತರವಿದೆ? ಹೇಗೂ ಈ ಮಗಳು

ತನಗೆ ಹೊರೆಯೋ! ಹುಟ್ಟಿದಂದೇ ಅಪಶಕುನ ಹೊತ್ತು ಬಂದವಳು, ತನಗೆ ಯಾವ ವಿಧದಿಂದಲೂ ಪ್ರಯೋಜನಕಾರಿಯಲ್ಲ. ತನ್ನ ವೃದ್ಧಾಪ್ಯಕ್ಕೆ ಆಗುವ ಗಂಡು ಮಕ್ಕಳು ಯದು, ದ್ರುಹ್ಯ, ಪುರು ಇವರುಗಳಿರುವಾಗ ಯಃಕಶ್ಚಿತ್ ಹುಡುಗಿಯ ಬಗ್ಗೆ ಯಾಕೆ ಮರುಗಬೇಕು? ದಾನ ಮಾಡುವವನು ತಾನು, ಅವಳ ತಂದೆ, ದಾನದ ಬಗ್ಗೆ ಮಾಧವಿ ಏನನ್ನು ಬಲ್ಲಳು? ಅವಳ ಮಾತಿಗೆ ತಾನು ಬೆಲೆಕೊಡುವ ಅಗತ್ಯವಿಲ್ಲ. ಪ್ರಜೆಗಳು 'ಮಗಳನ್ನೇ ದಾನಕೊಟ್ಟುಬಿಟ್ಟ 'ಎಂಥ ದಾನಶೂರ' ಎಂದು ಹೊಗಳುತ್ತಾರೆ, ಕೊಂಡಾಡುತ್ತಾರೆ''೨೯ ಎಂದು ಯಯಾತಿ ಧೂರ್ತ ಆಲೋಚನೆಯನ್ನು ಮಾಡುತ್ತಾನೆ. ಇಲ್ಲಿಂದಲೇ ಮಾಧವಿಯ ಶೋಷಣೆಗೆ ನಾಂದಿಯಾಗುತ್ತದೆ. ಇಡೀ ಕಾದಂಬರಿಯಲ್ಲಿ ಅಂತರ್ಗತವಾಗಿರುವುದು ಶೋಷಣೆಯ ವಿವಿಧ ಹಂತಗಳು, ವಿಫಲ ಪ್ರತಿಭಟನೆಗಳು.

ಕಣ್ಣು ತೆರೆಯುತ್ತಲೇ ತಾಯಿಯನ್ನು ಕಳೆದುಕೊಂಡ ಮಾಧವಿ ಅಜ್ಜಿಯ ಪ್ರೀತಿಯ ನೆರಳಲ್ಲಿ ಬೆಳೆಯುತ್ತಾಳೆ. ಹೆತ್ತ ಸ್ಥಾನದಲ್ಲಿರುವ ಮಲ ಮಹಾರಾಣಿ ದೇವಯಾನಿ ಕೂಡ ಮಾಧವಿಯನ್ನು ಹೊರಹಾಕಲು ಹಂಚುಹಾಕುತ್ತಾಳೆ. ''ಬೊಕ್ಕಸದಲ್ಲಿ ಹಣವಿಲ್ಲ ಎನ್ನುತೀರ. ಮಾಧವಿಯ ಸ್ವಯಂವರ ಏರ್ಪಡಿಸಿದರೆ ಧನ ಕನಕ ಬೇಡವೇ? ಅದಕ್ಕೆ ಬದಲು ಮಾಧವಿಯನ್ನು ಈ ಮುನಿಗೆ ದಾನ ಕೊಟ್ಟುಬಿಟ್ಟರೆ ನಮ್ಮ ಧರ್ಮವು ಉಳಿಯಿತು. ಸ್ವಯಂವರಕ್ಕೆ ಹೊಂದಿಸಿಕೊಳ್ಳಬೇಕಾದ ಹಣದ ಯೋಚನೆಯೂ ತಪ್ಪಿತು''೩೦ ಎಂಬುದು ಅವಳ ಹಂಚಿಕೆ.

ಇಲ್ಲಿ ಯಯಾತಿ ಮಗಳೆಂಬ ಮೋಹ ಮರೆತು, ಅಮೂರ್ತ ಕಲ್ಪನೆಗಳಿಗೆ ಕಟ್ಟುಬಿದ್ದು ಮಗಳನ್ನೇ ಪಶುವಿನಂತೆ ದಾನ ಮಾಡುವ ಕ್ರಿಯೆ ಅತ್ಯಂತ ಹೇಯವಾದುದು. ರಕ್ಷಿಸಬೇಕಾದ ತಂದೆಯೇ ಭಾವೀ ಬದುಕನ್ನು ಮಣ್ಣುಪಾಲು ಮಾಡುತ್ತಾನೆ. ದೇವಯಾನಿ ತಾನೂ ಒಬ್ಬ ಹೆಣ್ಣಾಗಿ, ಹೆಣ್ಣಾದ ಮಾಧವಿಯ ಬಗೆಗೆ ತಾಳುವ ನಿಲುವು ಸರಿಯಾದುದಲ್ಲ. ಅವಳ ಮಾತುಗಳಿಂದ ಮಮತ್ವ ಸಂಬಂಧಗಳಿಗಿಂತ, ಹಣವೇ ಮೇಲಾಗಿ ಕಾಣುತ್ತದೆ. ದೇವಯಾನಿ ತಾನೂ ಹೆಣ್ಣು ಎನ್ನುವುದನ್ನು ಮರೆತು ಮಾಧವಿಯ ಮೇಲೆ ಮತ್ತೆ ಮತ್ತೆ ಮಾತ್ಸರ್ಯ ಪಡುತ್ತಾಳೆ. ಇನ್ನೊಂದು ಪ್ರಸಂಗದಲ್ಲಿ ದೇವಯಾನಿ ಲಕ್ಷ್ಮೀ ಪೂಜೆಗೆ ಸಿದ್ಧಳಾದಾಗ ಶರ್ಮಿಷ್ಠೆಯ ಪೂಜೆಯ ಆಸೆಗೆ ತಣ್ಣೀರೆರಚಿ 'ಮಹಾರಾಣಿಗೆ ಮಾತ್ರ ಪೂಜೆಯ ಹಕ್ಕು' ಎನ್ನುತ್ತಾಳೆ. ರಾಣಿಯರ ನಡುವಿನ ಈ ವರ್ತನೆ ತೀರ ಅಸಹಜವಾಗಿ ಕಾಣುತ್ತದೆ. ಅವರಿಬ್ಬರೂ

ಹೆಂಗಸರೇ. ಪ್ರಜಾಕ್ಷೇಮದೇವತೆಯೂ ಕೂಡ ಹೆಣ್ಣೇ ಆಗಿದ್ದಾಳೆ. ''ಪುರುಷರ ದಬ್ಬಾಳಿಕೆಯಿಂದ ಹೆಣ್ಣಿನ ಶೋಷಣೆಯೆಂದು ಕಾದಂಬರಿ ಹೇಳುವಂತೆ ಕಂಡರೂ, ಈ ವಿರುದ್ಧ ಸತ್ಯ ಹೆಣ್ಣು ಹೆಣ್ಣನ್ನೇ ಶೋಷಿಸುವ ವಿವಿಧ ಮುಖಗಳ ಮೇಲೆ ಬೆಳಕು ಬೀರುತ್ತದೆ. ಹೆಣ್ಣಿನಿಂದಲೇ ಹೆಣ್ಣಿಗಾಗುವ ಅತ್ಯಾಚಾರವನ್ನು ಬಯಲು ಮಾಡುತ್ತದೆ. ಇಂಥ ಒಳಸುಳಿಗಳಿಂದ ಕಾದಂಬರಿಯು ವ್ಯಂಗ್ಯಕ್ಕೆ ಹೊಸ ಆಯಾಮ ಬಂದಿದೆ.''[೩೧] ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಸ್ತ್ರೀ ಶೋಷಣೆಗೆ ಗಂಡಸೇ ಕಾರಣವೆಂದು ಹೇಳಬಹುದಾದರೂ, ಕೆಲವೊಂದು ಸಂದರ್ಭಗಳಲ್ಲಿ ದೇವಯಾನಿಯಂಥ ಹೆಂಗಸರು ಕುಮ್ಮಕ್ಕು ನೀಡುವುದರಿಂದ ಶೋಷಣೆ ಮತ್ತಷ್ಟು ಘೋರರೂಪ ಪಡೆಯುತ್ತದೆಂದು ಸ್ಪಷ್ಟಗೊಳ್ಳುತ್ತದೆ.

ಗಾಲವ ದಾರಿಯಲ್ಲಿ ಸ್ವರ್ಗ ಪ್ರಾಪ್ತಿಗೆಂದು ಯಜ್ಞಯಾಗಾದಿಗಳ ಮಹತ್ವವನ್ನು ವಿವರಿಸಿದಾಗ, ತನ್ನ ತಂದೆಯೂ ಯಾಗಗಳನ್ನು ಮಾಡಿದ್ದಾಗಿಯೂ ಈಗ ತಾನೇ ಯಜ್ಞಪಶುವಾಗಿ ಬಲಿಯಾದುದನ್ನು ಹೇಳುತ್ತಾಳೆ. ಗಾಲವನಿಗೆ ಬೇಕಾದ ಎಂಟುನೂರು ಕುದುರೆಗಳಿಲ್ಲದ ಕಾರಣ ಹರ್ಯಶ್ವ ಒಂದು ವರ್ಷದವರೆಗೆ ತಾನು ಮಾಧವಿಯನ್ನು ಭೋಗಿಸುವುದಾಗಿಯೂ ಅದಕ್ಕೆ ಬದಲಾಗಿ ಇನ್ನೂರು ಕುದುರೆಗಳನ್ನು ಕೊಡುವುದಾಗಿಯೂ ಹಾಗೂ ಇನ್ನುಳಿದ ಕುದುರೆಗಳನ್ನು ಪಡೆಯಲು ಮಾಧವಿಯನ್ನು ಪುನಃ ಬೇರೊಬ್ಬ ರಾಜನಲ್ಲಿ ಬಿಡಬಹುದೆಂದು ಸೂಚಿಸುತ್ತಾನೆ.

ಮಾರ್ಗಾಯಾಸದಿಂದ ಬಳಲಿದ ಗಾಲವ ಮತ್ತು ಮಾಧವಿ ಋಷಿ ಪತ್ನಿಗೆ ಕೇಳುವ ಪ್ರಶ್ನೆ ಅತ್ಯಂತ ಮೂಲಭೂತವಾದುದಾಗಿದೆ. ''ಪುಣ್ಯ ಲೋಕ ಪಡೆಯಲು ಯಾವ ಯಾವ ಮಾರ್ಗಗಳಿವೆ?'' ಎಂದಾಗ ಗಾಲವ ಸ್ವರ್ಗಪ್ರಾಪ್ತಿಗೆ ಏಳು ಮಾರ್ಗಗಳಿವೆಯೆಂದು ನಮ್ಮ ಗುರುಗಳು ಹೇಳುತ್ತಿದ್ದರು. ತಪಸ್ಸು, ದಾನ, ಶಮ, ದಮ,ಲಜ್ಜೆ ಋಜುತ್ವ ಮತ್ತು ಸರ್ವಭೂತಾನುಕಂಪ ಈ ಮಾರ್ಗದಲ್ಲಿ ನಡೆಯುವವನಿಗೆ ಅಹಂಕಾರವಿರಬಾರದು. ಅತಿಯಾದ ಸ್ವಾಭಿಮಾನವೂ ಇರಬಾರದು.''

ಒಳ ಕೋಣೆಯಲ್ಲಿ ದರ್ಭೆಯ ಮೇಲೆ ಕುಳಿತು ಮಾತನಾಡುತ್ತಿದ್ದ ಮಾಧವಿ ಋಷಿ ಪತ್ನಿಗೆ ಕೇಳುತ್ತಾಳೆ. ಸರ್ವಭೂತಾನು ಕಂಪವಿದ್ದಿದ್ದರೆ ಗಾಲವರು ನನ್ನನ್ನು ಬಲಿ ಪಶುವಾಗಿ ತರುತ್ತಿದ್ದರೆ ಅಕ್ಕಾ?[೩೨] ಎಂದಾಗ ಋಷಿ ಪತ್ನಿ ಅನುಕಂಪದಿಂದ ಹೀಗೆ ಹೇಳುತ್ತಾಳೆ. ''ತಂಗಿ ಇವು ಉಪದೇಶಿಸಲಿಕ್ಕೆ ಇರುವಂಥವು. ಋಷಿಗಳೆಲ್ಲ ಹೀಗೆ ನಡೆಯಬೇಕೆಂಬ

ನಿಬಂಧನೆಯೇನೂ ಇಲ್ಲವಲ್ಲ. ಇದನ್ನು ಬೋಧಿಸಿದ ವಿಶ್ವಾಮಿತ್ರರು ಮೇನಕೆ, ಘೃತಾಚಿಯರೊಂದಿಗೆ ಬಾಳ್ವೆ ಮಾಡಲಿಲ್ಲವೆ? ಅವರಿಂದ ಮಕ್ಕಳನ್ನು ಪಡೆಯಲಿಲ್ಲವೆ? ಎಂದಳು? ೨೩

ಈ ರೀತಿಯಾಗಿ ಋಷಿಗಳು ಮಾಡುವ ವಿಷಯಲಂಪಟತನ ಗೊತ್ತಿದ್ದರೂ ಋಷಿ ಪತ್ನಿಗಳು ಏನೂ ಮಾಡುವ ಹಾಗಿರಲಿಲ್ಲ. ಅದರಂತೆ ರಾಣಿಯರಿಗೇ ರಾಜರು ಮಾಡುವ ಕಪಟತನ, ಸ್ವಾರ್ಥ ತಿಳಿದಿದ್ದರೂ ಬಾಯಿಬಿಚ್ಚುತ್ತಿರಲಿಲ್ಲ. ಇಲ್ಲಿ ಧರ್ಮಶಾಹಿ ಮತ್ತು ರಾಜಶಾಹಿಗಳು ಒಂದಕ್ಕೊಂದು ಅಂತರ ಸಂಬಂಧವಿಟ್ಟುಕೊಂಡಂತೆ ಕಾಣುತ್ತದೆ. ರಾಜಕೀಯ ಸ್ವಾರ್ಥತನಕ್ಕೆ, ಧರ್ಮಾತ್ಮರು, ಧರ್ಮಪರಿಪಾಲಕರೆಂದು, ಕರೆಸಿಕೊಳ್ಳುವ ಮುನಿಗಳು ಬೆಂಬಲಿಸುತ್ತಾರೆ. ಧಾರ್ಮಿಕ ವ್ಯಕ್ತಿಗಳು ನಡೆಸುವ ಲಂಪಟತನಕ್ಕೆ ರಾಜಮುದ್ರೆ ಸಿಗುತ್ತಿತ್ತು. ಹೀಗೆ ಈ ಎರಡು ವ್ಯವಸ್ಥೆಗಳ ಮಧ್ಯದಲ್ಲಿ ಮಹಿಳೆಯರು ನರಳಿ ಸಾಯುತ್ತಾರೆ. ಏನಿದ್ದರೂ ಅವರು ಕೇವಲ ಭೋಗದ ವಸ್ತುವಾಗಿ ಗೋಚರಿಸುತ್ತಾರೆ.

ಅಯೋಧ್ಯೆಯ ಅರಸ ಹರ್ಯಶ್ವ, ತನ್ನಲ್ಲಿ ಎಂಟುನೂರು ಕುದುರೆಗಳಿಲ್ಲದಿದ್ದರೂ ಎರಡು ನೂರು ಕುದುರೆ-ಗಳಿಗೆ ಮಾಧವಿಯನ್ನು ತನ್ನಲ್ಲಿ ಇಟ್ಟುಕೊಳ್ಳುವುದಾಗಿ ಹೇಳಿ ''ಮಾಧವಿಯಲ್ಲಿ ನಾನು ಯಥೇಚ್ಛವಾಗಿ ಕಾಮ ಸುಖ ಸವಿದು ಪುತ್ರಸಂತಾನ ಪಡೆಯುತ್ತೇನೆ. ಅನಂತರ ಅವಳನ್ನು ನಿಮಗೆ ವಾಪಸು ಕೊಡುವೆ. ಆಗ ಅವಳನ್ನು ಇನ್ನೊಬ್ಬ ರಾಜನಿಗೊಪ್ಪಿಸಿ ಉಳಿದ ಅಶ್ವಗಳನ್ನು ಅವನಿಂದ ಪಡೆದುಕೊಳ್ಳಿ''೨೪ ಎಂಬ ಮಾತು ಗಾಲವನಿಗೆ ಒಪ್ಪಿಗೆಯಾಗಿ ಮಾಧವಿಯನ್ನು ಬಿಟ್ಟು ಹೊರಟು ಹೋಗುತ್ತಾನೆ.

ಮಾಧವಿಯ ಇಷ್ಟಾನಿಷ್ಟಗಳನ್ನು ವಿಚಾರಿಸದೇ ಏಕಪಕ್ಷೀಯ ನಿರ್ಧಾರಕೈಗೊಂಡುದು ಮಹಿಳಾ ಸ್ವಾತಂತ್ರ್ಯದ ಮೇಲೆ ಹೇರಿದ ಹೆಬ್ಬಂಡೆಯಾಗಿದೆ. ಇಲ್ಲಿ ಒಂದು ಹೆಣ್ಣಿನ ಆಸೆ-ಆಕಾಂಕ್ಷೆಗಳಿಗೆ ಬೆಲೆಯೇ ಇಲ್ಲ. ಏನಿದ್ದರೂ ಅವಳು ಪುರುಷ ವ್ಯವಸ್ಥೆಯ ಅಡಿಯ ಹುಡಿಯಾಗಿ ಬಾಳು ನಡೆಸಬೇಕು. ಹರ್ಯಶ್ವ ಮಾಧವಿಯನ್ನು ಪರಿಪರಿಯಾಗಿ ಸಂತೈಸುತ್ತಾನಾದರೂ ಅವಳು ಏನೊಂದು ಪ್ರತಿಕ್ರಿಯಿಸದೇ ಕಲ್ಲುಗೊಂಬೆಯಾಗುತ್ತಾಳೆ. ಅವನು ಮಾತ್ರ ಮಾಧವಿಯನ್ನು ಕ್ರಮಿಸುತ್ತಾನೆ. ಅವಳಿಲ್ಲಿ ಅಸಹಾಯಕಿ! ಅಬಲೆ!!

ಬಂದ ಕಷ್ಟ-ನಷ್ಟ, ಮೋಹ-ನಿರಾಸೆಗಳನ್ನು ಅನುಭವಿಸಲು ಸಿದ್ಧಳಾದ ಮಾಧವಿಯಲ್ಲಿ ಬೇರೆ ಭಾವನೆಗಳಿಗೆ ಸ್ಥಳವೇ ಇಲ್ಲ. ಒಂದು ಹೆಣ್ಣಿನ ಶೋಷಣೆಯ ಹಲವಾರು ಮುಖಗಳನ್ನು ಕಾದಂಬರಿ ಇಲ್ಲಿ ಅತ್ಯಂತ ಸಮರ್ಥವಾಗಿ ಚಿತ್ರಿಸುತ್ತಲೇ, ಹೆಣ್ಣೊಬ್ಬಳ ಒಳನೋಟಗಳನ್ನು ತೆರೆದಿಡುತ್ತದೆ. ಮಾಧವಿ ಕೇವಲ ಕಾಮತೃಷೆ ತೀರಿಸುವ ಹೆಣ್ಣು ಹಾಗೂ ಮಕ್ಕಳನ್ನು ಹೆರುವ ಯಂತ್ರವಾಗಿ ಪರಿಗಣಿಸುತ್ತಾಳೆ. ಅವಳ ಬದುಕು ಮುಳ್ಳಿನ ಹಾಸಿಗೆಯಾಗಿ ಚಿತ್ರಿತವಾಗಿದೆ. ಒಬ್ಬೊಬ್ಬ ರಾಜರಲ್ಲಿ ಒಂದೊಂದು ಮಗುವಿಗೆ ಜನ್ಮ ನೀಡುತ್ತಾಳೆ. ತಾಯಿ ನವಮಾಸ ಹೊತ್ತು ಹೆತ್ತ ಕಂದಮ್ಮಗಳನ್ನು ಪಡೆಯಲೂ ಅವಳಿಗೆ ಹಕ್ಕಿಲ್ಲ. ಒಂದೊಂದು ಕ್ಷಣ ಅವಳನ್ನು ಜರ್ಝರಿತಳನ್ನಾಗಿಸುತ್ತದೆ, ಘಾಸಿಗೊಳಿಸುತ್ತದೆ. ತಂದೆ ಯಯಾತಿಯಿಂದ ಗಾಲವನಿಗೆ ದಾನವಾಗಿ ಕೊಡಲ್ಪಟ್ಟ ಮಾಧವಿ'' ರಾಜರಿಂದ ರಾಜರಿಗೆ ವರ್ಗಾಯಿಸಲ್ಪಡುವ, ಆ ರಾಜರುಗಳಿಗೆಲ್ಲ ಮಕ್ಕಳನ್ನು ಹೆತ್ತು ಕೊಡುವ ವಸ್ತುವಾಗುತ್ತಾಳೆ. ಸ್ವಾತಂತ್ರ್ಯ ಬಯಸುವ ಇಂಥ ವ್ಯಕ್ತಿಯನ್ನು ಎಲ್ಲ ಕಾಲದಲ್ಲೂ ಇರಬಹುದಾದ ಸ್ತ್ರೀ ಮಾತ್ರವಲ್ಲ, ಮಾಧವಿ ಎಲ್ಲ ಕಾಲದ ಶೋಷಿತ ಸ್ತ್ರೀಯರ ಪ್ರತಿನಿಧಿಯಾಗಬಲ್ಲಳು''೩೫ ಎನ್ನುವ ಮಾತಿನಲ್ಲಿ ತಥ್ಯವಿದೆ ಎನಿಸುತ್ತದೆ.

ಹರ್ಯಶ್ವನಲ್ಲಿ ಗಂಡು ಮಗುವಿಗೆ ಜನ್ಮ ನೀಡಿದ ನಂತರ ಮಾಧವಿಯ ಹತ್ತಿರ ರಾಜ ಒಮ್ಮೆ ಬಂದಾಗ ''ಮಹಾರಾಜ, ಮಗ ಹುಟ್ಟಿ ನಿಮ್ಮ ಸಂಕಲ್ಪ ಈಡೇರಿತು. ಇನ್ನು ನಿಮಗೆ ನನ್ನ ಮೇಲೆ ಯಾವ ಅಧಿಕಾರವೂ ಇಲ್ಲ! ಎಂದು ಅವಳು ಪ್ರತಿಭಟನೆಯನ್ನು ಪ್ರಕಟಿಸುತ್ತಾಳೆ. ಸುಮಾರು ದಿನಗಳಿಂದ ಸಮುದ್ರವಾದ ಮಾಧವಿ ಇಲ್ಲಿ ನಿದಿಮುದ್ದಾಗಿ ಸ್ಫೋಟಗೊಳ್ಳುತ್ತಾಳೆ. ಪುನಃ ಗಾಲವನೊಂದಿಗೆ ಹೊರಟ ಮಾಧವಿಗೆ ದಿವೋದಾಸ ಮತ್ತು ಉಶೀನರ ಈ ಇಬ್ಬರೂ ರಾಜರಲ್ಲೂ ಹಿಂದಿನ ಪದ್ಧತಿಯೇ ಪುನರಾವರ್ತನೆಯಾಗುತ್ತದೆ.

ದಿವೋದಾಸನ ಅರಮನೆಯಲ್ಲಿದ್ದಾಗ ಮಾಧವಿ, ದೇವದಾಸಿ ಮಂದಾರ ಮಾಲೆಯನ್ನು ಕುರಿತು ಮನೆಯಲ್ಲಿ ಯಾರಾರಿದ್ದೀರಿ ಎಂಬ ಪ್ರಶ್ನೆಗೆ ''ನಾನು ದೇವದಾಸಿ, ಮದ್ವೆ ಆಗೋದಿಲ್ಲ. ರಾಜರು ಇಷ್ಟ ಪಟ್ಟಾಗ ಅರಮನೆಗೆ ಬಂದು ಹೋಗ್ತೀನಿ. ಇಲ್ಲೆ ಇದ್ಬಿಡು ಅಂತ ಮಹಾರಾಜರು ಎಷ್ಟೋ ಸಾರಿ ಹೇಳಿದ್ದಾರೆ. ಪಂಜರದ ಹಕ್ಕಿ ಹಾಗೆ ಇಲ್ಲಿರೋಕೆ ನಂಗಿಷ್ಟವಿಲ್ಲ. ಹೊರಗೇ ಚೆನ್ನ, ನಂಗಿಷ್ಟ ಬಂದವರ ಜೊತೆ ಮಲಗ್ತೀನಿ, ಹೀಗೆ ಹೇಳ್ತೀಂತ ರಾಜಕುಮಾರಿ

ತಪ್ಪು ತಿಳ್ಕೊಬಾರದು. ಇಷ್ಟರ ಮಟ್ಟಿಗೆ ನಾನು ಸ್ವತಂತ್ರೆ''೩೬ ಎನ್ನುತ್ತಾಳೆ. ಕಾದಂಬರಿಗಾರ್ತಿ ಇಲ್ಲಿ ಮಂದಾರ ಮಾಲೆಯ ಬಾಯಿಂದ ಹೇಳಿಸಿದ ಮಾತುಗಳು ಅವು ಕೇವಲ ಅವಳಿಗಷ್ಟೇ ಸೀಮಿತವಲ್ಲ. ಭಾರತೀಯ ಸಮಾಜದಲ್ಲಿ ಬದುಕುವ ಇಡೀ ಮಹಿಳಾ ಸಮಾಜದ ಮಂದಾರ ಮಾಲೆಯಂಥ ಹತಭಾಗಿನಿಯರ ಶೋಷಣೆಯ ಜೀವನವನ್ನು ಕಟ್ಟಿಕೊಡುತ್ತಾರೆ. ಹೆಣ್ಣು ಪುರುಷ ವರ್ಗದ ಮೂಗಿನ ನೇರಕ್ಕೇ ನಡೆಯಬೇಕೆಂಬ ಪುರುಷ ವ್ಯವಸ್ಥೆಯ ಕಪಟವನ್ನು ಕಾದಂಬರಿ ಧ್ವನಿಸುತ್ತದೆ. ಒಬ್ಬ ರಾಜಕುಮಾರಿಯಾಗಿಯೂ ಮಾಧವಿ ಅನುಭವಿಸುವ ಶೋಚನೀಯ ಸ್ಥಿತಿ ಕರುಣಾಜನಕವಾಗಿದೆ. ವಿಶ್ವಾಮಿತ್ರನಿಗೆ ಮಾತುಕೊಟ್ಟಂತೆ ಗಾಲವ, ಗುರುದಕ್ಷಿಣೆಯನ್ನು ಒಪ್ಪಿಸಲು ಬಂದಾಗ ಆರುನೂರು ಕುದುರೆಗಳ ಜೊತೆ ಎರಡು ನೂರು ಕುದುರೆಗಳ ಬದಲಾಗಿ ಮಾಧವಿಯನ್ನು ಒಪ್ಪಿಸುತ್ತಾನೆ. ಆಗ ವಿಶ್ವಾಮಿತ್ರ ಮಾಧವಿಯ ರೂಪಕ್ಕೆ ಮರುಳಾಗಿ ''ಎಂಟುನೂರು ಅಶ್ವಗಳಿಗೆ ಬದಲಾಗಿ ಈ ಮಾಧವಿಯನ್ನೇ ಸ್ವೀಕರಿಸಿ ಅಂತ ಹೇಳಿ ಇವಳನ್ನು ನನ್ನಲ್ಲಿ ತಂದು ಬಿಟ್ಟಿದ್ರೆ ಎಷ್ಟು ಚೆನ್ನಾಗಿತ್ತು. ನಾನೇ ಇವಳನ್ನು ಜೀವಮಾನ ಪರ್ಯಂತ ಭೋಗಿಸಿ ಜಗತ್ತಿಗೆ ಶ್ರೇಷ್ಠರಾದ ನಾಲ್ವರು ಪುತ್ರರನ್ನು ಪಡೀತಿದ್ದೆ. ಇರಲಿ ಆದದ್ದಾಗಿ ಹೋಯ್ತು. ಇವಳಲ್ಲಿ ಒಬ್ಬನೇ ಮಗನನ್ನು ಪಡೆದು ಅನಂತರ ಮಾಧವಿಯನ್ನು ನಿನಗೆ ಒಪ್ಪಿಸಿ ಬಿಡ್ತೀನಿ''೩೭ ಎಂದು ಹೇಳುತ್ತಾನೆ.

ವಿಶ್ವಾಮಿತ್ರ ಅರಿಷಡ್ವರ್ಗಗಳನ್ನು ಗೆದ್ದವನೆಂದು ಪುರಾಣಗಳಲ್ಲಿ ಉಲ್ಲೇಖಿಸಲಾಗಿದೆ. ಆದರೆ ಅವನು ಇಲ್ಲಿ ಆಡುವ ಮಾತುಗಳನ್ನು ಗಮನಿಸಿದಾಗ ಋಷಿಮುನಿಗಳು ಕೂಡಾ ವಿಷಯವಾಸನೆಯಿಂದ ಮುಕ್ತರಾಗಿರಲು ಇಲ್ಲವೆಂಬುದು ವಿದಿತವಾಗುತ್ತದೆ. ದೇವರು-ಧರ್ಮವೆಂಬ ನೆಪದಲ್ಲಿ ಇಡೀ ಸಮಾಜದ ಜನತೆಯನ್ನು ನಿಯಂತ್ರಿಸುವ ಪುರೋಹಿತಶಾಹಿಗಳು ಪರದೆಯ ಹಿಂದೆ ನಡೆಸುವ ಕುಕೃತ್ಯಗಳನ್ನು ಕಾದಂಬರಿ ಅಪ್ರತ್ಯಕ್ಷವಾಗಿ ಸಾಕ್ಷೀಕರಿಸುತ್ತದೆ.

ಈ ಹಿಂದೆ ಅರಮನೆಗಳಲ್ಲಿ ಮಾಧವಿ ಗಂಡುಮಕ್ಕಳಿಗೆ ಜನ್ಮನಿತ್ತಂತೆ, ವಿಶ್ವಾಮಿತ್ರನಿಂದ ಗರ್ಭಧರಿಸಿ ಆಶ್ರಮದಲ್ಲಿ ಗಂಡು ಮಗುವಿಗೆ ಜನ್ಮನೀಡುತ್ತಾಳೆ, ''ಹೆಣ್ಣಾದವಳ ಬದುಕಿನ ಅತ್ಯಂತ ಭಯಾನಕ, ಯಾತನಾಮಯ ಹಾಗೂ ಮಧುರವಾದ ಆಹ್ಲಾದಮಯವಾದ ಅನುಭವವೆಂದರೆ ತಾಯ್ತನದ್ದು. ಎಂತಹ ಸ್ವಭಾವದ ಹೆಣ್ಣಾದರೂ ತಾಯ್ತನದ

ಹಂಬಲವಿರದೇ ಇರಲು ಸಾಧ್ಯವಿಲ್ಲ. ಹೆರಿಗೆಯ ಸಂದರ್ಭದಲ್ಲಾಗುವ ಸಾವು-ನೋವುಗಳನ್ನು ಕಣ್ಣಾರೆ ಕಂಡಿದ್ದರೂ ಅವಳು ಅದನ್ನು ತಿರಸ್ಕರಿಸಲಾರದಂಥ ಪ್ರಕೃತಿ ಸಹಜ ಒಲವಿಗೆ ಒಳಗಾಗುತ್ತಾಳೆ'' ೩೮ ಇಷ್ಟೆಲ್ಲ ನರಕ ಸದೃಶ್ಯ ಬದುಕನ್ನು ಅನುಭವಿಸಿಯೂ ಮಾಧವಿ ತಾನು ಹೆತ್ತ ಮಗುವನ್ನು ಪಡೆಯಲು ಸಾಧ್ಯವಿಲ್ಲದಂತಾಗುತ್ತದೆ.

ಕಾದಂಬರಿಯಲ್ಲಿ ಬರುವ ಸ್ತ್ರೀ ಪಾತ್ರಗಳೆಲ್ಲವೂ ಪುರುಷ ನಿರ್ಮಿತ ಸಂಕೋಲೆಯಲ್ಲಿ ಬಂಧಿಯಾಗಿವೆ. ಎಲ್ಲಿಯೂ ಯಾವಪಾತ್ರಗಳೂ ಬಾಯಿ ತೆರೆದು ಮಾತನಾಡುವುದಿಲ್ಲ. ಪುರುಷರ ಏಕಸ್ವಾಮ್ಯವೇ ಕಾದಂಬರಿಯ ತುಂಬೆಲ್ಲ ವಿಜೃಂಭಿಸಿದೆ. ಕಾಲಾಂತರದಿಂದಲೂ ಸ್ತ್ರೀಯ ಮೇಲೆ ನಡೆದ ಶೋಷಣೆಯನ್ನು ಲೇಖಕಿ ಇಲ್ಲಿ ಸ್ಪಷ್ಟವಾಗಿ ಚಿತ್ರಿಸಿ, ಪುರಾಣ ಕವಚದಿಂದ ಹೊರಗೆ ನಿಲ್ಲಿಸುತ್ತಾರೆ.

ಮಾಧವಿ ವಿಶ್ವಾಮಿತ್ರನನ್ನು ಕುರಿತು, ಕಾಮ ಕ್ರೋಧ ಜಯಿಸಬೇಕು ಅಂತೀರ, ನಿಮಗ್ಯಾಕೆ ನಾನು ಬೇಕಾಯ್ತು? ಎಂದು ಕೇಳುವ ಪ್ರಶ್ನೆಯೊಂದು ತುಂಬಾ ಮೂಲಭೂತವಾಗಿದೆ. ''ನಿನ್ನಿಂದ ಇನ್ನಷ್ಟು ತೇಜಸ್ವಿಗಳು ಹುಟ್ಟಲಿ ಅನ್ನೋದು ತಪ್ಪಲ್ಲ.ಮರ ಚಿಗುರಿದರೆ ಅದರ ಜೀವ-ರಸ ಹೇಗೆ ಕಮ್ಮಿ ಆಗುವುದಿಲ್ಲವೋ ಹಾಗೆ. ನನ್ನ ತಪಸ್ಸಿಗೂ ಇದರಿಂದ ಬಾಧಕವಿಲ್ಲ. ಅಹಂಕಾರ ಬೆಳೆಯೋದಕ್ಕೆ ಭೋಗಬೇಕು. ಆ ಅಹಂಕಾರದಿಂದಲೇ ಮಹತ್ಕಾರ್ಯಗಳು ಆಗುತ್ತೆ'' ೩೯ ಎಂಬ ಈ ಮಾತಿನಲ್ಲಿ ಮುನಿಗಳು ತಮ್ಮ ಅನುಕೂಲಕ್ಕೋಸ್ಕರ, ಸ್ತ್ರೀ ಸಮಾಗಮಕ್ಕಾಗಿ ಯಾವ ರೀತಿಯಲ್ಲಾದರೂ ವ್ಯಾಖ್ಯಾನಿಸಬಹುದು ಎನ್ನುವುದು ತಿಳಿದುಬರುತ್ತದೆ.

ಮಾಧವಿ ನಾಲ್ಕು ಜನ ಪುರುಷರಲ್ಲಿ ಕಳೆದ ತನ್ನ ಬದುಕಿನ ನೋವಿನ ಕ್ಷಣಗಳನ್ನು ಸ್ಮರಿಸಿಕೊಂಡು ವಿಶ್ವಾಮಿತ್ರನಿಗೆ, ''ನೀವು ಗಾಲವರು ಸೇರ್ಕೊಂಡು ನನ್ನ ಬದುಕನ್ನ ಮೂರಾಬಟ್ಟೆ ಮಾಡಬಿಟ್ರಿ'' ೪೦ ಎಂದಾಗ ಆತ ''ಸಾಕು ಬಾಯ್ಮುಚ್ಚು ಹೆಂಗಸು ಹೆಚ್ಚುಮಾತಾಡಬಾರ್ದು'' ೪೧ ಎಂದು ವಿಶ್ವಾಮಿತ್ರ ಕೂಗಾಡುವುದು ಪುರುಷ ಪ್ರಭುತ್ವದಅಟ್ಟಹಾಸವಾಗಿದೆ.ಗಂಡಸು ನೀಡುವ ಯಾತನೆಯನ್ನು, ಚಿತ್ರಹಿಂಸೆಯನ್ನು ಹೆಣ್ಣಾದವಳು ಮೌನವಾಗಿ ನುಂಗಿಕೊಂಡು ಸಹಿಸಬೇಕು. ಪುರುಷನಿಗೆದುರಾಗಿ ಮಾತಾಡಬಾರದೆಂಬುದು ಇದೇ ಇತಿಹಾಸದುದ್ದಕ್ಕೂ ಪುರುಷ ಪ್ರಧಾನ ವ್ಯವಸ್ಥೆ ಗಟ್ಟಿಗೊಳಿಸಿಕೊಂಡು ಬಂದುದನ್ನು ಮಾಧವಿಯ ಮೂಲಕ ಸಾಂಕೇತಿಕವಾಗಿ ಚಿತ್ರಿಸಲಾಗಿದೆ.

ಯಯಾತಿ ರಾಜನ ಅರಮನೆಗೆ ಗಾಲವ ಮಾಧವಿಯನ್ನು ಪುನಃ ಕರೆತಂದಾಗ, ಯಯಾತಿ ಸ್ವಯಂವರ ಏರ್ಪಡಿಸುತ್ತಾನೆ. ಏದು ವರ್ಷಗಳವರೆಗೂ ಪುರುಷ ದಬ್ಬಾಳಿಕೆಯಲ್ಲಿ ತನ್ನ ತನವನ್ನೆಲ್ಲ ಕಳೆದುಕೊಂಡು ಬಂದು ಬಸವಳಿದ ಮಾಧವಿ ಸ್ವಯಂವರವನ್ನು ತಿರಸ್ಕರಿಸಿ, ಇಡೀ ಗಂಡಸು ಕುಲವನ್ನೇ ಧಿಕ್ಕರಿಸುತ್ತಾಳೆ. ಶತಶತಮಾನಗಳ ಸ್ತ್ರೀದಾಸ್ಯದ, ಸ್ತ್ರೀ ಶೋಷಣೆಯ ವಿರುದ್ಧ ಪ್ರತಿಭಟನೆಯು ಇಲ್ಲಿ ತುಂಬಾ ಗಮನಾರ್ಹವಾಗಿದೆ ಮತ್ತು ಅರ್ಥವತ್ತಾಗಿದೆ. ''ಸ್ತ್ರೀ ದಾಸ್ಯದ ವಿರುದ್ಧ ಮೊದಲು ಬಂಡೆದ್ದವಳು ಮಾಧವಿ, ಆದರೆ ಇದು ಕಣ್ಣಿಗೆ ಕುಕ್ಕುವ ಝಳಪಿಸುವ ಬಂಡಾಯವಾಗಿರದೆ, ತಣ್ಣನೆಯ ಬಂಡಾಯವಾಗಿದೆ. ಇಲ್ಲಿಯ ನಾಯಕಿ ಎಲ್ಲ ಶೋಷಣೆಯನ್ನು ಅನುಭವಿಸಿದ ನಂತರ ಬಂಡಾಯವೇಳುತ್ತಾಳೆ. ತಾನು ಶೋಷಣೆಯಾಗುತ್ತಿರುವ ಸಂದರ್ಭದಲ್ಲೆಲ್ಲ ಆಕೆಗೆ ಆ ವಿಚಾರ ಬಂದರೂ ಅಂದಿನ ರಾಜಕಾಜ ವ್ಯವಸ್ಥೆಯಲ್ಲಿ ಅವಳು ಅಸಹಾಯಕಳಾಗುತ್ತಾಳೆ. ಪುರುಷ ಪ್ರಧಾನ ಸಾಮ್ರಾಜ್ಯದಲ್ಲಿ ಕರಗಿಹೋಗುತ್ತಾಳೆ. ಆದರೆ ಆಕೆಯು ವಿಷ್ಠ ಮುಂದೆ ಬಲಿತು ಕಮ್ಮರವಾಗಿ ಅಂತಹ ವ್ಯವಸ್ಥೆಯನ್ನೇ ತಿರಸ್ಕರಿಸುವ ಹಂತದವರೆಗೆ ಬೆಳೆದು ನಿಲ್ಲುತ್ತದೆ ೪೨. ಕಾದಂಬರಿಯ ಪ್ರಾರಂಭದಿಂದ ಯಾವ ಪ್ರತಿಭಟನೆ ಇಲ್ಲದೇ ವ್ಯವಸ್ಥೆಯೊಂದಿಗೆ ರಾಜಿಮಾಡಿಕೊಂಡುದು ಅವಳು ಅಬಲೆಯಾಗಿರುವುದು ಕಾರಣವಾದರೆ, ಕೊನೆಗೆ ವ್ಯವಸ್ಥೆಯ ವಿರುದ್ಧ ತಿರುಗಿ ಬೀಳುವುದು ಹಿಂದೆ ಅನುಭವಿಸಿದ ಪುರುಷ ದೌರ್ಜನ್ಯಕ್ಕೆ ಕಾರಣವಾಗುತ್ತದೆ. ಕಾದಂಬರಿಯ ಪ್ರತಿಭಟನೆಗಳಲ್ಲಿ ಮಾಧವಿ ಪಟ್ಟಪಾಡು ಮರೆಯಲಾರದಂತಹುದು. ಪ್ರತಿರಾಜರೂ ಅವಳನ್ನು ಲೈಂಗಿಕ ದೃಷ್ಟಿಯಿಂದ ನೋಡುತ್ತಾರೆಯೇ ವಿನಃ ಯಾರೊಬ್ಬರೂ ಅವಳಿಗೂ ಒಂದು ಹೃದಯವಿದೆ ಎಂಬುದನ್ನು ಪರಿಗಣಿಸುವುದಿಲ್ಲ. ಅವರ ಕಣ್ಣುಗಳಿಗೆ ಮಾಧವಿ ಕಾಮದ ಮುದ್ದೆಯಾಗಿ ಗೋಚರಿಸುತ್ತಾಳೆ. ಲೇಖಕಿ ಚಿತ್ರಿಸಿದ ಮಾಧವಿ ಇಡೀ ಸ್ತ್ರೀಕುಲದ ಪ್ರತಿನಿಧಿಯಾಗಿ ನಿಲ್ಲುತ್ತಾಳೆ.

ಪ್ರಾರಂಭದಲ್ಲಿ ಯಯಾತಿ ಮಹಾರಾಜ ಗಂಡು ಮಕ್ಕಳಿಗಿಂತ ಹೆಣ್ಣಾದ ಮಾಧವಿಯನ್ನು ತಿರಸ್ಕರಿಸುವುದರಿಂದಲೇ ಕಾದಂಬರಿ ಮುನ್ನಡೆಯುತ್ತದೆ. ಹರ್ಯಶ್ವನಾಗಲಿ, ದಿವೋದಾಸನಾಗಲಿ, ಉಶೀನರನಾಗಲಿ ಎಲ್ಲರೂ ಗಂಡು ಮಕ್ಕಳನ್ನೇ ಬಯಸುತ್ತಾರೆಯೇ ಹೊರತು, ಹೆಣ್ಣು ಮಕ್ಕಳ ಬಗ್ಗೆ ತಪ್ಪಿಯೂ ಅವರಿಂದ ಒಂದು ಮಾತು ಹೊರಡುವುದಿಲ್ಲ. ಒಟ್ಟಿನಲ್ಲಿ ಕಾದಂಬರಿಗಾರ್ತಿ ಅಂದಿನ ಸಮಾಜದಲ್ಲಿ ಸ್ತ್ರೀ ಬಗೆಗಿರುವ ಪುರುಷ ಮನೋಭಾವನೆಯನ್ನು ಹಾಗೂ ಸ್ತ್ರೀ

ಶೋಷಣೆಯ ಸ್ತರಗಳನ್ನು ಯಾವುದೇ ಬಗೆಯ ಆದರ್ಶಕ್ಕೆ ಕಟ್ಟುಬೀಳದೆ ಚಿತ್ರಿಸಿದ್ದಾರೆ.

ಐತಿಹಾಸಿಕ ಮತ್ತು ಪೌರಾಣಿಕ ಅಂಶಗಳನ್ನು ಬಳಸಿಕೊಂಡು ಹೆಣ್ಣುಮಕ್ಕಳನ್ನು ಅಸಹಾಯ ಸ್ಥಿತಿಗೆ ನೂಕಿ ಶೋಷಿಸುವ ಸಮಾಜದ ರೀತಿಯನ್ನು ಪ್ರಕಟಪಡಿಸುತ್ತಾರೆ. ಆ ಕಾಲಕ್ಕೆ ಹೆಣ್ಣಿನ ಶೋಷಣೆಯ ವಸ್ತುವು ಹಳೆಯದಾದರೂ ಪೌರಾಣಿಕ ಕಥಾವಸ್ತುವೊಂದನ್ನು ಆರಿಸಿಕೊಂಡು ಇಂದಿನ ಹೆಣ್ಣಿನ ಸ್ಥಾನಮಾನವನ್ನು ಒಳಗೊಂಡಂತೆ ಇರುವ ಸಾರ್ವಕಾಲಿಕ ಸತ್ಯವನ್ನು ಶೋಧಿಸುವ ಪ್ರಯತ್ನ ಅಪೂರ್ವವಾದುದು ಈ ದಿಸೆಯಲ್ಲಿ ಅನುಪಮಾ ಅವರ 'ಮಾಧವಿ' ಸಮಕಾಲೀನ ಸ್ತ್ರೀ ಚಳವಳಿಗೆ ಮುಖ್ಯ ವಿಚಾರಗಳನ್ನು ಒದಗಿಸುತ್ತದೆ.

ಪುರಾಣ ಎಂಬ ಹಾಗೆಯೇ ಪುರಾ-ನವ ಎಂಬುದು ಹೌದು. ಪುರಾಣ ತನ್ನ ವಿಚಾರವನ್ನು ಸುಮ್ಮನೆ ಹೇಳುತ್ತಾ ಹೋಗುವುದರಿಂದಾಗಿ ಪುರಾಣದ ಕಥೆಗಳು ಮತ್ತೆ ಮತ್ತೆ ಪುನರ್ ವ್ಯಾಖ್ಯಾನಗೊಳ್ಳುತ್ತಿರುತ್ತವೆ, ಪುನರಚಿಸಲ್ಪಡುತ್ತಿರುತ್ತವೆ. ನಾವು ಪುರಾಣದಿಂದ ಬಂದ ಕಥೆಗಳನ್ನು ನಂಬಿಕೆಗಳನ್ನು ಸಂಪ್ರದಾಯದ ನೆಲೆಯಲ್ಲಿ ಆಚರಿಸುತ್ತೇವೆ, ಆದರೆ ಅದರ ನಿಜವಾದ ಅರ್ಥವನ್ನು ತಿಳಿದುಕೊಳ್ಳದೆ ಅನರ್ಥಕ್ಕೆ ಎಡೆಮಾಡಿಕೊಡುತ್ತವೆ. ಮಾಧವಿಯ ಕಥೆ ಪುರಾಣವಾದರೂ ಸಮಕಾಲೀನ ಪರಿಸ್ಥಿತಿ ಅದಕ್ಕಿಂತ ಭಿನ್ನವಾಗಿಲ್ಲ. ಇಂದಿಗೂ ಸ್ತ್ರೀ ಒಂಟಿಯಾಗಿ, ಸ್ವತಂತ್ರವಾಗಿ ಬದುಕಲಾಗುತ್ತಿಲ್ಲ. ಸ್ತ್ರೀಮನಸ್ಸು ಜಾಗೃತಗೊಳ್ಳುವುದಾದರೂ ಅದು ತತ್ಕ್ಷಣ ಸ್ಫುರಿಸುವುದಿಲ್ಲ. ಪರಂಪರಾಗತವಾಗಿ ರೂಪುಗೊಂಡಿರು 'ಪತಿವ್ರತೆ' ಅವಳ ಮನಸ್ಸನ್ನು ಆವರಿಸಿರುವುದರ ಪರಿಣಾಮವಿದು.

ಅಕ್ಕ

ಪಿ. ಲಂಕೇಶ್ ಅವರು ಸಮಕಾಲೀನ ಕನ್ನಡದ ಬಹುಮುಖ್ಯ ಲೇಖಕರಲ್ಲಿ ಒಬ್ಬರು. ದಲಿತ-ಬಂಡಾಯ ಹಾಗೂ ಸ್ತ್ರೀವಾದಿ ಚಳುವಳಿಗಳ ಸಂದರ್ಭದಲ್ಲಿ ಲಂಕೇಶರ ಸಾಹಿತ್ಯ ತುಂಬಾ ವಿಶಿಷ್ಟವಾಗಿದೆ. ಈ ಎಲ್ಲ ಚಳುವಳಿಗಳ ಅನೇಕ ಪ್ರಮುಖ ಆಶಯಗಳು ನಿಜಕ್ಕೂ ಯಾವುದೇ ಆಡಂಬರವಿಲ್ಲದೇ ನಿಜತ್ವದಲ್ಲಿ ಮೂಡಿ ಬಂದಿರುವುದು. ಲಂಕೇಶರ ಸಾಹಿತ್ಯದಲ್ಲಿ ಸ್ಪಷ್ಟಗೊಳ್ಳುತ್ತದೆ. ಈ ಹಿನ್ನೆಲೆಯಲ್ಲಿಯೇ ಲಂಕೇಶರ 'ಬಿರುಕು', 'ಮುಸ್ಸಂಜೆಯ ಕಥಾ ಪ್ರಸಂಗ' ಮತ್ತು 'ಅಕ್ಕ' ಕಾದಂಬರಿಗಳು ಮೈದಾಳಿವೆ. ಗದ್ಯಕ್ಕೆ ಹೊಸ ಕಸುವು ತಂದು ಕೊಡುವುದರ ಮೂಲಕ 'ಸಾಮಾಜಿಕ ಪ್ರಶ್ನೆ'ಯನ್ನು ಅತ್ಯಂತ ವಿಶಿಷ್ಟ ನೆಲೆಯಲ್ಲಿ ಚಿಂತಿಸುವ ಲಂಕೇಶರು ನವ್ಯೋತ್ತರ ಸಂದರ್ಭದಲ್ಲಿ 'ಅಕ್ಕ 'ಕಾದಂಬರಿಯನ್ನು ರಚಿಸಿದ್ದಾರೆ.

ಲಂಕೇಶರ ಸಂವೇದನೆ ಮೂಲಭೂತವಾಗಿ ಕೇವಲ ಬುದ್ಧಿಜೀವಿಯೊಬ್ಬನ ಸಂವೇದನೆಯಲ್ಲ, ಅದು ಕಲಾವಿದನ ಸಂವೇದನೆ. ಭಾವನಾತ್ಮಕವಾಗಿ ಗ್ರಹಿಸುವಷ್ಟು ಸೂಕ್ಷ್ಮವಾಗಿ, ಬೌದ್ಧಿಕವಾಗಿ ಅವರು ಅಷ್ಟಾಗಿ ಗ್ರಹಿಸುವುದಿಲ್ಲ. ಕಲಾವಿದನ ನಿಗೂಢತೆಯನ್ನು ಉಳಿಸಿಕೊಂಡು ಬರೆದಾಗಲೆಲ್ಲ, ಲಂಕೇಶ್-ಯಾವ ವಿಷಯದ ಬಗ್ಗೆಯೇ ಬರೆಯಲಿ ಕಲಾಕೃತಿಗಳನ್ನು ನಿರ್ಮಿಸುವ ಹಾಗೆ ಬರೆಯುತ್ತಾರೆ ಎಂಬುದು ವಿಮರ್ಶಾವಲಯದಲ್ಲಿ ಕೇಳಿಬರುತ್ತಿರುವ ಮಾತಾಗಿದೆ.

ಟಿ.ಪಿ. ಅಶೋಕ ಅವರು ತಮ್ಮ 'ಪುಸ್ತಕ ಪ್ರೀತಿ'ಯಲ್ಲಿ ಲಂಕೇಶ್ ಅವರ ಕುರಿತು ಹೀಗೆ ಹೇಳುತ್ತಾರೆ.'' ಲಂಕೇಶ್ ಅತ್ಯುತ್ತಮ ಬರವಣಿಗೆಯಲ್ಲಿ ತನ್ನ ಸಂಸ್ಕೃತಿಯ ಸಾರವನ್ನು ಹೀರಿಕೊಂಡ ವ್ಯಕ್ತಿಯ ಚೇತನವೊಂದನ್ನು ಕಾಣುತ್ತೇವೆ. ತನ್ನನೆಲದಲ್ಲಿ ಬೇರುಬಿಟ್ಟು, ತನ್ನ ಟೊಂಗೆಗಳನ್ನು ದಶದಿಕ್ಕುಗಳಿಗೆ ಚಾಚಿ ಗಾಳಿ ಬಿಸಿಲಿಗೆ ಮೈಯೊಡ್ಡಿಕೊಂಡು ಈ ಲೇಖಕ ಏಕಕಾಲಕ್ಕೆ ದೇಶಿಯೂ,ಅಂತರರಾಷ್ಟ್ರೀಯನೂ ಆಗಿಬಿಡುತ್ತಾನೆ. ತನ್ನ ಹಳ್ಳಿಯ ದೇವಾಲಯಗಳ ಬಗ್ಗೆ ಚಿಂತಿಸುವಂತೆ,ಅಯೋಧ್ಯೆಯ ಬಗ್ಗೆ, ಜೆರೂಸಲೇಮಿನ ಬಗ್ಗೆ ಚಿಂತಿಸುತ್ತಾನೆ. ಇವನಿಗೆ ಅಡಿಗ,ಬೇಂದ್ರೆ ,ಕುವೆಂಪುರಷ್ಟೇ,ಶೇಕ್ಸ್‌ಪಿಯರ್,ಕಾಮೂ,ಟಾಲ್‌ಸ್ಟಾಯರೂ ಪ್ರಸ್ತುತ . ಈ ದೇಶದ ರಾಜಕಾರಣದಷ್ಟೇ

ಅಮೇರಿಕಾ, ರಷ್ಯಾದ ರಾಜಕಾರಣವೂ ಮುಖ್ಯ.ಜಯಮಾಲಾಳನ್ನು ಕಟ್ಟಿಕೊಳ್ಳುವಂತೆ, ಗ್ರೇಟಾ ಗಾರ್ಬೋಳನ್ನು ಕಟ್ಟಿಕೊಳ್ಳುತ್ತಾನೆ. ಇದರರ್ಥ ಲಂಕೇಶ್ ಸರಳ ತುಲನೆಗಳನ್ನು ಮಾಡುತ್ತಾರೆಂದಲ್ಲ. ಇದು ಬದುಕನ್ನು, ಜಗತ್ತನ್ನು, ಮನುಷ್ಯಕುಲವನ್ನು ಅನುಸಂಧಾನಕ್ಕೆ ಅನ್ವಯಿಸಬಲ್ಲ ಪ್ರೀತಿ, ಮಹತ್ವಾಕಾಂಕ್ಷೆ ಇದೆ.''ಎನ್ನುವ ಹೇಳಿಕೆಯು ಲಂಕೇಶರ ಬಹುಮುಖ ಪ್ರತಿಭೆ ಮತ್ತು ಅವರ ವ್ಯಕ್ತಿತ್ವದ ಮೇಲೆ ಬೆಳಕನ್ನು ಚೆಲ್ಲುತ್ತದೆ.

ಪ್ರಸ್ತುತ 'ಅಕ್ಕ' ಕಾದಂಬರಿಯು ರಚನೆಗೆ ಪ್ರೇರಕವಾದ ಘಟನೆಯನ್ನು ಲಂಕೇಶರು ನೆನಪಿಸಿಕೊಳ್ಳುತ್ತ ''೧೯೮೨ರ ನವೆಂಬರ್‌ನಲ್ಲಿ ಕರ್ನಾಟಕದ ಶಾಸನಸಭೆಗೆ ಚುನಾವಣೆಯು ತಯಾರಿನಡೆಸಿತ್ತು. ಆಗ ನಾನು ವರದಿಗಾರನಾಗಿ ಲಾಲ್ ಭಾಗ ರಸ್ತೆಯ ಕೊಳೆಗೇರಿಯೊಂದಕ್ಕೆ ಹೋಗಿದ್ದಾಗ, ಅಲ್ಲೊಬ್ಬ ಪುಟ್ಟ ಹುಡುಗ ಗಾಢ ದುಃಖದಲ್ಲಿ ಕೂತಿದ್ದ. ಕುತೂಹಲಕ್ಕೆ ವಿಚಾರಿಸಿದಾಗ,''ಅಕ್ಕ ನಾಕ ದಿನದಿಂದ ಮನೆಗೆ ಬಂದಿಲ್ಲ ಅವಳವನ!''ಅಂದು ಮುಖ ಮುಚ್ಚಿಕೊಂಡು ಅಳತೊಡಗಿದ''ಎಂದು ಅರಿಕೆಯಲ್ಲಿ ಹೇಳಿಕೊಳ್ಳುತ್ತಾರೆ.

'ಅಕ್ಕ'ಕೊಳಗೇರಿಯ ಸುತ್ತಲೇ ಹೆಣೆದುಕೊಂಡಿದೆ. ಅಲ್ಲಿಯ ಬದುಕನ್ನು ಲೇಖಕರು 'ಕ್ಯಾತನ' ಮಾತುಗಳಲ್ಲೇ ಹೇಳಿಸುತ್ತಾರೆ. ಕ್ಯಾತನ ಬದುಕಿನಿಂದಲೇ ಕಥೆ ಪ್ರಾರಂಭವಾಗುತ್ತದೆ. ತಂದೆ-ತಾಯಿಗಳನ್ನು ಕಳೆದುಕೊಂಡ ಕ್ಯಾತ ಅಕ್ಕನ ಪ್ರೀತಿಯ ನೆರಳಲ್ಲೇ ಬೆಳೆಯುತ್ತಾನೆ. ಅಕ್ಕ ದೇವೀರಿ ಬೆಳೆದಂತೆಲ್ಲ ಮೊದಲು ಅವಳಲ್ಲಿದ್ದ ಗುಣಗಳಲ್ಲಿ ಬದಲಾವಣೆಯಾದುದನ್ನು ಗಮನಿಸಿ ಸಂಶಯಪಟ್ಟು, ಅವಳ ಚಟುವಟಿಕೆಗಳ ಬಗೆಗೆ ವಿವರಿಸುತ್ತಾನೆ. ಅತಿರಿಕ್ತವಾಗಿ ಹೋಗಿ ಕನ್ನಡ ಚಳುವಳಿಯಲ್ಲಿ ಸಿಲುಕಿ, ಪ್ರಯಾಸದಿಂದ ಹೊರಬರುವ ಕ್ಯಾತ ಕಾಡಿಗಳು, ರಕ್ತಪಾತ,ಲಂಚ,ಮೋಸ ,ಕುದುರೆರೇಸು,ರಾಜಕಾರಣ, ಸಿನಿಮಾ ಎಲ್ಲದರ ಬಗ್ಗೆಯೂ ತನಗಾದ ಅನುಭವಗಳನ್ನು ಕೊಳೆಗೇರಿ ಬದುಕಿನ ಚಿತ್ರಣವನ್ನು ತನ್ನ ಭಾಷೆಯಲ್ಲಿ ವಿವರಿಸುತ್ತಾನೆ. ಅವನ ಹಟ್ಟಿ ಮತ್ತು ಅವನ ಅಕ್ಕನ ಸುತ್ತ ಸುತ್ತುವರೆದಿರುವ ರಾಜಕೀಯವನ್ನು ಹೇಳುತ್ತಲೇ, ಒಂದು ದಿನ ಹಸಿದು ಕುಳಿತ ಕ್ಯಾತನ ಹಟ್ಟಿಗೆ ಬರದೇ ಅಕ್ಕ ದೇವೀರಿ ಮತ್ತೆಲ್ಲೋ ಮನೆಕೊಂಡು ಇರುವುದು ಅವನಿಗೆ ದೇವೀರಿ ಪ್ರಶ್ನೆಯಾಗುತ್ತಾಳೆ.

ಬದುಕನ್ನು ಲೇಖಕರು ಬಹುಸೂಕ್ಷ್ಮವಾಗಿ ನಿರೂಪಿಸಿದ್ದಾರೆ. ಚಿಕ್ಕಪ್ರಾಯದಲ್ಲಿ ಓದು,ಆಟವಾಡಿಕೊಂಡಿರಬೇಕಾದ ದೇವಿರಿ, ಆರ್ಥಿಕ ದುಃಸ್ಥಿತಿಯಿಂದ ಬಾಲ ಕಾರ್ಮಿಕಳಾಗಿ ಬದುಕನ್ನು ನಿರ್ವಹಿಸುವ ಹೊಣೆ ಹೊರಬೇಕಾಗುತ್ತದೆ. ದಿನಗಳೆದಂತೆ ದೈಹಿಕವಾಗಿ ಬದಲಾವಣೆ ಹೊಂದಿದ ದೇವಿರಿ ನೋಡುಗರ ಕಣ್ಣಿಗೆ ಹಬ್ಬವಾಗುತ್ತಾಳೆ. ಒಂದು ಹೆಣ್ಣು ಈ ಸಮಾಜದಲ್ಲಿ ಒಂಟಿಯಾಗಿ ಬಾಳುವುದು ಎಷ್ಟೊಂದು ಕಷ್ಟ ಎಂಬುದು ಇಲ್ಲಿ ವ್ಯಕ್ತವಾಗುತ್ತದೆ.

''ಈಚೆಗೆ ಅಕ್ಕ ದೇವಿರಿ ಮುಂಚಿನ ದೇವಿರಿ ಹಾಗಿರಲಿಲ್ಲ. ಅವ್ವ ಸತ್ತು ವರ್ಸಕ್ಕಿಂಗೆ ಎರಡು ವರ್ಸವಾಗುತ್ತೆ. ಆಗ ಅದ್ದನ ಅಂಗಳದಲ್ಲಿ ಕಪ್ಪಗೆ ತಲೆ ಕೆದರಿಕೊಂಡು ಒಳ್ಳೆಯವಳ ಹಾಗೆ ಕಾಣುತ್ತಿದ್ದಳು. ಆಗ ದೇವಿರಿಗೆ ಇಟ್ಟಿಗೆ ಹೊತ್ತಿದ್ದಕ್ಕೆ ಬರುತ್ತಿದ್ದುದು ಬರೀ ಮೂರು ರೂಪಾಯಿ. ಆ ಮೇಲೆ ಮಜೂರಿ ಎಷ್ಟಾಯಿತು ಎಂಬುದು ಕ್ಯಾತನಿಗೆ ಆಕೆ ಹೇಳಲಿಲ್ಲವಾದರೂ ಆಕೆ ಮುಂಚಿನಷ್ಟು ಬಡವಿಯಲ್ಲ ಎನ್ನುವುದು ಕೆಲವು ಸಲ ಗೊತ್ತಾಗಿತ್ತು. ಒಳ್ಳೆಯ ಎರಡು ಸೀರೆಗಳಿದ್ದವು''೪೩.

ಈ ಮೇಲೆ ಹೇಳುವ ಕ್ಯಾತನ ಮಾತುಗಳು ಆತನಲ್ಲಿ ಶಂಕೆಯನ್ನು ಹುಟ್ಟಿಸುತ್ತವೆ. ಕೂಲಿಯಿಂದ ಬರುತ್ತಿದ್ದ ಮೂರು ರೂಪಾಯಿಗಳು ಯಾವುದಕ್ಕೂ ಸಾಲವು. ಆದರೂ ಆಕೆ ಬಡವಿಯಲ್ಲ, ಅವಳಲ್ಲಿ ಒಳ್ಳೆಯ ಸೀರೆಗಳಿರುವುದನ್ನು ನೋಡಿದಾಗ ಬೇರೆ ಯಾವುದೇ ಲಾಭದಾಯಕ ಕೆಲಸ ಮಾಡುತ್ತಿರಬಹುದು ಎನಿಸಿದರೂ ಅವಳು ಮುಂಚಿನ ಹಾಗೆ ಇರಲಿಲ್ಲ ಎನ್ನುವಲ್ಲಿ ಕ್ಯಾತ ಅವಳ ಚಾರಿತ್ರ್ಯದ ಬಗೆಗೆ ಶಂಕೆಯ ವ್ಯಕ್ತಪಡಿಸುವುದನ್ನು ನಾವು ಲಕ್ಷಿಸಬಹುದಾಗಿದೆ.

ದೇವಿರಿ ಪ್ರೌಢಿಗಳ ಟೀಕೆಗೆ ಸಿಕ್ಕು ಎದುರಿಸುವ ತೊಂದರೆ ಅಪಾರ. ಅವರಿಂದ, ಅವರ ಕೃತ್ಯಗಳಿಂದ ಬೇಸತ್ತ ದೇವಿರಿ ಸಿಡಿಮಿಡಿಗೊಳ್ಳುತ್ತ, ''ಅಣ್ಣಾ ಅಂತೆ ಅಣ್ಣಾ, ನಿನ್ನಮ್ಮನ್ನ ದುಡಿದು ಹಣವಾಗಾಕ ನಾನು. ಆ ನರಸಿಂಹ ಮೇಷ್ಟ್ರು ದಗಾ ಮಾಡಿದ್ರೆ ಕೇಳೋರು ದಿಕ್ಕೆ ಇಲ್ಲ. ಇವನ ಮನೆಗೆ ಬೆಂಕಿ ಬೀಳು ಹಲ್ಲು ಕಿಸಕೊಂಡು ಬಂದುಬಿಡ್ತಾನೆ. ಈ ಕಾಲದಾಗ ಕಟ್ಟಿಕೊಂಡ ಗಂಡನೆ ಇರಾಕಿಲ್ಲಂತೆ, ಇನ್ನು ಈ ಪಡಿಪಾಯಿಗಳು ನನ್ನ ಕೇಳ್ತಾವ? ಅವ್ವ,

ಹೆಣಮಗಳೊಬ್ಬಳ ನ್ಯಾಯಂದೇನೆ ಬರುತಾಳೆ ಆಗುತಿದ್ದಿದ್ದು-ದನು ಬಂದು ಕಾಲ''ಳ ಎಂದು ಪುರುಷವರ್ಗದ ಮೇಲೆ ಹರಿಹಾಯುತ್ತಾಳೆ. ಇಲ್ಲಿ ದೇವಿರಿಯನ್ನು ಅಥವಾ ನರಸಿಂಗ ಮೇಸ್ತ್ರಿಗಳು ನಡೆಸಿಕೊಳ್ಳುವ ಕ್ರಮವನ್ನು ಅವಳು ಆಕ್ಷೇಪಿಸುವುದು ಕಂಡು ಬರುತ್ತದೆ. ಹೆಣ್ಣು ಶ್ರಮವಹಿಸಿ ದುಡಿದರೂ ಅವಳಿಗೆ ಕೂಲಿ ಕೊಡದೆ ಕಾಡಿಸಿ -ಪೀಡಿಸುವ ಅಂಶ ಕಂಡುಬರುತ್ತದೆ.

ಇಬ್ಬರು ಮುಂಗಲಿಕನ್ನ ಸಹ ಇದ್ದಾಗ್ಲ ದೇವಿರಿಯು ಗುಡಿಸಲಿನಲ್ಲಿ ಬಂದು ಕಾಲುಚಾಚಿ ಕುಳಿತುಕೊಳ್ಳುವ ಅಥವಾ ನಾಗ್ರ ಕ್ಯಾತನನ್ನು ಸಿಗರೇಟು, ತರಲಿಕ್ಕೆ ಇಲ್ಲವೇ ಬೇರೆ ತರಲಿಕ್ಕೆ ಕಳುಹಿಸಿ ದೇವಿರಿಯ ಜೊತೆ ಚಕ್ಕಂದವಾಡುತ್ತಾರೆ. ಇಂಥ ಸ್ಥಿತಿಯನ್ನು ದೇವಿರಿ ಪ್ರತಿಭಟಿಸಬಹುದು. ಆದರೆ ಅವಳು ಪರಿಸ್ಥಿತಿಯ ಒತ್ತಡಕ್ಕೆ ಸಿಕ್ಕು ಅಸಹಾಯಕಳಾಗುತ್ತಾಳೆ. ದೇವಿರಿಗೆ ಕೊಳಗೇರಿಯಲ್ಲಿ ವಾಸಿಸಲು ಜಾಗ ತೋರಿಸಿದವರೂ ಅಥವಾ ನಾಗ್ರಗಳೇ ಆಗಿದ್ದರಿಂದ, ಅವಳಿಂದ ಅವರನ್ನು ಎದುರಿಸಲಾಗುವುದಿಲ್ಲ. ಈ ಒಂದು ಘಟನೆಯಿಂದ ಅಥವಾ ನಾಗ್ರಗಳು ದೇವಿರಿಯ ಮೇಲೆ ಪ್ರಭುತ್ವ ಸ್ಥಾಪಿಸುತ್ತಾರೆ: ಅವಳನ್ನು ತಮ್ಮ ತೊತ್ತಾಗಿಸಿಕೊಂಡು ಹಲವು ರೀತಿಯ ಶೋಷಣೆಗೆ ಗುರಿಪಡಿಸುತ್ತಿರುವುದನ್ನು ಇಲ್ಲಿ ಗುರುತಿಸಬಹುದಾಗಿದೆ.

ಕ್ಯಾತ ಹೊಟ್ಟೆ ಹಸಿದು ಬಂದಾಗ, ಅಕ್ಕ ದೇವಿರಿಯು ಅವನಿಗೆ ತಿನ್ನಲು ಬ್ರೆಡ್ಡು ಕೊಡುತ್ತಾಳೆ. ಅವನಿಗೆ ಬೇಜಾರಾಗಿ ಸ್ವಗತದಲ್ಲಿ ''ಬ್ರೆಡ್ಡು ಕಂಡ್ರೆ ನನಗಾಗ್ತಿರಲಿಲ್ಲ. ಬ್ರೆಡ್ಡು, ಜಾಮು,ವಡೆ ವಗೈರೆ ತಿಂಡಿಗಳಲ್ಲ. ಸಂಗ ಅಥವಾ ನಾಗ್ರಗಳ ನೆನಪಾಗ್ತದೆ. ದೇವಿರಿ ಎಂದೂ ಬ್ರೆಡ್ಡು ಕೊಳ್ಳೋಕೆ ಹೋಗೋಳಲ್ಲ. ಈ ಬ್ರೆಡ್ಡನ್ನು ಯಾರೋ ಕೊಟ್ಟಿರಬೇಕು ಅಂತ ನೆನಸಿಕೊಂಡ ಕೂಡ್ಲೆ ದೇವಿರಿ ಇಬ್ಬರಿಗೆ ಹೇರಾಕ ಹೋಗಿಲ್ಲ ಮತ್ತೆಲ್ಲಿ ಹೋಗ್ತಾಳೆ ಅನ್ನಿಸ್ತದೆ''ಎಂದು ದೇವಿರಿಯ ಬಗೆಗೆ ಕ್ಯಾತ ಚಿಂತನೆಗೆ ತೊಡಗುತ್ತಾನೆ. ಇದರಲ್ಲಿ ನೈತಿಕ ಪ್ರಶ್ನೆ ಜಾಗೃತವಾಗುತ್ತದೆ. ಬ್ರೆಡ್ಡು, ಜಾಮು ನೋಡಿದ ಕೂಡಲೇ ಕ್ಯಾತ ಅಥವಾ ನಾಗ್ರಗಳ ಜೊತೆಗೆ ದೇವಿರಿ ಇಟ್ಟುಕೊಂಡ ಸಂಬಂಧದ ಬಗೆಗೆ ಅನುಮಾನಿಸುತ್ತಾನೆ.

ಈ ಕುರಿತು ಬಾಯಿಬಿಡದಿದ್ದರೂ 'ನೆಲದ ಮರೆಯ ನಿದಾನ'ದಂತೆ ಅವನ ಹೃದಯದಲ್ಲಿ ಈ ಅಂಶ ಹುದುಗಿಯೇ ಇದೆ. ಇಲ್ಲಿ ದೇವಿರಿ ಅಥವಾ ನಾಗ್ರಗಳ ಮಾನಸಿಕ ಸಂಬಂಧಗಳಿಗಿಂತ ಆರ್ಥಿಕ ಸಂಬಂಧಗಳು ಹೆಚ್ಚು

ಪ್ರಸ್ತುತವೆನ್ನಿಸುತ್ತದೆ.

ಕ್ಯಾತ ಪ್ರತಿಭಟನೆಯ ಮನೋಭಾವ ಹೊಂದಿದವನಾಗಿದ್ದರೂ ಆರ್ಥಿಕ ಸ್ಥಿತಿಯು ಎಳೆಯೊಂದು ಅವನನ್ನು ಪುನಃ ಬಂಧಿಸಿ ಬಿಡುತ್ತದೆ. ಹೀಗಾಗಿ ದೇವೀರಿ ಖದಾ-ನಾಗ್ರಗಳ ಸುತ್ತ ತಿರುಗುವ ಚಕ್ರವಾಗುತ್ತಾಳೆ.

ಸಿನೆಮಾದಲ್ಲಿ ಪಾರ್ಟ್ ಮಾಡುವ ಮಹದಾಸೆ ಇಟ್ಟುಕೊಂಡ ಪದ್ಮ ನಿರ್ದೇಶಕರ ಮಾತಿಗೆ ಬಲಿಬೀಳುತ್ತಾಳೆ. ಅವಳಿಗೆ ಪಾರ್ಟ್ ಕೊಡಿಸುವುದಾಗಿ ಹೇಳಿ ತುಂಬಾ ಸತಾಯಿಸುತ್ತಾರೆ. ಶಂಕರನಾರಾಯಣ ಪದ್ಮಳನ್ನು ಕುರಿತು, ''ನಂಬನ್ನು, ನಿಮ್ಮದು ರೇಖಾ, ಪದ್ಮಿನಿ ಕೊಲ್ಹಾಪುರೆ ಮುಖದ ತರ ಇದೆ ಗೊತ್ತಾ? ಈ ದಡ್ಡ ಡೈರೆಕ್ಟರ್ ರಾಮರಾವ್ ಒಬ್ಬ ಡೈರೆಕ್ಟರಾ? ನಿನ್ನಂಥ ಹುಡುಗಿ ಹೀರೋಯಿನ್ ಆದ್ರೆ ಬಾಕ್ಸ್ ಆಫೀಸ್ ತುಂಬ ತುಳುಕ್ತಾವೆ ಅಂತ ಗೊತ್ತಾ? ಅವನೊಬ್ಬ ಫೂಲ್!, ಇದನ್ನು ಕೇಳಿದ ಪದ್ಮ ಕಿಲಕಿಲ ನಗ್ತಾಳೆ. ಅವಳ ಸೊಂಟ ಮತ್ತು ಅವನ ಕೈ ಕಂಬದ ಮರೆಗೆ ಹೋಗ್ತಾವೆ''೪೭ ಪುರುಷ ತನ್ನ ತೆವಲುಗಳನ್ನು ತೀರಿಸಿಕೊಳ್ಳುವುದಕ್ಕಾಗಿ ಹೆಣ್ಣನ್ನು ರಂಭೆ, ಊರ್ವಶಿ ಎಂದೆಲ್ಲ ವರ್ಣಿಸಿ ಅವಳನ್ನು ಬಳಸಿಕೊಳ್ಳುವುದು ಇಲ್ಲಿ ವ್ಯಕ್ತವಾಗುತ್ತದೆ. ಶಂಕರನಾರಾಯಣನ ಕಾರ್ಯವು ಸಹ ಇಲ್ಲಿ ಬೇರೆಯೆನಿಸುವುದಿಲ್ಲ. ಸಿನಿಮಾ ಲೋಕದಲ್ಲಿ ಸ್ತ್ರೀ ಮೇಲೆ ನಡೆದಿರುವ ವಂಚನೆಗೆ ಇದು ಸಾಕ್ಷಿಯಾಗುತ್ತದೆ.

ನಾಗ್ರಾಜ ನಾಯ್ಡು ತನ್ನ ಮಗಳು ಪದ್ಮಳನ್ನು ಸಿನಿಮಾ ಸ್ಟಾರ್ ಮಾಡಬೇಕೆಂಬ ಇಚ್ಛೆಯಿಂದ ಕಂಡ ಕಂಡ ಡೈರೆಕ್ಟರುಗಳಲ್ಲಿ ದೈನ್ಯತೆಯಿಂದ ಹಲ್ಲು ಗಿಂಜುತ್ತಾನೆ. ಒಮ್ಮೆ ಕ್ಯಾತ ಪದ್ಮ ಜೊತೆ ಶೂಟಿಂಗಿಗೆ ಹೋದಾಗ ಆ ಡೈರೆಕ್ಟರ್ ಹಲ್ಕಗಳು ಮಾಡುವ ಕೃತ್ಯಗಳನ್ನೆಲ್ಲ ನೋಡಿ ಆಶ್ಚರ್ಯಪಟ್ಟುಕೊಳ್ಳುತ್ತಾನೆ. ''ಎತ್ತರದ ಕುರ್ಚೀಲಿ ಕುಂತಿದ್ದ ಈ ಕಿರಾತ ನನ್ಮಗ ಡೈರೆಕ್ಟರು ಕುರ್ಚಿಯಿಂದ ಇಳಿದು ಪದ್ಮಳ ಹತ್ತಿರ ಬಂದು ಆಕೆಯ ಹೆಗಲ ಮೇಲೆ ಕೈಯಿಟ್ಟು ಅವಳ ಮುಖನೇ ನೋಡ್ತಾ ಮಾತಾಡಿದ''೪೮ ಕಣ್ಣ ಪದ್ಮಳಲ್ಲಿ ಏನೇನೋ ಆಸೆ ಮೂಡಿಸುತ್ತಾನೆ. ಡೈರೆಕ್ಟರುಗಳು ತಮ್ಮ ಸ್ವಾರ್ಥಕ್ಕಾಗಿ ಹೆಣ್ಣನ್ನು ಬಳಸಿ ಮೋಸ ಮಾಡುವ ಕೃತ್ಯವನ್ನು ಲೇಖಕರು ಕ್ಯಾತನ ಮುಖಾಂತರ ನೈಜವಾಗಿ ಬಿಂಬಿಸುತ್ತಾರೆ.

ಪದ್ಮಿಗೆ ಹಾಡುವಾಗಲು ಅವಕಾಶ ಸಿಗುವುದೆಂದು ತಿಳಿದು ಅಲಂಕಾರ ಮಾಡಿಕೊಳ್ಳುತ್ತಾಳೆ. ಆದರೆ ''ಸಂಜೆಯಿಂದ ಹಿಡಿದು ನಡುರಾತ್ರಿ ಮೀರೋತಂಕ ಪದ್ಮಿ ವೇದಿಕೆ ಹಂಗೆ ದಿಟ್ಟಿಸಿ ನೋಡ್ಕೊಂಡು ಕಾದು ಮನಸ್ಸಿನಲ್ಲೇ ಆಸೆಗಳನೆಲ್ಲ ಅದುಮಿಟ್ಟುಕೊಂಡು ಬಂದ್ರೆ ಈ ಹುಡುಗಾಡು ನಕ್ಷತ್ರಗಳು ಹಿಂಗೆ ಆಕಾಶ ನೋಡ್ಕೊಂಡ ಕಥೆಯಾಗಿ ಕಣೋದು ಪಾಪ''೪೮ ಎನ್ನುವ ಕ್ಯಾತನ ಮಾತುಗಳು ಪದ್ಮಿಯ ಬಗೆಗಿನ ಕಳಕಳಿ ಸೂಚಿಸುತ್ತದೆ. ಒಂದು ಹೆಣ್ಣಿನ ಬಗೆಗಿರುವ ಪುರುಷ ವರ್ಗದ ಸೋಗಲಾಡಿತನವನ್ನು ಇಲ್ಲಿ ಸ್ಪಷ್ಟವಾಗಿ ಗುರುತಿಸಬಹುದಾಗಿದೆ. ಪಾತ್ರ ಸಿಗುವುದೆಂಬ ಬಯಕೆಯಿಂದ ಪದ್ಮಿ ಸಂಜೆಯಿಂದ ರಾತ್ರಿಯವರೆಗೆ ಕಾದರೂ ಅವಳಿಗೆ ಅವಕಾಶ ಸಿಗದೇ ಮಾನಸಿಕ ಹಿಂಸೆ ನೀಡಿ ಅವಳನ್ನು ಅಲಕ್ಷಿಸಲಾಗುತ್ತದೆ. ಪದ್ಮಿಯ ತಂದೆ ನಾಗ್ರಜಾಯ್ಯ ಕೂಡಾ ತನ್ನ ಮಗಳ ಭವಿಷ್ಯದ ಕುರಿತು ಚಿಂತಿಸುವುದಿಲ್ಲ. ಆರ್ಥಿಕ ಸ್ಥಿತಿಯನ್ನು ಸುಧಾರಿಸಿಕೊಳ್ಳಲೋಸುಗ ನಾಗ್ರಜಾಯ್ಯ ಪದ್ಮಿಯನ್ನು ಸಿನಿಮಾ ಪ್ರಪಂಚಕ್ಕೆ ದೂಡುತ್ತಾನೆ. ಇಲ್ಲಿ ಆರ್ಥಿಕ ನೆಲೆಯಿಂದ ಅವಳನ್ನು ನೋಡುತ್ತಾನೆಯೇ ವಿನಃ, ಒಬ್ಬ ನಿಜವಾದ ತಂದೆಯಾಗಿ ಕರ್ತವ್ಯ ನಿರ್ವಹಿಸಲಾರ. ಹೀಗೆ ಯಜಮಾನ ಸಂಸ್ಕೃತಿಯಲ್ಲಿ ಬಂಧಿಯಾದ ಹೆಣ್ಣು ತನ್ನ ದೈಹಿಕ ಮತ್ತು ಮಾನಸಿಕ ಹಿಂಸೆಯಿಂದ ತತ್ತರಿಸಿ ವಿಲಿವಿಲಿ ಒದ್ದಾಡುವ ಸ್ಥಿತಿ ನಿರ್ಮಾಣವಾಗಿರುವುದರ ಸಂಕೇತವಿದು.

ಕ್ಯಾತ ತನ್ನಕ್ಕ ದೇವೀರಿ ಬರಲಾರದಕ್ಕೆ ಅವನಿಗೆ ಸಹಿಸುವುದಾಗುವುದಿಲ್ಲ. ಆಗ ಕ್ರೋಧಗೊಂಡ ಕ್ಯಾತ ''ನಂಗೂ ಗೊತ್ತಿಲ್ಲ ಅಂತ ತಿಳಿಬ್ಯಾಡ ತಿಪ್ಲಿಂಡ ಬತ್ತಾಳೆ, ನಂಗೂ ಗೊತ್ತಿಲ್ಲ ಅಂತ ತಿಳಿಬ್ಯಾಡ, ನಿನ ರೌಕ್ಕ, ಸೀರೆ ಯಲ್ಲಾ ಎಲ್ಲಿಂದ ಬಂದು ನಿಂಗೆ ತಗಲಿಕೊಳ್ತವೆ ಅಂತ ಗೊತ್ತು. ನರಸಿಂಹ ಮೇಸ್ತ್ರಿ ಸೂಳೆಮಗ, ಶಿವಾ, ನಾಗ್ರ ಎಲ್ಲ ಬೋಳೀ ಮಕ್ಕಳ ಕಲ್ಸಿಗೊತ್ತು''೪೯ ಎಂದು ಅಕ್ಕ ದೇವೀರಿಯ ಜಾತಕವನ್ನೆಲ್ಲ ಹೇಳುತ್ತಾನೆ. ಕ್ಯಾತನು ಸೂಕ್ಷ್ಮವಾಗಿ ಹೇಳಿದ ಮಾತುಗಳಲ್ಲಿ ಗಂಭೀರವಾದ ವಿಷಯ ಅಡಗಿರುವುದನ್ನು ನೋಡಬಹುದು. ಮೇಸ್ತ್ರಿ, ಶಿವಾ, ನಾಗ್ರಗಳಂಥ ವ್ಯಕ್ತಿಗಳು ಹೆಣ್ಣ ಬದುಕಿನಲ್ಲಿ ಪ್ರವೇಶಿಸಿ ಧ್ವಂಸಗೊಳಿಸುವ ಪ್ರಕ್ರಿಯೆಯಲ್ಲಿ ತೊಡಗುತ್ತಾರೆ. ಮೇಸ್ತ್ರಿ ದೇವೀರಿ ಮತ್ತು ಕ್ಯಾತನನ್ನು ತನ್ನ ಸ್ವಾರ್ಥಕ್ಕಾಗಿ ಬೇರ್ಪಡಿಸುವ ದುಸ್ಸಾಹಸಕ್ಕೆ ಕೈಹಾಕುತ್ತಾನೆ. ದೇವೀರಿಗೆ ಬೇರೆ ಮನೆಮಾಡಿ ಇಡುವ ಮೇಸ್ತ್ರಿಯ ಕರುಳುಬಳ್ಳಿ ಸಂಬಂಧಗಳನ್ನು ಕತ್ತರಿಸುವ ಕೃತ್ಯ ಅತ್ಯಂತ ಕ್ರೂರತನವಾಗಿ ತೋರುತ್ತದೆ.

ಜೂಜು, ರೇಸು ಎಂದು ಬಡಬಡಿಸುವ ರಂಗಜೆಟ್ಟಿ ಅನಾರೋಗ್ಯದಿಂದ ಬಳಲುವ ಹೆಂಡತಿ ಸಂಪೂರ್ಣವ್ವನನ್ನು ಕಣ್ಣೆತ್ತಿಯೂ ಸಹ ನೋಡದಿರುವುದು, ಪುರುಷ ವ್ಯವಸ್ಥೆಯ ಕ್ರೌರ್ಯಕ್ಕೆ ಸಾಕ್ಷಿಯಾಗುತ್ತದೆ. ಇದ್ದ ದುಡ್ಡನ್ನೆಲ್ಲ ರೇಸಿಗೆ ಹಚ್ಚಿ ವ್ಯಯ ಮಾಡುವ ರಂಗಜೆಟ್ಟಿ, ಸಂಪೂರ್ಣವ್ವನನ್ನು ಗುಣಪಡಿಸುವ ಗೋಜಿಗೆ ಹೋಗುವುದಿಲ್ಲ. ಯಜಮಾನ್ಯಸಂಸ್ಕೃತಿಯಲ್ಲಿ ಹೆಣ್ಣಿನ ಸುಖ-ಸಂತೋಷ ಆರೋಗ್ಯದ ಬಗೆಗೆ ಯೋಚಿಸದೇ ಇರುವುದು ಅವಳ ದಿವ್ಯ ನಿರ್ಲಕ್ಷ್ಯವೇ ಎಂದು ಹೇಳಬೇಕು. ವ್ಯವಸ್ಥೆಯ ಅಡಿಯಲ್ಲಿ ಸಿಕ್ಕ ಮಹಿಳೆ ನಜ್ಜುಗುಜ್ಜಾಗಿ ನರಳಿ ನರಳಿ ಮೇಲೇಳದೇ ಕುಸಿಯುತ್ತಲೇ ಬಂದಿದ್ದಾಳೆ.

'ಅನಾಥತೆ' ಕಾಡುವ ಪರಿ ಮತ್ತು ಅದನ್ನು ದುಡಿಮೆಯಿಂದ ತುಂಬಿಕೊಳ್ಳಲಾಗದಿದ್ದಾಗ ನಿಷ್ಠುರ ಸಮಾಜದ ವಿರುದ್ಧ ಹೋಗಿಯೂ ಬದುಕಬೇಕಾದುದು ದೇವಿರಿಯಂಥವರಿಗೆ ಅನಿವಾರ್ಯವಾಗುತ್ತದೆ. ಕ್ಯಾತನ ದನಿಯೂ ಪುರುಷನದ್ದೇ. ಆತನ ದೃಷ್ಟಿಗೂ ಸೀಮಿತತೆ ಇದೆ. ಬದುಕು ಎಲ್ಲ ಆಸೆ, ಅನುಮಾನಗಳನ್ನು ಮೀರಿದುದು. ಕಷ್ಟದ ಪರಿಸ್ಥಿತಿಯಲ್ಲಿ ನಿರ್ಗತಿಕ ಜನತೆ ತಮ್ಮ ಅಸಹಾಯಕತೆಯನ್ನು ನೀಗಿಕೊಳ್ಳಲು ಇಂಥ ಪರಿಸ್ಥಿತಿಗೆ ಹೊಂದಿಕೊಳ್ಳುವುದು ಅನಿವಾರ್ಯ ಕೂಡ. ಹಾಗಾಗಿ ದೇವಿರಿಯಾಗಲಿ, ಕ್ಯಾತನಾಗಲಿ, ಪದ್ದಿಯಾಗಲಿ ಎಲ್ಲರೂ ಆರ್ಥಿಕ ಚಕ್ರವನ್ನು ಹಿಡಿದು,ಗಿರಗಿರ ಸುತ್ತುತ್ತಿರುವವರೇ ಆಗಿದ್ದಾರೆ. ಇಲ್ಲಿ ಪುರುಷ ಪ್ರಜ್ಞೆ ಜಾಗೃತವಾಗಬೇಕೇ ವಿನಃ ಹಿಂಬದಿಯಲ್ಲ. ಪ್ರಜ್ಞೆ ಸಾಮಾಜಿಕ ಸಾರ್ವತ್ರಿಕವಾಗಿ ಗಟ್ಟಿಗೊಳ್ಳದಿದ್ದರೆ ಲಿಂಗಭೇದ ಸಮಸ್ಯೆ ಇನ್ನೂ ತೀವ್ರವಾಗಬಹುದು. ಚಕ್ರ ತಿರುಗಿ ಪುರುಷನೂ ಇಂಥ ಸ್ಥಿತಿಗೆ ದೂಡಲ್ಪಡಬಹುದಲ್ಲವೆ?

ಒಟ್ಟಾರೆ 'ಅಕ್ಕ' ಕಾದಂಬರಿಯು ದೇವಿರಿ ಮತ್ತು ಪದ್ದಿಯ ಸುತ್ತ ಸುತ್ತುವ ರಾಜಕೀಯ ಪ್ರಸ್ತುತ ಸ್ಥಿತಿಯ ಜೀವಂತ ಚಿತ್ರಣ ನೀಡುತ್ತದೆ. ಬಿದ್ದವರನ್ನು ತುಳಿದು ತಿನ್ನುವ ಜನರ ನಡುವೆ ಪದ್ದಿ ದೇವಿರಿಯಂಥ ಹೆಣ್ಣು ಕಾಲ ತುಳಿತಕ್ಕೆ ಸಿಕ್ಕ ಹೂವುಗಳು.

ಗಂಡಸರು

ಸಮಕಾಲೀನ ಮಹಿಳಾ ಲೇಖಕಿಯರಲ್ಲಿ ವೀಣಾ ಶಾಂತೇಶ್ವರ ಅವರದು ದೊಡ್ಡ ಹೆಸರು ಭಾರತೀಯ ಪರಂಪರೆಯಲ್ಲಿ ತಮ್ಮ ಅನುಭವಗಳನ್ನು ಹೇಳಲಾರದಂಥ ಸಂಕೀರ್ಣ ಮಾನಸಿಕ ಮುಜುಗರದಲ್ಲಿರುವ ಮಹಿಳೆಯರು ಮುಕ್ತಗೊಳಿಸಿಕೊಂಡು ಬರೆದರೆ ಉತ್ತಮ ಮೌಲಿಕ ಸಾಹಿತ್ಯ ನೀಡಬಲ್ಲರೆಂಬುದನ್ನು ವೀಣಾ ಅವರು ಸಾಬೀತುಗೊಳಿಸಿದ್ದಾರೆ ಎಂಬುದಾಗಿ ಡಾ।ಮಲ್ಲಿಕಾ ಘಂಟಿ ಅವರು ಅಭಿಪ್ರಾಯಪಡುತ್ತಾರೆ.'ಕೊನೆಯ ದಾರಿ ' ,'ಕವಲು' , ' ಮುಳ್ಳುಗಳು' ಎಂಬ ಮೂರು ಕಥಾ ಸಂಕಲನಗಳನ್ನು , ಗಂಡಸರು ಶೋಷಣೆ , ಬಂಡಾಯ ಇತ್ಯಾದಿ ಎನ್ನುವ ಕಾದಂಬರಿಗಳು ವೀಣಾ ಅವರ ಕೃತಿಗಳು.

ಬದುಕಿನ ಸಂಕೀರ್ಣತೆಯನ್ನು , ಮಹಿಳಾ ಸಮಸ್ಯೆಯನ್ನು ಜೀವನಾನುಭವದ ಮೂಲಕ ಸಮರ್ಥವಾಗಿ ಚಿತ್ರಿಸುವ ವೀಣಾ ಅವರ ಸೃಜನಶೀಲತೆಯನ್ನು ಕುರಿತು ಶ್ರೀಕೃಷ್ಣ ಆಲನಹಳ್ಳಿಯವರು ಈ ರೀತಿಯಾಗಿ ಹೇಳುತ್ತಾರೆ. ; ''ಹೊಸ ಸಂವೇದನೆಯ ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಶ್ರೀಮತಿ ವೀಣಾ ಅವರ ಸಾಧನೆ ಅಪೂರ್ವವಾದುದು . ಹೆಣ್ಣು ಮಕ್ಕಳ ಒಳತೋಟಿಯನ್ನು ವಿಭಿನ್ನತೆಯಿಂದ ಯಾವುದೇ ಮುಚ್ಚುಮರೆಯಿಲ್ಲದೆ ಇವರಷ್ಟು ದಿಟ್ಟವಾಗಿ ಕಲಾತ್ಮಕವಾಗಿ ಅಭಿವ್ಯಕ್ತಿಸುತ್ತಿರುವ ಇನ್ನೊಬ್ಬ ಲೇಖಕಿ ಕನ್ನಡದಲ್ಲಿ ಇಲ್ಲ ಎನ್ನಬಹುದು . ತಮ್ಮ ಮೊದಲ ಕಥಾ ಸಂಕಲನ 'ಮುಳ್ಳುಗಳು ' ಮೂಲಕ ಎಲ್ಲರ ಗಮನ ಸೆಳೆದ , ಕನ್ನಡದ ಪ್ರತಿಭಾನ್ವಿತ ಲೇಖಕಿಯರ ಕೊರತೆಯನ್ನು ತುಂಬಬಲ್ಲವರು ಇವರೇ ಎಂಬ ಭರವಸೆಯನ್ನು ಕೃತಿಯಿಂದ ಕೃತಿಗೆ ಬೆಳೆಯುತ್ತ ಬಂದ ವೀಣಾ ನಿಜಗೊಳಿಸಿದ್ದಾರೆ. ವೀಣಾರವರ ಜೀವಂತ ಕಲೆಗಾರಿಕೆಯನ್ನು ಅವರ 'ಗಂಡಸರು ' ಕಾದಂಬರಿಯಲ್ಲಿ ನಿಚ್ಚಳವಾಗಿ ಕಾಣಬಹುದು . ಸಮಾಜದ ಅಂತರಂಗ ಪ್ರಪಂಚವನ್ನು ಸೂಕ್ಷ್ಮವಾಗಿ ಬಿಚ್ಚುತ್ತ ಹೋಗುವ , ವ್ಯಕ್ತಿಗಳ ಮುಖವಾಡಗಳನ್ನು ಕಳಚಿ ಅವರ ನಿಜಸ್ವರೂಪವನ್ನು ಅನಾವರಣಗೊಳಿಸುವ ಮತ್ತು ಸಂಕೀರ್ಣ ಅನುಭವಗಳನ್ನು ಸಫಲ ಕೃತಿಯಾಗಿ ಆಗುಗೊಳಿಸುವ ಇವರ ಪ್ರತಿಭೆ ಕಣ್ಣು ಕುಕ್ಕುವಂಥದು ''೫೦ ಎಂದು ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತ ತೂಕಬದ್ಧವಾದ ಮಾತುಗಳನ್ನಾಡಿದ್ದಾರೆ.

ಇಂದಿನ ನವನಾಗರಿಕತೆಯ ಸ್ವಚ್ಛಂದ ವಾತಾವರಣದಲ್ಲಿ ಸ್ವತಂತ್ರವಾಗಿ ಬೆಳೆದ ಮಹಿಳೆಯರ ಸಮಸ್ಯೆಯನ್ನೇ ವೀಣಾ ಅವರು ತಮ್ಮ ಗಂಡಸರು ಕಾದಂಬರಿಯ ವಸ್ತುವನ್ನಾಗಿ ಎತ್ತಿಕೊಂಡಿದ್ದಾರೆ. ಒಬ್ಬ ಹೆಣ್ಣು ಸಮಾಜದಲ್ಲಿ ಪುರುಷರ ಬಣ್ಣದ ಮಾತುಗಳಿಗೆ ಬಲಿಬಿದ್ದು ಯಾವ ರೀತಿ ಮೋಸಹೋಗುತ್ತಾಳೆ. ಎಂಥ ಸಂಕಷ್ಟಗಳಿಗೆ ಸಿಲುಕಿ ಬದುಕನ್ನು ಎದುರಿಸುತ್ತಾಳೆ ಹಾಗೂ ಕ್ರಮೇಣ ಪುರುಷ ವ್ಯವಸ್ಥೆಗೆ ಹೊಂದಿಕೊಂಡು ಹೆಜ್ಜೆಹಾಕುವದೇ ಈ ಕಾದಂಬರಿಯ ವಸ್ತುವಾಗಿದೆ.

ಶಾಂತಿ ಕಾದಂಬರಿಯ ನಾಯಕಿ. ಬಾಲ್ಯದಿಂದಲೂ ಶಾಂತಿ ಶಂಕರ ಸ್ನೇಹಿತರು . ವಯಸ್ಸಿನ ಸಹಜ ಗುಣಧರ್ಮದಿಂದ ಒಬ್ಬರಿಗೊಬ್ಬರು ಆಕರ್ಷಿತರಾಗಿ ಪ್ರೇಮದ ಸೆಳವಿಗೆ ಸಿಲುಕುತ್ತಾರೆ. ಶಂಕರ ಶಾಂತಿಗೆ ಮದುವೆಯಾಗುವದಾಗಿ ಮಾತುಕೊಟ್ಟರೂ ಕೊನೆಗಳಿಗೆಯಲ್ಲಿ ಮದುವೆ ಮುರಿದು ಬೀಳುತ್ತದೆ. ಪ್ರೊ. ಮುರಳಿ ಶಾಂತಿಯ ಮುಂದೆ ಮಹಿಳಾ ಉದ್ಧಾರದ ಬಗ್ಗೆ ಮಾತನಾಡಿದಾಗ ಅದನ್ನು ನಂಬಿ ಕಾಲು ಜಾರುತ್ತಾಳೆ ಮತ್ತು ತನ್ನ ಗೆಳತಿ ಜಯಶ್ರೀಗೂ ಪ್ರೊ. ಮುರಳಿ ನಿಂದ ನಡೆದ ಪ್ರಕರಣ ತಿಳಿದು ತನ್ನ ಮನಸ್ಸಿನಿಂದ ಮುರಳಿನ ಆಸೆ ತೆಗೆದುಹಾಕುತ್ತಾಳೆ. ಇದೇ ರೀತಿಯಲ್ಲಿ ಸಹೋದ್ಯೋಗಿ ರಮಾಕಾಂತ ಸಿಂಧೆ ಮತ್ತು ಕ್ರಾಂತಿ ಪತ್ರಿಕೆಯ ಮುಖ್ಯಸ್ಥ ಹಾಗೂ ಸ್ವತಂತ್ರ ಪಾರ್ಟಿಯ ಮುಂದಾಳು ಜಾನ್ ಅಶೋಕಕುಮಾರ ಕೂಡಾ ಶಾಂತಿಯ ಬದುಕಿನಲ್ಲಿ ಬಂದುಹೋಗುತ್ತಾರೆ. ಶಾಂತಿಗೆ ಇಲ್ಲಿಯೂ ಮೊದಲಿನ ಅನುಭವವೇ ಪುನರಾವರ್ತನೆಯಾಗುತ್ತದೆ. ಕೊನೆಗೆ ಶಾಂತಿ ಕಲ್ಕತ್ತೆಗೆ ಹೋಗುವಾಗ ವಿದೇಶೀ ಸಹಪ್ರಯಾಣಿಕ ಅವಳ ಜೊತೆ ಪ್ರೀತಿಯ ಮಾತನಾಡಿದಾಗ ಪ್ರೀತಿಯೆಂದರೇನು ? ಎನ್ನುವ ಪ್ರಶ್ನೆ ಕೇಳುತ್ತಾರೆ ಇದಿಷ್ಟು ಈ ಕಾದಂಬರಿಯ ಸಾರರೂಪ.

ವೀಣಾ ಅವರು ಇಲ್ಲಿ ಗಂಡಸರು ಕಾದಂಬರಿಯಲ್ಲಿ ಗಂಡು- ಹೆಣ್ಣುಗಳ ಪ್ರೇಮಾತ್ಮಕ ಸಂಬಂಧಗಳನ್ನು ಬಿಚ್ಚಿತೋರಿಸುತ್ತಾರೆ. ಬಾಲ್ಯದ ಗೆಳೆಯ ಶಂಕರನ ಜೊತೆಗೆ ಒಡನಾಟವಿಟ್ಟುಕೊಂಡಿದ್ದ ಶಾಂತಿ ಶಂಕರನ ಪ್ರೇಮಪಾಶಕ್ಕೆ ಸಿಲುಕುತ್ತಾಳೆ ಆದರೂ ಸಮಾಜದ ರೀತಿ - ನೀತಿ ಕಟ್ಟಳೆಗಳನ್ನು ಮೀರದೇ ಹಿಂದೇಟು ಹಾಕುತ್ತಾಳೆ . ಒಂದು ಗಂಡು- ಒಂದು ಹೆಣ್ಣನ್ನು ಮುಖಸ್ತುತಿ ಮಾಡುವುದು ಆ ಹೆಣ್ಣಿನ ಸಾಮಿಪ್ಯವನ್ನು ಬಯಸುವುದಕ್ಕಾಗಿಯೇ

ಎನ್ನುವುದು ಬೇರೆ ಹೇಳಬೇಕಾಗಿಲ್ಲ. ಅಂಥಾ ವಿಚಾರದಿಂದ ಶಾಂತಿಯನ್ನು ಶಂಕರ ಹೊಗಳುವುದು ಕೂಡಾ ಹೊರತಾಗಿ ಉಳಿಯುವುದಿಲ್ಲ. ದಿಲ್ಲಿಯಿಂದ ಶಂಕರನ ಪ್ರೇಮ ಪತ್ರ ಬಂದಾಗ ಓದಿ ಖುಷಿಯಾಯಿತಾದರೂ ಪುರುಷ ವರ್ತನೆಯ ಬಗೆಗೆ ಒಂದು ರೀತಿಯ ಋಣಾತ್ಮಕ ಭಾವನೆಗೊಳಗಾಗುತ್ತಾಳೆ. "ನಮ್ಮ ಹಿಂದೂ ಹೆಂಗಸರು ಅನ್ಯಾಯ ಅತ್ಯಾಚಾರಗಳನ್ನು ಇನ್ನು ಸಹಿಸಬಾರದು. ಅವರಿನ್ನು ಈ ಕಟ್ಟುಪಾಡುಗಳ ವಿರುದ್ಧ ಬಂಡೇಳಬೇಕು. ಸಂಪೂರ್ಣ ಸ್ವಾತಂತ್ರ್ಯಕ್ಕಾಗಿ ಹೋರಾಡಬೇಕು. ಸ್ವಾತಂತ್ರ್ಯ ಸಿಗುವವರೆಗೂ ಹೋರಾಟ ನಿಲ್ಲಿಸಬಾರದು ೫೧ ಎನ್ನುವ ನಿಲುವು ಶಾಂತಿಯ ಮನಸ್ಸಿನಲ್ಲಿ ಮೂಡುತ್ತದೆ. ಈ ಪುರುಷ ಸಮಾಜ ಹೆಣ್ಣಿನ ಮೇಲೆ ಹೇರಿರುವಂಥ ಕಟ್ಟಳೆಗಳನ್ನು ಮುರಿಯುವ ಹಾಗೂ ಸ್ತ್ರೀ ಸಮಾನತೆಗಾಗಿ, ಅವಳ ದಾಸ್ಯದ ಬಿಡುಗಡೆಗಾಗಿ ಹೋರಾಡುವ ಕ್ರಾಂತಿಕಾರಕ ವಿಚಾರಗಳನ್ನು ಅವಳ ತಲೆಯಲ್ಲಿ ತುಂಬಿಕೊಂಡಿರುವುದು ವ್ಯಕ್ತಗೊಳ್ಳುತ್ತದೆ.

ಶಾಂತಿ ಶಂಕರನನ್ನು ಮದುವೆಯಾಗಲು ಒಪ್ಪಿದ್ದರೂ ಅವಳೆಂದೂ ಶಂಕರನ ದಾಸ್ಯತ್ವಕ್ಕಾಗಿ ಆತುರಪಡುವುದಿಲ್ಲ. ಆದರೆ ಶಂಕರ ಮಾತ್ರ ತುದಿಗಾಲಮೇಲೆಯೇ ನಿಂತಿರುವುದನ್ನು ಗಮನಿಸಿದ ಶಾಂತಿ ಅವನ ವರ್ತನೆಯನ್ನು ಖಂಡಿಸುತ್ತಾಳೆ. ಹೆಣ್ಣಿನ ಮೇಲೆ ಪುರುಷ ಚಲಾಯಿಸುವ ಹಕ್ಕನ್ನು ಅವಳು ಸಹಿಸುವುದಿಲ್ಲ. ಅವಳಿಗೂ ಅವಳ ಆಯ್ಕೆ ಸ್ವಾತಂತ್ರ್ಯವನ್ನು ಪ್ರತಿಪಾದಿಸುವ ಛಾತಿಯುಳ್ಳವಳಾಗಿ ಗೋಚರಿಸುತ್ತಾಳೆ. ಪುರುಷ ಸ್ತ್ರೀಯನ್ನು ಕೇವಲ ಲೈಂಗಿಕ ದೃಷ್ಟಿಯಿಂದ ನೋಡುವುದರ ಬಗೆಗೆ ಶಾಂತಿಯ ಅಸಹನೆ ವ್ಯಕ್ತವಾಗುತ್ತದೆ. 'ಖರೆ ಪ್ರೀತಿ ಅಂದರ ಮನಸ್ಸಿನ ಪ್ರೀತಿ. ಈ ದೈಹಿಕ ಸಂಬಂಧದಿಂದ ಮನಸ್ಸಿನ ಪ್ರೀತಿ ಹೊಲಸು ಆಗತದ. ನನಗ ಅಂಥಾ ಪ್ರೀತಿ ಬ್ಯಾಡ ನನ್ನ ಖರೇ ಪ್ರೀತಿ ಮಾಡೋವಂಥಾವನ್ನ ನಾ ಲಗ್ನಾಗ್ತೀನಿ. ಗಂಡಸು-ಹೆಂಗಸಿನ ದೈಹಿಕ ಸಂಬಂಧ ನೆನಸಿದರ ಹೇಸಿಗೆ ಬರ್ತದ ನನಗ ನಾವೇನು ನಾಯಿಗಳು ಹಂದಿಗಳ? ಮನುಷ್ಯರಾಗಿ ಹುಟ್ಟಿದ್ದಕ್ಕ ಪ್ರಾಣಿಗಳಿಗಿಂತ ಬ್ಯಾರೇ ಇರಬೇಕೋ ಬ್ಯಾಡೋ? ಇದೆಲ್ಲಾ ನಮ್ಮ ಸಮಾಜದಾಗಿನ ಕಟ್ಟುಪಾಡು ಹೆಂಗಸಿನ ತನ್ನ ಆಳಾಗಿ ಇಟಗೊಳ್ಳಲಿಕ್ಕ ಗಂಡಸು ಹೂಡಿರೋ ಸಂಚು ೫೨ ಆಗಿದ. ಶಾಂತಿಯ ಬಾಯಿಂದ ಹೊರಡುವ ಈ ಮಾತುಗಳು ಇಡೀ ಪುರುಷ ವರ್ಗದ ಬಂಡವಾಳವನ್ನು ಬಯಲಿಗಿಡುತ್ತವೆ. ಕಾಮಾತುರಾಣಾಂ ನ ಭಯಂ ನ ಲಜ್ಜಾ' ಎನ್ನುವ ತೆರದಲ್ಲಿ ಪುರುಷ ಭಯ

ನಾಟಕಗಳನ್ನು ಬದಿಗಿಟ್ಟು ಪಶುವಿಗಳಿಗಿಂತಲೂ ಕೀಳಾಗಿ ವರ್ತಿಸಬಲ್ಲನೆಂಬ ಸ್ಪಷ್ಟ ಸೂಚನೆಯಿದೆ. ಇಂಥ ಪುರುಷ ಗುಣಗಳನ್ನು ಶಾಂತಿ ಕಟುವಾಗಿ ವಿರೋಧಿಸುತ್ತಾಳೆ.

ಪುರುಷಕೇಂದ್ರಿತ , ಆಕ್ರಮಣಕಾರಿ ಪ್ರವೃತ್ತಿಯನ್ನು ವಿರೋಧಿಸುತ್ತಲೇ ಶಾಂತಿ ಶಂಕರನತ್ತ ಒಲಿಯುತ್ತಾಳೆ . ಶಂಕರ ತನ್ನ ದೈಹಿಕ ಕಾಮನೆಗಳ ಪೂರೈಕೆಗಾಗಿ ಏನೆಲ್ಲವನ್ನು ಹೇಳುತ್ತಾನೆ ,'' ಶಾಂತೀ ನಾ ನಿನ್ನ ಭಾಳ - ಭಾಳ ಪ್ರೀತಿ ಮಾಡ್ತೀನಿ . ನಾ ನಿನ್ನಗ್ಯಾಕ ಆಗ್ಲಿಕ್ಕ ಈ ಜಗತ್ತಿನ್ಯಾಗಿನ ಯಾವ ಶಕ್ತೀನೂ ಅಡ್ಡ ಬರೂದಿಲ್ಲ.ನಾ ಎಲ್ಲ Face ಮಾಡ್ತೀನಿ ನಿನ್ನ್ಸಲುವಾಗಿ ೫೨ ಎಂಬ ಶಂಕರನ ಮಾತುಗಳು ಅವಳಿಗೆ ನಿಜವಾಗಿ ತೋರುತ್ತವೆ. ಶಂಕರನ ಬಣ್ಣದ ಮಾತುಗಳಿಗೆ ಮರುಳಾದ ಶಾಂತಿ ಅವನ ಆಜ್ಞಾನುವರ್ತಿಯಾಗುತ್ತಾಳೆ. ಶಾಂತಿಯ ಕ್ರಾಂತಿಯ ವಿಚಾರಗಳಿಗೆ ಶಂಕರ ಕಡಿವಾಣ ಹಾಕಲು ಯತ್ನಿಸುತ್ತ ಶಾಂತಿಯನ್ನು ಉದ್ದೇಶಿಸಿ '' ಸ್ತ್ರೀ ಸ್ವಾತಂತ್ರ್ಯ, ಮಣ್ಣು -ಸುಡುಗಾಡು ಅಂತ ಎಲ್ಲೆ ಬೇಕಾದಲ್ಲೆ ಹೋಗಿ ಬಾಯಿಗೆ ಬಂದದ್ದು ಒದರಿ ಬರೂದು ಇನ್ನ ಬಿಟ್ಟು ಬಿಡು ನನಗದೆಲ್ಲಾ ಸೇರೂದಿಲ್ಲ '' ೫ ಎಂದ ಅವನ ಹೇಳಿಕೆ ಸ್ತ್ರೀಯ ಅಭಿವ್ಯಕ್ತಿ ಸ್ವಾತಂತ್ರ್ಯದ ಹರಣವೆನಿಸುತ್ತದೆ.

ಸ್ತ್ರೀ ನಾಲ್ಕು ಗೋಡೆಗಳ ಮಧ್ಯೆಯೇ ಇರಬೇಕು. ಹೊಸ್ತಿಲ ಹೊರಗೆ ಅಡಿಯಿಡದಂತೆ ಪುರುಷ ಪ್ರಧಾನ ಸಮಾಜ ಅವಳನ್ನು ನಿಯಂತ್ರಿಸುತ್ತಲೇ ಬಂದಿರುವುದನ್ನು ಲೇಖಕ ಚಿತ್ರಿಸುತ್ತಲೇ , ಜೊತೆಗೆ ಪುರುಷ ನಿರ್ಮಿತ ಕೋಟೆಯನ್ನು ಭಂಜಿಸುವ ಪ್ರಯತ್ನ ಮಾಡುತ್ತಾರೆ. ದೈಹಿಕ ತೃಷೆ ನೀಗಿಸಿಕೊಳ್ಳುವ ಭರದಲ್ಲಿ ಮದುವೆಯಾಗುವದಾಗಿ ಮಾತುಕೊಟ್ಟ ಶಂಕರ ಆನಂತರ ಶಾಂತಿಗೆ ಕೈಕೊಡುತ್ತಾನೆ. ಈ ಘಟನೆ ಪುರುಷನ ವಂಚನೆಯನ್ನು ಸ್ತ್ರೀಯ ಲೈಂಗಿಕ ಶೋಷಣೆಯ ನಿದರ್ಶನವಾಗಿದೆ. ಶಾಂತಿ ಅನ್ಯಾಯಕ್ಕೆ ಒಳಗಾದವಳು ಶಂಕರನ ವಿರುದ್ಧ ಧ್ವನಿ ಎತ್ತದಿರುವುದು ಪುರುಷ ಪ್ರಾಬಲ್ಯತೆಯ ಸಂಕೇತವನ್ನು ಸೂಚಿಸುತ್ತದೆ. ಶಾಂತಿಯ ಜೀವನದಲ್ಲಿ ಪ್ರವೇಶಿಸುವ ಎರಡನೇ ಗಂಡಸು ಪ್ರೇಮಂದರ ಸಮಾಜದಲ್ಲಿ ಹೆಂಗಸರ ಮೇಲೆ ನಡೆಯುವ ಅನ್ಯಾಯ , ಅತ್ಯಾಚಾರಗಳನ್ನು ಖಂಡಿಸುವ ಹಾಗೂ ಅವರ ಬಗೆಗೆ ಕಳಕಳಿಯುಳ್ಳ ಒಬ್ಬ ಪ್ರಗತಿಪರ ವಿಚಾರವಾದಿ . ಇದೇ ವಿಷಯ ಕುರಿತು ತನ್ನ ಕಾದಂಬರಿಗಳಲ್ಲಿ ಹೆಂಗಸರಿಗೆ ಗಂಡಸಿನಿಂದ ಆಗುವ ನೂರು ತರದ ಮೋಸಗಳ ಬಗ್ಗೆ , ಅವರನ್ನು ಆಟಿಗೆಯ

ಸಾಮಾನುಗಳಂತೆ ನೋಡುವ ದೃಷ್ಟಿಕೋನವುಳ್ಳವರ ವಿರುದ್ಧ ಹೆಂಗಸರು ಸಿಡಿದೇಳಬೇಕು ಎನ್ನುವ ಅಂಶಗಳನ್ನು ವ್ಯಕ್ತಪಡಿಸಿರುವುದಾಗಿ ಶಾಂತಿಯು ಮುಂದೆ ಹೇಳಿಕೊಳ್ಳುತ್ತಾಳೆ.

ಮಂಥರನ ಮುಕ್ತ ಪ್ರಣಯ ಶಾಂತಿಯನ್ನು ಆಕರ್ಷಿಸುತ್ತದೆ. ಶಾಂತಿ ಮಂಥರನ ಬಗೆಗೆ ಧನಾತ್ಮಕ ಭಾವನೆಯನ್ನು ತಾಳುವುದರೊಂದಿಗೆ , ಆತನಲ್ಲಿ ಅನುರಕ್ತೆಯಾಗುತ್ತಾಳೆ . ಈ ಹಿಂದೆ ಮಂಥರ ಶಾಂತಿಯ ಗೆಳತಿ ಜಯಶ್ರೀ ದೇಸಾಯಿಗೂ ಮತ್ತು ಆವಳ ಸ್ನೇಹಿತೆ ರಮಾ ಪಾಟೀಲಳಿಗೂ ಲಗ್ನ ಆಗುವುದಾಗಿ ನಂಬಿಸಿ ಮೋಸಮಾಡಿದ್ದು ತಿಳಿಯುತ್ತದೆ. ಮಂಥರ ಒಬ್ಬ ವಿಚಾರವಾದಿ ಎಂಬ ಹಣೆಪಟ್ಟಿ ಕಟ್ಟಿಕೊಂಡು ಸ್ತ್ರೀಯರ ಲೈಂಗಿಕ ಶೋಷಣೆಯನ್ನು ಮಾಡುತ್ತಾನೆ. ಇಲ್ಲಿ ಮಂಥರ ವಿಷಯ ಲಂಪಟತನದ ಹುಳುಕು ಹೊರಬೀಳುತ್ತದೆ. ಆತನ ದ್ವಂದ್ವ ನಡವಳಿಕೆ ಮಂಥರ ಇಬ್ಬಂದಿತನಕ್ಕೆ ಸಾಕ್ಷಿಭೂತವಾಗಿ ಪರಿಣಮಿಸಿದೆ.

ಸಮಾಜದಲ್ಲಿ ಒಬ್ಬ ವ್ಯಕ್ತಿ ಸಾರ್ವತ್ರಿಕವಾಗಿ ಗುರುತಿಸಿಕೊಂಡು ವೈಯುಕ್ತಿಕ (ವ್ಯಕ್ತಿನಿಷ್ಠ) ನೆಲೆಯಲ್ಲಿ ಸಿಲುಕಿಕೊಂಡರೆ ಆವನಿಗೆ ಯಾವುದೇ ರೀತಿಯಲ್ಲಿ ತುಚ್ಛೀಕರಿಸುವುದಿಲ್ಲ. ಅದೇ ರೀತಿಯಾಗಿ ಹೆಣ್ಣೊಂದು ವರ್ತಿಸಿದರೆ ಸಮಾಜ ಅವಳನ್ನು ಸ್ವೇಚ್ಛಾಚಾರಿ ಎಂತಲೂ ಬಜಾರಿ ಎಂತಲೂ ನಾಮಕರಣ ಮಾಡುತ್ತದೆ. ಇಂಥ ಅಭಿಪ್ರಾಯಗಳು ಸಮಾಜ ಗರ್ಭದಿಂದಲೇ ಜನ್ಮ ಪಡೆಯುತ್ತವೆ.

ಮುಂಬೈಯಲ್ಲಿ ಶಾಂತಿಯ ಸಹೋದ್ಯೋಗಿ ರಮಾಕಾಂತ ಸಿಂಧೆ ಪ್ರವೇಶಿಸುತ್ತಾನೆ. ಸಿಂಧೆ ಶಾಂತಿಯನ್ನು ಪ್ರೀತಿಸಿ ಅವಳನ್ನು ತನ್ನ ಮನೆಯಲ್ಲಿ ಇಟ್ಟುಕೊಳ್ಳುತ್ತಾನೆ. ಶಾಂತಿ ಮದುವೆಯ ಮಾತೆತ್ತಿದಾಗ ಮನೆಯನ್ನೇ ಬಿಟ್ಟು ರಾತ್ರೋರಾತ್ರಿ ಹೊರಟುಹೋಗುವನು. ಸಿಂಧೆಯ ದೃಷ್ಟಿಯಲ್ಲಿ ಹೆಣ್ಣು ಕೇವಲ ಕಾಮದ ಮುದ್ದೆ ' ಬಾಳೆ ಹಣ್ಣಂದು ಬೀಸಿ ಒಗೆದಂಗ ' ಇಲ್ಲಿ ಸಿಂಧೆ ಶಾಂತಿಯನ್ನು ತನ್ನ ಆವಶ್ಯಕತೆಯನ್ನು ಪೂರೈಸಿಕೊಳ್ಳುವವರೆಗೂ ಪ್ರೀತಿಸಿ ಕೊನೆಗೆ ಏಕಾಏಕಿ ಬಿಟ್ಟು ಹೋದದ್ದು ಪುರುಷ ವರ್ಗ ಸ್ತ್ರೀಯರ ಮೇಲೆ ನಡೆಸುವ ಲೈಂಗಿಕ ಶೋಷಣೆಯನ್ನು

ಸಮರ್ಥಿಸುತ್ತದೆ. ಪ್ರತಿ ಹಂತದಲ್ಲಿ ಪ್ರತಿ ಪುರುಷನಿಂದ ಶಾಂತಿ ಅನುಭವಿಸುವ ಶೋಷಣೆಯ ನೋವು ಇಲ್ಲಿ ಸ್ಪಷ್ಟವಾಗಿ ನಿರೂಪಿತವಾಗಿದೆ.

ಸಿಂಧಿಯ ನಿರ್ಗಮನದಿಂದ ಶಾಂತಿಯ ಬದುಕು ಪುನಃ ಕವಲೊಡೆಯುತ್ತದೆ. 'ಕ್ರಾಂತಿ ' ಪತ್ರಿಕೆಯ ಮುಖ್ಯಸ್ಥ ಹಾಗೂ ಸ್ವತಂತ್ರ ಪಾರ್ಟಿಯ ನಾಯಕ ಜಾನ್ ಅಶೋಕಕುಮಾರ . ಶಾಂತಿ ಈತನಲ್ಲಿ ಕೆಲಸಕ್ಕೆ ಸೇರಿದ ಮೇಲೆ ಅವನ ಮೋಹಕ್ಕೆ ಒಳಗಾಗುತ್ತಾಳೆ. ಜಾನ್ ಸ್ತ್ರೀ ಸ್ವಾತಂತ್ರ್ಯ ವ್ಯಕ್ತಿ ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿದ ವ್ಯಕ್ತಿ . ಆತ ಈ ವ್ಯವಸ್ಥೆಯ ಬಗೆಗೆ ''ನಾವು ಎಷ್ಟೇ ಮುಂದುವರಿದರೂ , ಕ್ರಾಂತಿಯ ಮಾತಾಡಿದರೂ ಸ್ವಾತಂತ್ರ್ಯ ಹಕ್ಕುಗಳ ಬಗ್ಗೆ ಹೋರಾಡಿದರೂ , ನಮ್ಮ ದೇಶದಲ್ಲಿ ಯಾವಾಗ್ಲೂ ಗಂಡಸ್ಗೊಂದು ಕಾಯ್ದೆ , ಹೆಂಗಸರಿಗೆ ಬೇರೆಯೇ ಒಂದು ಕಾಯ್ದೆ . ಒಂದು ಕೆಲಸಾನ , ಅದೆಷ್ಟೆ ಕೆಟ್ಟದ್ದಾಗಿರ್ಲಿ , ಗಂಡಸು ಮಾಡಿದ್ರೆ ಸಮಾಜ ಆ ಕಡೆ ನೋಡೋ ದೃಷ್ಟಿನೇ ಬೇರೆ . ಅದೇ ಕೆಲ್ಸ ಒಂದು ವೇಳೆ ಹೆಂಗಸು ಮಾಡಿದ್ರೆ ಅದೇ ಸಮಾಜ ರಂಭಾಟ ಮಾಡಿಬಿಡುತ್ತೆ. ಮೇಲೇರಲು ಹೇಗೆ ಹೆಂಗಸಿಗೆ ಸ್ವಾತಂತ್ರ್ಯ ಇಲ್ವೋ ಹಾಗೆಯೇ ತನಗೆ ಬೇಕೆಂದಾಗ ಬಿಟ್ಟು ಹೋಗಲು ಆಕೆಗೆ ಸ್ವಾತಂತ್ರ್ಯವಿಲ್ಲ, ತಪ್ಪು ಯಾರದೇ ಆಗಿದ್ರೂ ಕೆಟ್ಟ ಹೆಸರು ಬರುವುದು ಹೆಂಗಸಿಗೇ ''೫೫ ಎನ್ನುವ ಜಾನ್ ಸಮಾಜದಲ್ಲಿರುವ ಸ್ತ್ರೀ -ಪುರುಷ ತಾರತಮ್ಯದ ಬಗೆಗೆ ಅಸಹನೆಯಿಂದ ಹೇಳುತ್ತಾನೆ. ಇಲ್ಲಿ ಸಮಾಜದಲ್ಲಿ ಲಿಂಗಭೇದ ಬೇರೂರಿರುವ ಸ್ಪಷ್ಟ ಸೂಚನೆಯಿದೆ.

ವ್ಯಕ್ತಿ ಸ್ವಾತಂತ್ರ್ಯದ ಬಗ್ಗೆ ಮಾತಾಡುವ ಜಾನ್ , ಅದೇ ಶಾಂತಿ ಚುನಾವಣೆ ಪ್ರಚಾರಕ್ಕೆ ಹೋದಾಗ ಮತ್ತು ಕಲ್ಕತ್ತೆಯ 'Women " ಪತ್ರಿಕೆಯ ಸಹಸಂಪಾದಕಿ ಕೆಲಸದ ಆದೇಶ ಬಂದಾಗ ಅವಳ ಮೇಲೆ ಹರಿಹಾಯ್ದು 'ಇಲ್ನೋಡು ಶಾಂತಿ ನೀನು ಏನೇ ಮಾಡೋದಿದ್ರೂ ನನಗೆ ಹೇಳಿ ಮಾಡ್ಬೇಕು . ನನ್ನ ಪರ್ಮಿಶನ್ ಇಲ್ದೆ ಇಂಥದ್ದೆಲ್ಲ ಮಾಡ್ಬೇಡ ಇನ್ನು''೫೬ ಎನ್ನುವ ಹೇಳಿಕೆ ಹೆಂಗಸು ಗಂಡಸಿನ ಅಧೀನದಲ್ಲಿಯೇ ಇರಬೇಕು,ಅವಳು ಸ್ವತಂತ್ರವಾಗಿ ಯಾವ ನಿರ್ಧಾರವನ್ನು ಕೈಗೊಳ್ಳಕೂಡದು ಎಂಬುದು ಪುರುಷನ ಪ್ರಾಧಾನ್ಯತೆಯನ್ನು ಮತ್ತು ಸ್ತ್ರೀಯ ಅಪ್ರಾಧಾನ್ಯತೆ ಇಲ್ಲಿ ಒಡೆದು ಕಾಣುತ್ತದೆ.

ಸಮಾಜದಲ್ಲಿ ತನ್ನ ಸಂಪರ್ಕಕ್ಕೆ ಬಂದ ಪುರುಷರೆಲ್ಲರಿಂದಲೂ ಪೆಟ್ಟು ತಿಂದ ಶಾಂತಿ ಕೊನೆಗೆ ಪುರುಷ ವರ್ಗ ನೀಡಿದ , ಮಾನಸಿಕ ಹಿಂಸೆಗೆ ಅವಳ ಮಧುರ ಭಾವನೆಗಳೆಲ್ಲವೂ ಸುಟ್ಟು ಹೋಗುತ್ತವೆ. ಪ್ರೀತಿ , ಪ್ರೇಮ , ಮದುವೆ ಎಂಬುದು ಅವಳ ಪಾಲಿಗೆ ಕೇವಲ ಶಬ್ದಗಳಾಗುತ್ತವೆ. ಏಕೆಂದರೆ ಅವಳೊಂದಿಗೆ ಸಂಪರ್ಕ ಪಡೆದ ಯಾವ ಗಂಡೂ ಕೂಡಾ ಅವಳೂ ಒಂದು ಹೆಣ್ಣು , ಅವಳಿಗೂ ಹೃದಯವಿದೆ , ಭಾವನೆಗಳಿವೆ ಎಂಬುದನ್ನು ಲಕ್ಷ್ಯಕ್ಕೆ ತೆಗೆದುಕೊಳ್ಳುವುದಿಲ್ಲ.

ಇಲ್ಲಿ ಮುಖ್ಯವಾಗಿ ''ವೀಣಾ ಅವರು ವ್ಯಕ್ತಿಯಾಗಿ ಪಡೆದ ಅನುಭವಗಳ ನೆಲೆಯಿಂದ ನಾಗರಿಕ ಮಧ್ಯಮ ವರ್ಗದ ಜನರ ಬದುಕಿನ ಶೋಧನೆಗೆ ಯತ್ನಿಸಿದ್ದು , ವಿಶೇಷವಾಗಿದೆ. ಪುರುಷಪ್ರಧಾನ ವ್ಯವಸ್ಥೆಯನ್ನು ಶಿಕ್ಷಿತ ಸ್ತ್ರೀ ಸಂವೇದನೆಗಳ ಮೂಲಕ ಗ್ರಹಿಸುತ್ತ , ಅನುಭವ ವ್ಯಕ್ತಿ ನಿಷ್ಠ ನೆಲೆಯಿಂದಲೇ ಮಹಿಳೆಯರ ಮಾನಸಿಕ ತೊಳಲಾಟಗಳನ್ನು ಶೋಧಿಸುವ ಯತ್ನವನ್ನು ಅವರ ಈ ಗಂಡಸು ಕಾದಂಬರಿಯಲ್ಲಿ ಕಾಣಬಹುದು.೫೭ ಗಂಡಸರು ಕಾದಂಬರಿಯಲ್ಲಿ ಬರುವ 'ನಾಯಕಿ ಶಾಂತಿ ನಿಜವಾದ ಪ್ರೀತಿ ,ಸರಿಯಾದ ದಾಂಪತ್ಯದ ಜೀವನವನ್ನು ಗಂಡಿನಿಂದ ಬಯಸಿ ತನ್ನ ತಾರುಣ್ಯವನ್ನು ಪ್ರಯೋಗಕ್ಕೆ ಒಳಪಡಿಸುತ್ತಾಳೆ . ನಮ್ಮ ಸಮಾಜ ಹೆಣ್ಣಿನ ಮೇಲೆ ಹೊರಿಸಿದ ಸಾಂಪ್ರದಾಯಿಕವಾದ ಲೈಂಗಿಕ ಕಟ್ಟುಗಳನ್ನು ಮುರಿದು ನಿಲ್ಲುತ್ತಾಳೆ . ಹೀಗಾಗುವ ಮೂಲಕ ಆಕೆ ಸ್ವಾರ್ಥ ಲಾಲಸೆಯಾದ ಗಂಡಸಿಗೆ ಪ್ರತಿಕ್ರಿಯೆ ತೋರಿಸುತ್ತಾಳೆ . ಶಾಂತಿಗೆ ಆಂತರ್ಯದಲ್ಲಿ ಪ್ರೇಮದ ಭರವಸೆಯೂ ಬೇಕು ಮತ್ತು ರಕ್ಷಣೆಯೂ ಬೇಕು . ಆದ್ದರಿಂದ ಇಲ್ಲಿ ಶಾಂತಿ ಹೊಂದಿದ ನಿಲುವು ಗಟ್ಟಿಯಾಗಿ ಕಾಣಿಸದು .ಪ್ರಾರಂಭದಿಂದಲೂ ಪ್ರತಿಭಟನೆ ವ್ಯಕ್ತಪಡಿಸುತ್ತಿದ್ದ ಶಾಂತಿ ಕೊನೆಗೆ ವಿರೇಶ ಸಹಪ್ರಯಾಣಿಕನ ಜೊತೆಗೆ ಸಲುಗೆಯಿಂದಿರುವುದು ಅವಳ ನಿಲುವಿನಲ್ಲೇ ವಿರೋಧಾಭಾಸ ಎದ್ದು ಕಾಣುತ್ತದೆ.

ಇದೇ ಕಾದಂಬರಿಯುದ್ದಕ್ಕೂ ಶಾಂತಿಯ ಬಾಲ್ಯದ ಗೆಳೆಯ ಶಂಕರ, ಪ್ರೊಫೆಸರ್ ಮಂಥರ, ಸಹೋದ್ಯೋಗಿ ಸಿಂಧ ಹಾಗೂ ಕ್ರಾಂತಿಕಾರಿ ರಾಜಕಾರಣಿ ಜಾನ ಇವರೆಲ್ಲರ ಶೋಷಣೆಗೆ ಶಾಂತಿ ಗುರಿಯಾಗುವುದನ್ನು ಇಲ್ಲಿ ಕಂಡುಬರುತ್ತದೆ.

ಅಡಿಟಿಪ್ಪಣಿ:

----

೧. ಚಂದ್ರಶೇಖರ ಪಾಟೀಲ	ಸಂಕ್ರಮಣ- ಸಂಪುಟ-೨	ಪುಟ-೧೧೪
೨. ಅದೆ	ಅದೆ	ಪು-೧೧೫
೩. ಚಂದ್ರಶೇಖರ ಕಂಬಾರ	ಸಿಂಗಾರೆವ್ವ ಮತ್ತು ಅರಮನೆ	ಪು- ೩೬
೪. ಅದೆ	ಅದೆ	ಪು- ೪೯
೫. ಅದೆ	ಅದೆ	ಪು-೫೧
೬. ಅದೆ	ಅದೆ	ಪು-೫೬
೭. ಬಿ.ಎಂ.ಶರಭೇಂದ್ರಯ್ಯ	ಅನುರ ಅರಿವು	ಪು-೯೦
೮. ಚಂದ್ರಶೇಖರ ಕಂಬಾರ	ಸಿಂಗಾರೆವ್ವ ಮತ್ತು ಅರಮನೆ	ಪು-೮೦
೯. ಅದೆ	ಅದೆ	ಪು೮೦
೧೦. ಅದೆ	ಅದೆ	ಪು-೧೭೪
೧೧. ಅದೆ	ಅದೆ	ಪು-೧೯೫
೧೨. ಟಿ.ಪಿ.ಅಶೋಕ	ಸಾಹಿತ್ಯ ಸಂಪರ್ಕ	ಪು-೧೫೬
೧೩. ಸಾರ ಅಬೂಬಕ್ಕರ	ಚಂದ್ರಗಿರಿಯ ತೀರದಲ್ಲಿ	ಪು-೨೩-೨೪
೧೪. ಅದೆ	ಅದೆ	ಮುನ್ನುಡಿ
೧೫. ಉಜ್ವಲ ಹಿರೇಮಠ(ಸಂ)	ಲೇಖಕಿಯರ ಕೃತಿಗಳಲ್ಲಿ ಸ್ತ್ರೀ ಪಾತ್ರಗಳು	ಪು-೨
೧೬. ಸಾರಾ ಅಬೂಬಕ್ಕರ	ಚಂದ್ರಗಿರಿಯ ತೀರದಲ್ಲಿ	ಪು-೮೦
೧೭. ಉಜ್ವಲಹಿರೇಮಠ(ಸಂ)	ಲೇಖಕಿಯರ ಕೃತಿಗಳಲ್ಲಿ ಸ್ತ್ರೀ ಪಾತ್ರಗಳು	ಪು-೩
೧೮. ಸಾರಾ ಅಬೂಬಕ್ಕರ	ಚಂದ್ರಗಿರಿಯ ತೀರದಲ್ಲಿ	ಪು-೬೬
೧೯. ಡಾ.ಜಿ.ಎಸ್ ಆಮೂರ	ಕನ್ನಡ ಕಥನ ಸಾಹಿತ್ಯ: ಕಾದಂಬರಿ	ಪು-೪೫೪
೨೦. ಡಾ.ಬಸವರಾಜ ಸಬರದ	ಹೊಸಬೆಳಕು	ಪು-೫೮.
೨೧. ಡಾ.ಚನ್ನಣ್ಣ ವಾಲೀಕಾರ	ಕಾಳಿಗವ್ವ	ಪು-೨೬

೨೨. ಅದೆ	ಅದೆ	ಪು-೪೦
೨೩. ಅದೆ	ಅದೆ	ಪು-೪೧
೨೪. ಅದೆ	ಅದೆ	ಪು-೫೫
೨೫. ಅದೆ	ಅದೆ	ಪು-೬೭
೨೬. ಅದೆ	ಅದೆ	ಪು-೭೦
೨೭. ವೀಣಾ ಪಾಟೀಲ್ (ಸಂ)	ಸಂಕ್ರಮಣ	ಪು-೩೭.
೨೮. ಬೋಳಂತಕೋಡಿ ಈಶ್ವರಭಟ್ಟ(ಸಂ)	ಅನುಪಮಾ ಅಭಿನಂದನ	ಪು-೧೧೮
೨೯. ಅನುಪಮಾ ನಿರಂಜನರ	ಮಾಧವಿ	ಪು-೩೯
೩೦. ಅದೆ	ಅದೆ	ಪು-೩೯
೩೧. ಬೋಳಂತಕೋಡಿ ಈಶ್ವರಭಟ(ಸಂ)	ಅನುಪಮಾ ಅಭಿನಂದನ	ಪು-೧೪೪
೩೨. ಅನುಪಮಾ ನಿರಂಜನ	ಮಾಧವಿ	ಪು-೫೬
೩೩. ಅದೆ	ಅದೆ	ಪು-೫೭
೩೪. ಅದೆ	ಅದೆ	ಪು-೬೦-೬೧
೩೫.		
೩೬ ಅನುಪಮಾ ನಿರಂಜನ	ಮಾಧವಿ	ಪು-೧೧೭
೩೭. ಡಾ.ಅನುಪಮಾ ನಿರಂಜನ	ಮಾಧವಿ	ಪು-೧೭೫
೩೮. ಮಲ್ಲಿಕಾ ಘಂಟಿ	ಕನ್ನಡದಲ್ಲಿ ಮಹಿಳಾ ಕಥಾ ಸಾಹಿತ್ಯ	ಪು-೩೬೩
೩೯. ಅನುಪಮಾ ನಿರಂಜನ	ಮಾಧವಿ	ಪು-೧೮೮
೪೦. ಅದೆ	ಅದೆ	ಪು-೧೯೩
೪೧. ಅದೆ	ಅದೆ	ಪು-ಅದೆ
೪೨. ಡಾ.ವಿಜಯಶ್ರೀ ಸಬರದ	ಅನುಪಮಾ ನಿರಂಜನ ಅವರ ಕಾದಂಬರಿಗಳ ಅಧ್ಯಯನ	ಪು-೧೪೧.
೪೩. ಪಿ.ಲಂಕೇಶ್	ಅಕ್ಕ	ಪು-೪

೪೪. ಅದೆ	ಅದೆ	ಪು-೫
೪೫. ಅದೆ	ಅದೆ	ಪು-೧೮
೪೬. ಅದೆ	ಅದೆ	ಪು-೪೪
೪೭. ಅದೆ	ಅದೆ	ಪು-೪೧
೪೮. ಅದೆ	ಅದೆ	ಪು-೪೫
೪೯. ಅದೆ	ಅದೆ	ಪು-೫೦
೫೦. ವಿಕಾರಾಂತೇಶ್ವರ	ಗಂಡಸರು	ಕಾದಂಬರಿ ಚನ್ನಿಧಿ
೫೧. ಅದೆ	ಅದೆ	ಪು-೭
೫೨. ಅದೆ	ಅದೆ	ಪು-೧೦
೫೩. ಅದೆ	ಅದೆ	ಪು-೧೧
೫೪. ಅದೆ	ಅದೆ	ಪು-೧೩.
೫೫. ಅದೆ	ಅದೆ	ಪು-೫೩
೫೬. ಅದೆ	ಅದೆ	ಪು-೬೬

ಅಧ್ಯಾಯ-ನಾಲ್ಕು

ಅಧ್ಯಯನದಿಂದ ಫಲಿತವಾದ ವಿಚಾರಗಳು

ಪ್ರಬಂಧ ರಚನೆಯಲ್ಲಿ ಈ ಹಿಂದಿನ ಅಧ್ಯಾಯದಲ್ಲಿ ಅಧ್ಯಯನಕ್ಕೆ ಒಳಗುಪಡಿಸಿಕೊಂಡ ಕಾದಂಬರಿಗಳಲ್ಲಿ ಸ್ತ್ರೀ ಹೇಗೆ ವಿವೇಚನೆಗೊಂಡಿದ್ದಾಳೆ ಎಂಬುದನ್ನ ಕುರಿತು ಚರ್ಚಿಸಲಾಗಿದೆ. ಪ್ರಸ್ತುತ ಅಧ್ಯಾಯದಲ್ಲಿ ಕಾದಂಬರಿಗಳ ಜೊತೆ ಜೊತೆಗೆ ಬಹುಮುಖ್ಯ ಕ್ಷೇತ್ರಗಳಾದ ಸಾಮಾಜಿಕ, ಶೈಕ್ಷಣಿಕ,ಔದ್ಯೋಗಿಕ ಮತ್ತು ರಾಜಕೀಯ ಕ್ಷೇತ್ರಗಳ ಹಿನ್ನೆಲೆಯಲ್ಲಿ ಅವಳ ಸ್ಥಾನವನ್ನು ನೋಡಲಾಗಿದೆ. ಸಮಕಾಲೀನ ಸಮಾಜದೊಳಗೆ ಬೇರೆ ಬೇರೆ ರಂಗದೊಳಗೆ ಮಹಿಳೆ ಎಂಥ ಸ್ಥಾನದಲ್ಲಿದ್ದಾಳೆ?, ಎಂಥ ಸಮಸ್ಯೆಗಳನ್ನು ಎದುರಿಸುತ್ತಾಳೆ ಎನ್ನುವುದನ್ನು ಕಾದಂಬರಿಗಳಲ್ಲಿ ಬರುವ ಪಾತ್ರಗಳೊಂದಿಗೆ ಸಂಬಂಧೀಕರಿಸಿ ಚರ್ಚೆಮಾಡಲಾಗಿದೆ.

ಪುರುಷ ಪ್ರಧಾನವಾದ ಸಮಾಜದಲ್ಲಿ ಮಹಿಳೆಯನ್ನು ನಡೆಸಿಕೊಂಡ ರೀತಿ, ಅವಳ ಮುಂದುವರಿಕೆಗೆ ತೊಡಕಾದ ಸಮಸ್ಯೆಗಳನ್ನು ಕುರಿತು ಇಲ್ಲಿ ವಿವೇಚಿಸಲಾಗಿದೆ. ಈ ವಿವರಣೆಗಳು ಚರ್ಚೆಗಳು ಅಧ್ಯಯನಕ್ಕೆ ಪೂರಕವಾದುವುಗಳು. ಕಾರಣ ಸಮಕಾಲೀನ ವ್ಯವಸ್ಥೆ ಹೊರಳುವ ದಾರಿಯಲ್ಲಿದೆ. ಅದರ ಸೂತ್ರಗಳು ಆಶಾದಾಯಕವಾದರೂ ಫಲಿತಾಂಶ ಹಾಗಿರುವುದೆಂದು ಎಣಿಸಲು ಸಾಧ್ಯವಿಲ್ಲ. ಕಾರಣ ನಮ್ಮ ಪರಂಪರೆಯಲ್ಲಿ ಏನೆಲ್ಲ ಪಲ್ಲಟಗಳಾಗಿದ್ದರೂ ಸ್ತ್ರೀ ಬದುಕು ಸುಧಾರಿಸಿಲ್ಲ. ಅಕ್ಕಮಹಾದೇವಿಯ ಒಂಟಿದನಿ, ಹೆಣ್ಣಲ್ಲವೆ ನಿಮ್ಮನೆಲ್ಲ ಹಡೆದ ತಾಯಿ,ಹೆಣ್ಣಲ್ಲವೆ ಪೊರೆದವಳು ಎಂದು ಅಂತರಂಗಕ್ಕೆ ಕೂಗಿಟ್ಟ ಸಂಚಿಯ ಹೊನ್ನಮ್ಮರ ವಿಚಾರಗಳ ಫಲಿತ ಏನೆಂದು ನಮಗೆ ಗೊತ್ತಿದೆ. ಸಮಕಾಲೀನವಾಗಿ ಸಾಮಾಜಿಕ, ರಾಜಕೀಯ ಕ್ಷೇತ್ರಗಳಲ್ಲಿ ಅನೇಕ ಸವಲತ್ತುಗಳನ್ನು ನೀಡಲಾಗುತ್ತಿದೆ. ಅದನ್ನು ಅವರು ತಮ್ಮ 'ಹಕ್ಕು' ಎಂದು ಬೇಡುವಂತಹ ದೈನ್ಯಸ್ಥಿತಿ ಪ್ರಾಪ್ತವಾದದು ದೊಡ್ಡದುರಂತ. ಸಮಕಾಲೀನ ಸ್ತ್ರೀಚಿಂತಕರು ನಮಗೆ 'ಸಮಾನ ನಾಗರಿಕ'ಳನ್ನಾಗಿ ಕಾಣಬೇಕೆಂದು ಹೇಳುತ್ತಿದ್ದಾರೆ. ಬದಲಾಗಿ ಈಗಿರುವ ಪುರುಷನ ಅನುಕಂಪ ಸ್ವರೂಪದ ಸವಲತ್ತು-

ಗಳ ಅವಶ್ಯಕತೆ ಬೇಕಾಗಿಲ್ಲ ಎಂದು ದನಿ ಎತ್ತಿದ್ದಾರೆ. ಸ್ತ್ರೀ ಬಗೆಗಿನ ವಿಚಾರಗಳು ಕೇವಲ ಗ್ರಾಂಥಿಕವಾಗದೆ ವೈಚಾರಿಕವಾಗಬೇಕು. ಆಗ ಮಾತ್ರ ಲಿಂಗಭೇದ ಸಮಸ್ಯೆಗೆ ಒಂದು ಪರಿಹಾರ ಕಾಣುವುದಕ್ಕೆ ಸಾಧ್ಯ ಎಂಬ ಹಿನ್ನೆಲೆಯಲ್ಲಿ ಇಲ್ಲಿ ಪರಿಶೀಲಿಸಲಾಗಿದೆ.

೧. ಶೈಕ್ಷಣಿಕ ಕ್ಷೇತ್ರ

ಶಿಕ್ಷಣ ಸಾಮಾಜಿಕ ಬದಲಾವಣೆಗೆ ಒಂದು ಶಕ್ತಿಶಾಲಿ ಸಾಧನವಾಗಿದೆ. ದಾರಿದ್ರ್ಯದ ರೇಖೆಯಿಂದ ಕೆಳಗೆ ಬದುಕುತ್ತಿರುವ ಭಾರತೀಯ ಜನಸಾಮಾನ್ಯರ ಬದುಕಿಗೆ ಇಂದು ನೀಡುವ ಮತ್ತು ಅವರಲ್ಲಿ ಜಾಗೃತಿಯನ್ನುಂಟು ಮಾಡುವ, ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸಿ ರಾಷ್ಟ್ರ ನಿರ್ಮಾಣದಲ್ಲಿ ಪರಿಣಾಮಕಾರಿಯಾಗಿ ಪಾಲ್ಗೊಳ್ಳುವಂತೆ ಮಾಡುವ ಬಹುದೊಡ್ಡ ಜವಾಬ್ದಾರಿ ಶಿಕ್ಷಣ ಮೇಲಿದೆ. ಈ ಕಾರಣಕ್ಕಾಗಿಯೇ ನಮ್ಮ ಪ್ರಾಚೀನರು ಶಿಕ್ಷಣಕ್ಕೆ ಮಹತ್ವದ ಸ್ಥಾನ ಕಲ್ಪಿಸಿಕೊಟ್ಟಿದ್ದಾರೆ.

ಈ ಹಿನ್ನೆಲೆಯಲ್ಲಿ ಶಿಕ್ಷಣದ ಮಹಿತಿಯನ್ನು ಸಮರ್ಥಿಸಲು 'ನಹಿಜ್ಞಾನೇನ ಸದೃಶಂ', 'ವಿದ್ಯಾ ವಿಹೀನ ಪಶು ಸಮಾನ', 'ವಿದ್ಯೆಯಿಲ್ಲದವನ ಬಾಳು, ಹದ್ದಿಗಿಂತಲೂ ಕೀಳು' ಎಂಬ ನೀತಿಬೋಧನೆಗಳು ಹಾಗೂ ಈ ಕೆಳಗಿನ ಪದ್ಯವು ಶಿಕ್ಷಣದ ಮಹತ್ವವನ್ನು ಸಾರುತ್ತದೆ.

ಮಕ್ಕಳಿಗೆ ಕಂಡ ಬಾಲ್ಯದೊ
ಳಕ್ಕರ ವಿದ್ಯೆ ಕಲಿಸದಿರ್ದೊಡೆ ಕೊಂದಂ
ಲಕ್ಕ ಧನವಿರಲು ಕೆಡುಗುಂ.
ಬಕ್ಕಂದಿವಾ ವಿದ್ಯೆ ಪೊರೆಗೊಂಬುದಾರತ್ನ.

ಎಂಬ ವಾಕ್ಯಗಳು ಶಿಕ್ಷಣದ ಪ್ರಾಮುಖ್ಯತೆಯನ್ನು ಮನಗಾಣಲು ಸೃಷ್ಟಿಗೊಂಡಿರಬೇಕು ಎನಿಸುತ್ತದೆ. ಶಿಕ್ಷಣ ಮನುಷ್ಯನನ್ನು ಕತ್ತಲೆಯಿಂದ ಬೆಳಕಿನೆಡೆಗೆ ಕರೆದೊಯ್ಯುತ್ತದೆ. ಸಮಾಜದ ವೈಷಮ್ಯತೆಗೆ ಅನಿಷ್ಟ ಸಂಪ್ರದಾಯಗಳಿಗೆ ಶಿಕ್ಷಣವು ಮಜಬೂತಾದ ಅಸ್ತ್ರವಾಗಿ ಪರಿಣಮಿಸುತ್ತದೆ.

ವೇದ ಕಾಲದಲ್ಲಿ ಸ್ತ್ರೀಯರಿಗೂ ವಿದ್ಯಾಭ್ಯಾಸ ನೀಡಲಾಗುತ್ತಿತ್ತು ಎಂಬ ಉಲ್ಲೇಖಗಳಿವೆ. ಆದರೂ ಅಂದು ಗಾರ್ಗಿ,

ಮೈತ್ರೇಯಿಯಂಥವರು ಸಿಗುವರು ಕೇವಲ ಬೆರಳೆಣಿಕೆಯಷ್ಟು ಮಾತ್ರ. ಈ ಒಂದು ಆಧಾರದಿಂದ ವೇದಕಾಲದಲ್ಲಿ ಸ್ತ್ರೀ ಶಿಕ್ಷಣ ಸಾರ್ವತ್ರಿಕವಾಗಿತ್ತೆಂಬುದನ್ನು ಒಪ್ಪುವುದು ಕಷ್ಟವೆನಿಸುತ್ತದೆ. ''ಪ್ರಾಚೀನ ಭಾರತದ ವಿಶ್ವವಿದ್ಯಾಲಯಗಳಲ್ಲಿ ಯಾವ ವಿದ್ಯಾರ್ಥಿನಿಯೂ ಅಧ್ಯಯನ ಮಾಡಿದಂತೆ ಕಂಡು ಬಂದಿಲ್ಲವಾದರೂ, ರಾಜಮನೆತನದ ಸ್ತ್ರೀಯರು, ದೊಡ್ಡ ಅಧಿಕಾರಿಗಳ ಮಹಿಳೆಯರು ತಕ್ಕಮಟ್ಟಿಗೆ ವಿದ್ಯಾವತಿಯರಾಗಿದ್ದರು'' (ಭಾರತ ಭೂಷಣ -ನವೀನ ಶಿಕ್ಷಣ ; ಪು-೧೦೫) ಅಂದರೆ ಇವತ್ತಿನಂತೆ ಪ್ರಾಚೀನ ಕಾಲದಲ್ಲಿಯೂ ಶಿಕ್ಷಣ ಉಳ್ಳವರ ಸೊತ್ತಾಗಿರುವುದನ್ನು ನಾವು ಗಮನಿಸಬಹುದು.

ಮಧ್ಯಯುಗವು ಸ್ತ್ರೀಯರ ಪಾಲಿಗೆ ಕತ್ತಲೆಯ ಯುಗವೆಂದೇ ಹೇಳಬೇಕು. ಅಂದು ಸ್ತ್ರೀಯರಿಗೆ ವಿಧಿ ನಿಷೇಧಗಳ ಶೃಂಖಲೆಯಲ್ಲಿ ಬಂಧಿಸಲಾಗಿತ್ತು. ಶಿಕ್ಷಣವಂತೂ ಅವರಿಂದ ಬಹುದೂರದಲ್ಲಿತ್ತು. ಸ್ತ್ರೀಯರು ಬಗೆಗಿರುವ ನಿಷೇಧಾತ್ಮಕ ಧೋರಣೆಗಳು ಕೇವಲ ಭಾರತಕ್ಕಷ್ಟೇ ಸೀಮಿತವಾಗಿರಲಿಲ್ಲ. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಮಹಿಳೆಯರನ್ನು ದ್ವಿತೀಯ ದರ್ಜೆಯ ಪೌರರನ್ನಾಗಿ ಗಣಿಸಲಾಗಿದೆ ಎಂಬುದು ತಿಳಿಯಬಹುದು. ಫ್ರಾನ್ಸ್, ರಷ್ಯಾ, ಅರಬ ದೇಶಗಳಲ್ಲಿ ಮಧ್ಯಯುಗದಲ್ಲಿ ಸ್ತ್ರೀಯರಿಗೆ ಶಿಕ್ಷಣ ಸೌಲಭ್ಯವಿರಲಿಲ್ಲವೆಂದು ಉಲ್ಲೇಖಗಳಿವೆ. ಶಿಕ್ಷಣದ ಮಹತ್ವವನ್ನು ಯಾರೂ ಅಲ್ಲಗಳೆಯುವಂತಿಲ್ಲ. ರಾಷ್ಟ್ರದ ಪ್ರಗತಿಗೆ ಪ್ರಜೆಗಳ ವಿವೇಚನಾಯುತ ಚಿಂತನೆಗೆ, ಪರಸ್ಪರ ಅರಿವಿಗೆ, ಬದಲಾವಣೆಗೆ, ಶಿಕ್ಷಣ ಅತ್ಯವಶ್ಯಕ. ಅದರಲ್ಲೂ ಮಹಿಳೆಯರಿಗಂತೂ ಈ ರಂಗದಲ್ಲಿ ಮೊದಲ ಆದ್ಯತೆ ನೀಡಬೇಕು. ದೈನಂದಿನ ಬದುಕಿನ ಆಗು-ಹೋಗುಗಳಿಗೆ, ಸ್ಪಂದಿಸುವ ಸಾಮರ್ಥ್ಯಕ್ಕೆ ಶಿಕ್ಷಣ ಬೇಕೇ ಬೇಕು. ''ಭಾರತದ ಮಹಿಳೆಗೆ ಶಿಕ್ಷಣ ದೊರಕದೆ ರಾಷ್ಟ್ರದ ಉದ್ಧಾರ ಸಾಧ್ಯವಿಲ್ಲ; ಅವಳು ಸ್ವಾವಲಂಬಿಯೂ, ದಕ್ಷಳೂ ಆಗಬೇಕು'' (ಒಡೆಯರ ಡಿ. ಹೆಗ್ಗಡೆ - ಜ.ನೆಹರೂ ಮತ್ತು ಭಾರತೀಯ ಮಹಿಳೆ ; ಪು-೧೨) ಎಂದು ಪಂಡಿತ ಜವಹರಲಾಲ ನೆಹರೂರವರು ಮಹಿಳಾ ಶಿಕ್ಷಣದ ಪ್ರಾಮುಖ್ಯತೆಯನ್ನು ಹೇಳಿದ್ದಾರೆ. ಶತಶತಮಾನಗಳಿಂದ ಅಜ್ಞಾನಾಂಧಃಕಾರ, ಮೌಢ್ಯತೆ, ದಾರಿದ್ರ್ಯದಕೂಪದಲ್ಲಿ ಮುಳುಗಿದ ಭಾರತೀಯ ಬಡವರ್ಗದ ಜನತೆ ಶಿಕ್ಷಣದ ಕಡೆಗೆ ಕಣ್ಣುಹಾಯಿಸಿಯೇ ಇಲ್ಲ! ಕಾರಣ, ಅವರು ತಮ್ಮ ಕುಟುಂಬ ನಿರ್ವಹಣೆಯಲ್ಲಿಯೇ ಕಾಲಕಳೆಯುತ್ತಾರೆ, ಜೊತೆಗೆ ಆರ್ಥಿಕ ಮುಗ್ಗಟ್ಟು ಸಹ ಈ ವಿಷಯದಲ್ಲಿ ಅವರಿಗೆ ತೊಡಕನ್ನು ಉಂಟುಮಾಡುತ್ತಲೇ ಬಂದಿದೆ. ಶಿಕ್ಷಣ ಸರ್ವರಿಗೂ ದೊರೆಯದೇ ಇರುವುದಕ್ಕೆ

ಪುರುಷವರ್ಗದ ಸಂಚೇ ಮುಖ್ಯ ಕಾರಣ ಎಂಬುದು ಖಚಿತ ಸಂಗತಿ.

'ಕೆಳವರ್ಗದ ಜನತೆ ವಿದ್ಯಾಭ್ಯಾಸಮಾಡಬಾರದು, ಅವರಿಗೇಕೆ ಶಿಕ್ಷಣ' ಎಂಬ ಅಭಿಪ್ರಾಯವನ್ನ ಮೇಲ್ವರ್ಗದ ಜನತೆ ಕೆಳವರ್ಗದವರನ್ನು ಶಿಕ್ಷಣ ರಂಗದಿಂದ ದೂರವಿಟ್ಟರು. ಪುರುಷರೆ ವಿದ್ಯಾಭ್ಯಾಸದಿಂದ ವಂಚಿತರಾದ ಮೇಲೆ, ಪುರುಷರಿಗಿಂತಲೂ ಕೆಳಸ್ತರದಲ್ಲಿರುವ ಸ್ತ್ರೀಗೆ ಕೇಳುವವರೆ ಇಲ್ಲ. ಹೀಗೆ ಸ್ತ್ರೀ ಶಿಕ್ಷಣರಂಗದಿಂದ ಹಿಡಿದು ನಿಂತಾಗ, ಅವಳ ಬೌದ್ಧಿಕ ವಿಕಾಸ ಕುಂಠಿತಗೊಳ್ಳುತ್ತದೆ. ಅಲ್ಲದೆ ಸಾರ್ವಜನಿಕ ಬದುಕಿನಿಂದಲೂ ಹೊರಗಳೆಯುತ್ತಾಳೆ. ಅವಳಿಗೆ ಅವಳ ಕುಟುಂಬವೇ ಪ್ರಪಂಚವಾಗಿ ಪರಿಣಮಿಸುತ್ತದೆ.

ಈ ಹೊತ್ತಿನಲ್ಲಿ ಭಾರತೀಯ ಅನೇಕ ಚಿಂತಕರು, ಸಮಾಜ ಸುಧಾರಕರು, ಸ್ತ್ರೀ ಶಿಕ್ಷಣದ ಬಗ್ಗೆ ಕೂಗೆಬ್ಬಿಸಿದರು. ಅಲ್ಲದೇ ಪುರುಷರಂತೆ ಸ್ತ್ರೀಯರಿಗೂ ಶಿಕ್ಷಣ ನೀಡಬೇಕೆಂದು ವಾದಿಸಿದರು. ಮಹಿಳೆಯ ವಿದ್ಯಾಭ್ಯಾಸಕ್ಕೆ ಒತ್ತುಕೊಟ್ಟು ಹೋರಾಡಿದವರಲ್ಲಿ ಈಶ್ವರಚಂದ್ರ ವಿದ್ಯಾಸಾಗರ ಮತ್ತು ರಾಜಾರಾಂ ಮೋಹನರಾಯರು, ಜ್ಯೋತಿಬಾ ಫುಲೆ ಪ್ರಮುಖರು. ೧೮೮೨ರಲ್ಲಿ ಭಾರತೀಯ ಶಿಕ್ಷಣ ಆಯೋಗವು ಮಹಿಳಾ ಶಿಕ್ಷಣವನ್ನು ಜಾರಿಗೆ ತಂದಿತು. ಈ ಮಹತ್ವಪೂರ್ಣ ಸಾಧನೆಯು ರಿಪನ್ ವಿಲಿಯಂ ಬೆಂಟಿಂಕನಿಗೆ ಸಲ್ಲುತ್ತದೆ. ಒಂದು ಜನಾಂಗಕ್ಕೆ ಸೀಮಿತವಾದ ಶಿಕ್ಷಣ, ಸಾರ್ವತ್ರಿಕಗೊಂಡಿತೇನೋ ನಿಜ, ಆದರೆ ಅದು ಪುರುಷ ಪ್ರಧಾನವಾಗಿ ರೂಪತಳೆಯಲ್ಪಟ್ಟಿತ್ತು.

'ಹೆಣ್ಣು ಎಷ್ಟು ಕಲಿತರೂ ಮುಸುರೆ ತಿಕ್ಕುವ ಕೆಲಸ ತಪ್ಪುವುದಿಲ್ಲ' ಅವಳಿಗೇಕೆ ಶಿಕ್ಷಣ ನೀಡಬೇಕೆಂಬ ಮನೋಭಾವನೆ ಪುರುಷರಲ್ಲಿ ಬೇರೂರಿದೆ. ಒಂದು ವೇಳೆ ಓದಿಸಿದರೂ ಕೇವಲ ಅವಳು ಪತ್ರಬರೆಯಲು, ಓದಲು ಮಾತ್ರ ಸೀಮಿತಳಾಗುತ್ತಾಳೆ. ಮುಂದಿನ ಶಿಕ್ಷಣ ಅವಳಿಗೆ ದಕ್ಕುವುದೇ ಇಲ್ಲ. ಶಿಕ್ಷಣ ವ್ಯಕ್ತಿಗೆ ಧೈರ್ಯವನ್ನು, ಶಕ್ತಿಯನ್ನು ತಂದು ಕೊಡುತ್ತದೆ. ಆದ್ದರಿಂದ ಮಹಿಳೆ ಶಿಕ್ಷಣ ಪಡೆದರೆ ಅವಳು ಪುರುಷರ ಸರಿ ಸಮನಾಗಿ ನಿಲ್ಲಬಲ್ಲಳೆಂಬ ಭೀತಿ ಪುರುಷ ವರ್ಗಕ್ಕೆ ಕಾಡುತ್ತಿರಬೇಕೆನಿಸುತ್ತದೆ. ಅಲ್ಲದೇ ಹೆಚ್ಚು ಓದಿದರೆ ಗಂಡು ಸಿಗುವುದಿಲ್ಲವೆಂಬ ಭಯವೂ ಕಾಡುತ್ತದೆ. ಹೊರಗೆ ಕಳಿಸಲು ಅಭದ್ರತೆಯ ಭಯ, ಶಿಕ್ಷಿತಳಾದರೆ ವಿವಾಹದ ಭಯ ಎಂದು ಮುಂತಾಗಿ

ಸಮಸ್ಯೆಗಳನ್ನು ಕಲ್ಪಿಸಿಕೊಳ್ಳುವ ವ್ಯವಸ್ಥೆ 'ಸ್ತ್ರೀ ಶಿಕ್ಷಣ ಒಂದು ಸಮಸ್ಯೆಯಾಗಿದೆ.

ಇಷ್ಟೆಲ್ಲ ಇದ್ದರೂ ಇಂದು ಶೈಕ್ಷಣಿಕ ಫಲಿತಾಂಶಗಳನ್ನು ಗಮನಿಸಿದಾಗ ಎಲ್ಲದರಲ್ಲೂ ಸ್ತ್ರೀಯರೇ ಮುಂದೆ ಇರುವುದು ಸ್ಪಷ್ಟ. ಅವಕಾಶ ಸಿಕ್ಕಲ್ಲಿ ತಾವು ಏನೆಲ್ಲ ಸಾಧಿಸಬಲ್ಲೆವು ಎಂಬುದನ್ನು ಸೀಮಿತ ಅವಕಾಶದಲ್ಲಿಯೇ ಅವರು ಸಾಧಿಸಿ ತೋರಿಸಿದ್ದಾರೆ. ಪ್ರಸ್ತುತ ಸಂದರ್ಭದಲ್ಲಿ ವರ್ಗಭೇದ ಲಿಂಗಭೇದವಿಲ್ಲದೇ ಶಿಕ್ಷಣ ಸಿಗಲಾಗುತ್ತಿದೆಯಾದರೂ ಗ್ರಾಮೀಣ ಪ್ರದೇಶಗಳಲ್ಲಿ ಜನತೆ ಈ ದಿಕ್ಕಿನಲ್ಲಿ ತೆರೆದುಕೊಂಡಿಲ್ಲ ಹೆಣ್ಣಿನ ಶಿಕ್ಷಣದ ಅವಶ್ಯಕತೆ ಅವರಿಗೆ ಮನವರಿಕೆಯಾಗದೆ ಇರುವುದು ದುರಂತದ ಸಂಗತಿಯಾಗಿದೆ. ಪುರುಷವರ್ಗ ಪೂರ್ವಗ್ರಹ ಪೀಡಿತರಾಗದೆ ವೈಚಾರಿಕ ನೆಲಗಟ್ಟಿನಲ್ಲಿ ವಿಚಾರ ಯೋಚಿಸಬೇಕು. 'ಮನೆಯೇ ಮೊದಲ ಪಾಠಶಾಲೆ ಜನನಿ ತಾಯೇ ಮೊದಲ ಗುರುವು' ಎಂಬ ಮಾತು ಅತ್ಯಂತ ಅರ್ಥಪೂರ್ಣವಾದುದು. ತಾಯಿಯಾದವಳು ಶಿಕ್ಷಣ ಪಡೆದಿದ್ದರೆ, ಅವಳು ಇಡೀ ಕುಟುಂಬವನ್ನೇ ವಿದ್ಯಾವಂತ ಕುಟುಂಬವನ್ನಾಗಿ ಪರಿವರ್ತಿಸುತ್ತಾಳೆ. ಆದ್ದರಿಂದಲೇ 'ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ' ಎಂಬ ಘೋಷಣೆಯೊಂದು ಪ್ರತಿಧ್ವನಿಗೊಳ್ಳುತ್ತಲಿದೆ.

ಶೈಕ್ಷಣಿಕ ಕ್ಷೇತ್ರಕ್ಕೆ ಎಲ್ಲವರ್ಗದ ಮಹಿಳೆಯರು ಸಾಮಾನ್ಯವಾಗಿ ಮೈಚಳಿಬಿಟ್ಟು ಹೊರಬಂದಿದ್ದಾರೆ, ಬರುತ್ತಿದ್ದಾರೆ. ಆದರೆ ಮುಸ್ಲಿಂ ಮಹಿಳೆಯರು ಶಿಕ್ಷಣದಿಂದ ಹಿಂದುಳಿದಿರುವುದು ಕಂಡು ಬರುತ್ತದೆ. ಈ ಅಡಚಣೆಗೆ ಧಾರ್ಮಿಕ ಕಟ್ಟುಗಳು ಕಾರಣವೇನೋ ಎಂಬ ಗುಮಾನಿ ಕಾಡುತ್ತಲಿದೆ. ಮಹಿಳಾ ಶಿಕ್ಷಣಕ್ಕೆ ಮೂಲಭೂತವಾದಿಗಳ ನಂಬಿಕೆ ಮಾರಕವಾಗಿದೆ. ಸ್ತ್ರೀ ಮನೆಯಲ್ಲಿಯೇ ಇರಬೇಕು, ಘೋಷಾ ಪದ್ಧತಿಯನ್ನು ಕಡ್ಡಾಯವಾಗಿ ಪಾಲಿಸಬೇಕು ಎಂಬ ಧಾರ್ಮಿಕ ನಂಬಿಗೆ ಇಲ್ಲಿ ಮಹಿಳಾ ಶಿಕ್ಷಣಕ್ಕೆ ಕಂಟಕವಾಗಿದೆ. ಮುಸ್ಲಿಂ ಮಹಿಳೆ ಒಂಟಿಯಾಗಿ ಹೊರಗಡೆ ಹೋಗುವುದೇ ದುಸ್ತರವಾದಾಗ, ಅವಳು ಶಾಲೆಗೆ ಹೋಗಿ ಕಲಿಯುವುದಂತೂ ಕನಸಿನ ಮಾತೆ ಸರಿ! ಧಾರ್ಮಿಕ ಶಿಕ್ಷಣದಲ್ಲಿ ಅವಳು ಕೇವಲ ಖುರಾನ ಓದಿದರೆ ಸಾಕು. ಹೆಚ್ಚಿನ ವಿದ್ಯಾಭ್ಯಾಸದ ಅವಶ್ಯಕತೆ ಅವಳಿಗಿಲ್ಲ ಎಂಬ ಭಾವನೆ ಪುರುಷರಲ್ಲಿದೆ. ಬಂಧ್ಗಿರಿಯ ತೆರದಲ್ಲಿನ ಮಹಿಳಾ ಶಿಕ್ಷಣದಿಂದ ವಂಚಿತಳಾದ ಹೆಣ್ಣು, ಒಂದು ಕಡೆ ಧಾರ್ಮಿಕ ಕಟ್ಟಳೆ ಅವಳ ಶಿಕ್ಷಣಕ್ಕೆ ಅಡ್ಡಿಯಾದರೆ, ಇನ್ನೊಂದು ಆರ್ಥಿಕ ಅಭದ್ರತೆಯೂ ನಾರಿಯರ ಶಿಕ್ಷಣಕ್ಕೆ

ಮುಳುವಾಗುತ್ತದೆ.

ಶಿಕ್ಷಣ ಪಡೆದುಕೊಂಡು ಶಾಂತ ಕೆಲವು ದಿಕ್ಕಿನಲ್ಲಿ ಬೆಳೆಯುವುದನ್ನು ನಾವಿಲ್ಲಿ ಗಮನಿಸಬಹುದು. ವೈಚಾರಿಕ ಪ್ರಜ್ಞೆಗೆ ಶಿಕ್ಷಣವೇ ಬುನಾದಿ. ಚಿಂತನೆ, ತಾರ್ಕಿಕತೆ, ಧೈರ್ಯಗಳು ಶಿಕ್ಷಣದಿಂದಲೇ ಹುಟ್ಟಿಕೊಳ್ಳುತ್ತವೆ. ಶಾಂತ ಒಂದು ವೇಳೆ ವಿದ್ಯೆ ಪಡೆದುಕೊಂಡಿರದಿದ್ದರೆ ಸ್ವಾವಲಂಬನೆಯಿಂದ ಬದುಕಲಾಗುತ್ತಿರಲಿಲ್ಲ. ಅವಳು ಗಳಿಸಿದ ವಿದ್ಯೆ, ಅವಳ ಬದುಕಿಗೆ ಆಧಾರವಾಗಿ ನಿಲ್ಲುತ್ತದೆ. ಆರ್ಥಿಕ ಭದ್ರತೆಯೊಂದು ಇದ್ದರೆ ಇಲ್ಲಿಯಾದರೂ ಬದುಕ ಬಲ್ಲೆನೆಂಬ ಧೈರ್ಯ ಅವಳಲ್ಲಿ ಗಂಭೀರವಾಗಿದೆ. ಕೆಲವು ಪುರುಷರಿಂದ ವಂಚನೆಗೊಳಗಾದ ಶಾಂತ ಅವರನ್ನು ದ್ವೇಷಿಸುವ ಗೋಜಿಗೆ ಹೋಗದೆ ನಿರ್ಲಿಪ್ತಳಾಗುತ್ತಾಳೆ. ಕೇವಲ ಪುರುಷರಂತೆ ಅವಳೂ ಲೈಂಗಿಕ ಸ್ವಾತಂತ್ರ್ಯ ಅನುಭವಿಸುವುದು ವಿಶಿಷ್ಟ-ವೆನಿಸುತ್ತದೆ. ಆದ್ದರಿಂದ ಶಾಂತ ಇಲ್ಲಿ ರೂಪಿಸಿಕೊಂಡ ವ್ಯಕ್ತಿತ್ವ ವಿಲಕ್ಷಣವಾಗಿ ಕಾಣುತ್ತದೆ. ಶೀಲ, ಚಾರಿತ್ರ್ಯದಂಥ ಮೌಲ್ಯಗಳು ನಮ್ಮಲ್ಲಿ ಪರಂಪರಾಗತವಾಗಿ ಬೆಳೆದು ಬಂದವು, ಶಾಂತ ಈ ಮೌಲ್ಯಗಳನ್ನು ತಿರುವು-ಮುರುವು ಮಾಡಿದ್ದು ಪುರುಷ ನಿರ್ಮಿತ ಮೌಲ್ಯ ವ್ಯವಸ್ಥೆಗೆ ಕೊಡಲಿಪೆಟ್ಟು ನೀಡುತ್ತದೆ. ಶಿಕ್ಷಣ ಸಂಪ್ರದಾಯವನ್ನು ಪೋಷಿಸು-ತ್ತಿರುವುದು ಒಂದು ದುರಂತವಾದರೆ, ಪ್ರತಿಭಟನೆ ವೈಚಾರಿಕವಾಗದೇ ಹೋದರೆ ಅದು ನೈತಿಕ ಅಧಃಪತನಕ್ಕೆ ಕಾರಣ-ವಾಗುತ್ತದೆ. ಅವಳ ವಿಚಾರಗಳಿಂದ ಅವಳಿಗೆ ಮತ್ತೊಂದು ಜವಾಬ್ದಾರಿ ಬರುತ್ತದೆ. ಇಲ್ಲಿಯೂ ಪುರುಷ ಸ್ವತಂತ್ರ-ನಾಗುವುದು ಗಮನಾರ್ಹ. 'ಕಾಮದ ಬೋಂಬೆಯನಿಸಿದ ಸ್ತ್ರೀ ಕಾಮವನ್ನು ಗೆಲ್ಲುವ ಸಾಧ್ಯತೆ ಅನಿವಾರ್ಯವೆಂಬ ದನಿ ಕಾದಂಬರಿಯಲ್ಲಿ ಸ್ಪಷ್ಟವಾಗಿದೆ.

ಹುಲಿಗೆವ್ವ ಮತ್ತು ದೇವಿಯರಿಗೆ ಶಿಕ್ಷಣದ ಸ್ಪರ್ಶವೇ ಇಲ್ಲ. ಕುಗ್ರಾಮವೊಂದರಲ್ಲಿ ಜೀವನ ಸಾಗಿಸುವ ಸಹಸ್ರ ಸಹಸ್ರ ಮಹಿಳೆಯರನ್ನು ಹುಲಿಗೆವ್ವ ಪ್ರತಿನಿಧಿಸುತ್ತಾಳೆ. ದೇವಿ ಶಿಕ್ಷಣ ಹೊಂದದೆ ಇದ್ದರೂ, ಕ್ಯಾತನಿಗೆ ವಿದ್ಯೆ ಕೊಡಿಸುವ ಪ್ರಯತ್ನ ಮಾಡುತ್ತಾಳೆ. ನಗರ ಜೀವನದ ನೆರಳಿನಲ್ಲಿ ಬಾಳುವ ಅವಳು ಶಿಕ್ಷಣದ ಮಹತ್ವ ಅರಿತುಕೊಂಡು ಕ್ಯಾತನಿಗೆ ಹೊಸ ಬದುಕಿಗೆ ತೆರೆದುಕೊಳ್ಳಲು ಕಾನ್ವೆಂಟಿಗೆ ಕಳಿಸುವುದು ಆಶಾದಾಯಕವಾದ ಸಂಗತಿ. ಅವಳಿಗೆ ತನ್ನ ಸ್ಥಿತಿಯ ಬಗ್ಗೆ ಸ್ಪಷ್ಟ ಅರಿವು ಹಾಗೂ ಜೀವನದ ಸುರಕ್ಷೆಯ ಬಗ್ಗೆ ಖಚಿತ ತಿಳಿವಳಿಕೆ ಇದೆ. ಸಂಪ್ರದಾಯಕವಾಗಿ

ನಡೆದು ಬಂದ ನೀತಿ ನಡವಳಿಕೆಗಳು ಇಡೀ ಮಹಿಳಾ ಸಮುದಾಯದ ಮೇಲೆ ತಮ್ಮ ಅಜ್ಞಾನದ ಕಪ್ಪುನೆರಳನ್ನು ಚೆಲ್ಲಿವೆ. ಹೆಣ್ಣು ನಾಲ್ಕು ಗೋಡೆಗಳ ಮಧ್ಯದಲ್ಲಿಯೇ ಇರಬೇಕು, ಅವಳಿಗೆ ಶಿಕ್ಷಣ ಕೊಡಿಸುವ ಅಗತ್ಯವಿಲ್ಲವೆಂಬ ಮನೋಭಾವನೆ ಸಂಪ್ರದಾಯಸ್ಥ ಮನಸ್ಸುಗಳಲ್ಲಿ ಆಳವಾಗಿ ಬೇರುಬಿಟ್ಟಿದೆ. ಹೆಣ್ಣಿಗೆ ಶಿಕ್ಷಣ ನೀಡಿದರೆ ಅವಳು ಸ್ವೇಚ್ಛಾಜೀವನ ನಡೆಸುತ್ತಾಳೆಂಬ ಪೂರ್ವಗ್ರಹ ಪೀಡಿತ ಯೋಚನೆಗಳು ಮಹಿಳಾ ಶಿಕ್ಷಣ ವಂಚನೆಗೆ ಕಾರಣವಾಗಿದೆ.

೨. ಔದ್ಯೋಗಿಕ ಕ್ಷೇತ್ರ:

'ಉದ್ಯೋಗಂ ಪುರುಷ ಲಕ್ಷಣಂ' ಎಂಬ ಗಾದೆಯೊಂದು ರೂಢಿಗೊಂಡಿದೆ. ನಮ್ಮ ಸಮಾಜದಲ್ಲಿ ಉದ್ಯೋಗ ಮಾಡುವುದು ಪುರುಷರಿಗಷ್ಟೇ ಗುತ್ತಿಗೆ ಎಂಬಂತೆ ಪುರುಷವರ್ಗ ಭಾವಿಸಿಕೊಂಡಿದೆ. ನಮ್ಮದು ಪಿತೃಪ್ರಧಾನ ವ್ಯವಸ್ಥೆಯಾಗಿರುವುದರಿಂದ ಗಾದೆ, ಒಗಟು, ಸಾಹಿತ್ಯಗಳು ಪುರುಷನನ್ನು ವೈಭವೀಕರಿಸಿಯೂ, ಸ್ತ್ರೀಯನ್ನು ಗೌಣಗೊಳಿಸಿಯೂ ಇಂಥ ವ್ಯಾಖ್ಯೆಗಳು ಸೃಷ್ಟಿಗೊಂಡಿವೆ. ಈ ಕುರಿತು ಯೋಚಿಸಬೇಕಾದುದು ವಿಚಾರಾರ್ಹ.

ಮಹಿಳೆಯರಲ್ಲಿ ಹೆಚ್ಚಾಗಿ ಮನೆಯ ಹೊಗೆ ಹೊತ್ತುವರೇ ಜಾಸ್ತಿ. ಮನೆಯೇ ಅವಳಿಗೆ ಪ್ರಪಂಚ! ಮನೆಗೆಲಸಕ್ಕೂ ಗೃಹಿಣಿಗೂ ಬಿಡದ ನಂಟು. ಹೆಣ್ಣು ಗೃಹಕೃತ್ಯಕ್ಕಷ್ಟೇ ಯೋಗ್ಯಳು. ಹೊರಗಿನ ಯಾವ ಕೆಲಸಕ್ಕೂ ಅವಳು ಅನರ್ಹಳು ಎಂಬ ಭಾವನೆ ಪುರುಷ ಸಮಾಜದಲ್ಲಿದೆ. ಗೃಹಕೃತ್ಯ ಕನಿಷ್ಟವಾದುದೆಂದು ನಮ್ಮ ಸಮಾಜ ಪರಿಭಾವಿಸಿದೆ. ಆದರೆ ಅಮೇರಿಕಾದಂಥ ಪಾಶ್ಚಾತ್ಯ ರಾಷ್ಟ್ರಗಳಲ್ಲಿ 'ಗೃಹಿಣಿಗೆ' ಅತ್ಯಂತ ಮಹತ್ವದ ಸ್ಥಾನವಿದೆ ಎಂದು ಹೇಳಲಾಗುತ್ತದೆ. 'ಗೃಹಿಣಿ' ಎಂದರೆ ಅಭಿಮಾನದ ಮತ್ತು ಗೌರವದ ಸ್ಥಾನವೆಂದು ಅಲ್ಲಿಯ ಮಹಿಳೆ ಸಮಾಜದಲ್ಲಿ ಭಾವನೆಯಿದೆ.

ಸ್ತ್ರೀ ಮಾಡುವ ಕೆಲಸಗಳು ಪುರುಷ ಮಾಡುವ ಕೆಲಸಗಳಿಗೆ ಸಮಾನವಲ್ಲವೆಂಬ ನಂಬಿಕೆ ನಮ್ಮ ಸಮಾಜದಲ್ಲಿ ಇದೆ. ಮಹಿಳೆ ಪುರುಷರಿಗೆ ಸರಿಸಮಾನವಾಗಿ ದುಡಿದರೂ ಅವಳನ್ನು ಅಲಕ್ಷಿಸಲಾಗುತ್ತದೆ. ಪುರುಷನ ನೆರವಿಲ್ಲದೆ ಮಹಿಳೆ ಕೆಲಸ ಮಾಡಿ ಬದುಕಬಲ್ಲಳೆಂಬ ಧೈರ್ಯದಿಂದ ಇದ್ದರೂ, ಅವಳಿಗೆ ಗಂಡಸಿನ ಭದ್ರತೆ ಬೇಕೆಂದು, ತನ್ನನ್ನು ಆಶ್ರಯಿಸಿಯೇ ಹೆಣ್ಣು ಜೀವನ ನಡೆಸಬೇಕೆಂದು ಪುರುಷನ ಮನೋಭಾವ. ಸ್ತ್ರೀ ಹಾಗೆಯೇ ನಡೆದುಕೊಳ್ಳಬೇಕೆಂದು

ಪುರುಷ ಬಯಸುತ್ತಾನೆ. ಇಂದು ಅನೇಕ ತಂದೆ-ತಾಯಿಗಳು ಮಗಳೊಬ್ಬಳು ಸರ್ಕಾರಿ ಉದ್ಯೋಗ ಮಾಡುತ್ತಿದ್ದರೆ ಅವಳನ್ನು ಮದುವೆಮಾಡಿಕೊಡಲು ಹಿಂದು-ಮುಂದು ನೋಡುತ್ತಾರೆ. ಒಂದು ವೇಳೆ ಮದುವೆ ಮಾಡಿಕೊಟ್ಟರೆ, ತಮ್ಮ ಭದ್ರತೆ ತಪ್ಪುತ್ತದೆಂದು ಅವರು ಭಾವಿಸುತ್ತಾರೆ. ಅದೇ ತಮ್ಮ ಮಗನಿಗೆ ಉದ್ಯೋಗಸ್ಥ ಹೆಣ್ಣನ್ನು ತರುವುದರಲ್ಲಿ ಅತೀವ ಆಸಕ್ತಿ ವಹಿಸುತ್ತಾರೆ.

ಒಂದು ಮುಖ್ಯವಾದ ಅಂಶವೊಂದನ್ನು ನಾವು ಇಲ್ಲಿ ಗಮನಿಸತಕ್ಕದ್ದು. ಹಿಂದೆ ಗಂಡು ಮಕ್ಕಳೇ ತಂದೆ-ತಾಯಿಗಳನ್ನು ರಕ್ಷಿಸುವ ಹೊಣೆ ಹೊತ್ತಿದ್ದರು. ಮಗಳಿಗೆ 'ಆಸ್ತಿಯ ಹಕ್ಕು' ಇದ್ದ ವಿಚಾರವನ್ನು ಇಲ್ಲಿ ಗಮನಿಸಿ-ಬಹುದು. ಕೇರಳದ ಕೆಲವು ಜನಾಂಗಗಳಲ್ಲಿ ಇಂದಿಗೂ ಈ ಪದ್ಧತಿ ಜಾರಿಯಲ್ಲಿದೆ. ಇಂಥ ಉದಾಹರಣೆ ನೋಡಿದಾಗ ಔದ್ಯೋಗಿಕ ರಂಗದಲ್ಲಿ ಮಹಿಳೆ ಪುರುಷನಷ್ಟು ಸಮರ್ಥಳಿದ್ದು ಅವನ ಸಮ ಸಮವಾಗಿ ದುಡಿದರೂ ವೇತನದಲ್ಲಿ ತಾರತಮ್ಯ ಮಾಡಲಾಗುತ್ತದೆ. ಹಲವು ಕಚೇರಿಗಳಲ್ಲಿ ಮೇಲಾಧಿಕಾರಿಗಳು, ತಮ್ಮ ಕೈಕೆಳಗೆ ಕೆಲಸ ಮಾಡುವ ಮಹಿಳೆಯರು ತಮ್ಮ ಆಜ್ಞೆಯಂತೆ ನಡೆಯಬೇಕೆಂದು ಬಯಸುತ್ತಾರೆ. ಅಲ್ಲದೇ ತಮಗೆ ವಿಶೇಷ ಗೌರವ ನೀಡಬೇಕೆಂತಲೂ ಬಯಸುತ್ತಾರೆ. ಇಂತಹ ಸಂದರ್ಭದಲ್ಲಿ ಮಹಿಳೆಯರು ಮುಜುಗುರಕ್ಕೆ ಒಳಗಾಗಬೇಕಾಗುತ್ತದೆ. ಹಿರಿಯ ಅಧಿಕಾರಿಗಳ ಆಜ್ಞಾನು ವರ್ತಿಗಳಾಗದಿದ್ದರೆ ಮಹಿಳೆಗೆ ತೊಂದರೆ ಖಂಡಿತ. ಪುರುಷ ಅಧಿಕಾರಿಗಳು ನೀಡುವ ಲೈಂಗಿಕ ಹಿಂಸೆಯನ್ನು ಮೂಕವಾಗಿ ಸಹಿಸಬೇಕು. ಇಲ್ಲದಿದ್ದರೆ ಬಡ್ತಿ ಕೊಡುವುದಿಲ್ಲ ಎಂಬ ಬೆದರಿಕೆ ಕೂಡಾ ಹಾಕಲಾಗುತ್ತದೆ. ಪುರುಷ ಸಹೋದ್ಯೋಗಿಗಳು ಸಹ ಮಹಿಳೆಯನ್ನು ಕಡೆಗಣ್ಣಿನಿಂದ ನೋಡುತ್ತಾರೆ, ತಮ್ಮ ಜೊತೆಗೆ ಕೆಲಸ ಮಾಡುವ ಮಹಿಳೆಯರನ್ನು ಸಹೋದ್ಯೋಗಿಯೆಂದು ಭಾವಿಸದೇ 'ಹೆಣ್ಣು' ಎಂಬ ದೃಷ್ಟಿಯಲ್ಲೇ ನೋಡುತ್ತಾರೆ. ಉದಾಹರಣೆಗೆ ಶಾಂತಿಯನ್ನು ಕುರಿತು ಅವಳ ಸಹೋದ್ಯೋಗಿಗಳು ಮಾತನಾಡುವ ರೀತಿಯನ್ನು ಗಮನಿಸಬಹುದು. ಹೀಗೆ ಮಹಿಳೆ ಔದ್ಯೋಗಿಕ ಕ್ಷೇತ್ರದಲ್ಲಿ ಪುರುಷರಿಂದ ಹತ್ತು ಹಲವಾರು ತೊಂದರೆ, ನೋವು, ಸಂಕಷ್ಟಗಳನ್ನು ತಾಳ್ಮೆಯಿಂದ ಸಹಿಸಬೇಕಾಗುತ್ತದೆ.

ಸಂಶಯ ಮನುಷ್ಯನನ್ನು ತಪ್ಪುದಾರಿಗೆ ಎಳೆಯುತ್ತದೆ. ಮಹಿಳಾ ಸಹೋದ್ಯೋಗಿಯೊಬ್ಬಳು ಪುರುಷ

ಸಹೋದ್ಯೋಗಿಯೊಡನೆ ಬಿಚ್ಚುಮನಸ್ಸಿನಿಂದ ಮಾತನಾಡಿದರೆ ಸಮಾಜ ಅಥವಾ ವ್ಯಕ್ತಿಗಳು ಅವಳನ್ನು ಕೀಳು ಹಾಗೂ ಸಂಶಯದ ದೃಷ್ಟಿಯಿಂದ ನೋಡುತ್ತಾರೆ. ಅವಳ ಶೀಲ, ಚಾರಿತ್ರ್ಯದ ಕುರಿತು ಏನೇನೋ ಕಲ್ಪನೆಯ ಕಟ್ಟಡ ಕಟ್ಟುತ್ತಾರೆ. ಇಂಥ ಘಟನೆಗಳಿಂದ ಸ್ತ್ರೀ ಮಾನಸಿಕ ಹಿಂಸೆಯನ್ನು ಅನುಭವಿಸಬೇಕಾಗುತ್ತದೆ.

ಮಹಿಳಾ ಉದ್ಯೋಗಿ, ಕಛೇರಿಗಳಲ್ಲಿ ಕೆಲಸ ಮಾಡಿ ಮನೆಯಲ್ಲೂ ಅವಳು ಕೆಲಸ ಮಾಡುವುದು ತುಂಬಾ ತೊಂದರೆದಾಯಕ ಆದರೂ, ಅನಿವಾರ್ಯ. ಗಂಡ, ಮಕ್ಕಳು ಸಂಸಾರದ ಚಕ್ರ ಅವಳ ಸುತ್ತಲೇ ತಿರುಗುತ್ತದೆ. ಅವಳಿಗೂ ಒಂದು ಹೃದಯವಿದೆ, ಅವಳೂ ತಮ್ಮಂತೆ ಮನುಷ್ಯಳು ಎಂಬ ಭಾವನೆ ಪುರುಷರಲ್ಲಿ ಮೂಡುವುದೇ ಇಲ್ಲ. ಹೀಗಾಗಿ ಮಹಿಳಾ ಉದ್ಯೋಗಿ ಹೆಚ್ಚಿನ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಇನ್ನು ಕೆಲವು ಗಂಡಸರು ಮಹಿಳೆಯರ ಮಾಡುವ ಉದ್ಯೋಗದಿಂದ ಬಂದ ಹಣದಿಂದಲೇ ತಮ್ಮ ಜೀವನ ನಿರ್ವಹಣೆ ಮಾಡುತ್ತಾರೆ. ಹೆಂಡತಿ ಹಣ ನೀಡದೇ ಇದ್ದಾಗ ಅವಳನ್ನು ಗೋಳುಹೊಯ್ದುಕೊಳ್ಳುತ್ತಾರೆ. ಬೇರೆ ಉದ್ಯೋಗಿಕ ರಂಗದಲ್ಲಿ ದುಡಿಯುವ ಹೆಣ್ಣು ಕಾರ್ಖಾನೆ ಕಛೇರಿಗಳಲ್ಲೂ ಹಾಗೂ ಮನೆಯಲ್ಲೂ ಗಂಡಸರಿಂದ ಶೋಷಣೆಗೆ ಒಳಗಾಗುತ್ತಾಳೆ. ಅವಳು ಹೇಗೆ ನಡೆದುಕೊಳ್ಳಬೇಕು ಎಂಥ ಬಟ್ಟೆ ತೊಡಬೇಕು ಎಂಬುದನ್ನು ಮೇಲಾಧಿಕಾರಿಗಳು ನಿರ್ಣಯಿಸುತ್ತಾರೆ. ಜಾಹಿರಾತುಗಳಲ್ಲಿ "Slim and Handsome Girls Wanted" ಎಂಬ ಕಾಲಂಗಳು ಇರುವುದನ್ನು ಗಮನಿಸಬಹುದು.

ಉದ್ಯೋಗಿಕ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಕಾದಂಬರಿಯಲ್ಲಿ ಬರುವ ಸ್ತ್ರೀ ಪಾತ್ರಗಳನ್ನು ಗಮನಿಸಿದಾಗ ಕೆಲ ಹೊಳಹುಗಳು ಲಭ್ಯವಾಗುತ್ತವೆ. ಶಾಂತ ಮುಂಬೈಯಲ್ಲಿ ಕೆಲಸಕ್ಕೆ ಹೋಗುವಾಗ ಅಲ್ಲಿ ಹಲವಾರು ಪುರುಷರ ಕ್ರೂರ ದೃಷ್ಟಿಯನ್ನು ಎದುರಿಸಬೇಕಾಗುತ್ತದೆ. ಸಿಂಧೂಯ ಜೊತೆಗೆ ಬೆಳೆದ ಸ್ನೇಹ ಪ್ರೇಮಕ್ಕೆ ತಿರುಗಿ ಅಂತ್ಯದಲ್ಲಿ ಇಬ್ಬರೂ ಬೇರ್ಪಡುವುದು ಇಲ್ಲಿ ಚಿತ್ರಿತವಾಗಿದೆ. ಹಾಗೇ ಕೆಲಸಕ್ಕೆ ಸೇರಿದ ಶಾಂತಿಯಂಥ ಅನೇಕ ಮಹಿಳೆಯರು ಪುರುಷರ ವಂಚನೆಗೆ ಬಲಿಪಶುವಾಗುತ್ತಾರೆ. 'ಚಂದ್ರಗಿರಿಯ ತೀರದಲ್ಲಿ'ಯ ನಾಯಕಿ ನಾದಿರಾ ತವರು ಮನೆಯಲ್ಲಿ ಉಳಿದಾಗ, ಮಹ್ಮದಖಾನ ಅವಳನ್ನು ತನ್ನ ಆರ್ಥಿಕ ಸ್ಥಿತಿಯ ಭದ್ರತೆಗಾಗಿ ಬೀಡಿಕಟ್ಟುವ ಉದ್ಯೋಗದಲ್ಲಿ ತೊಡಗಿಸುತ್ತಾನೆ. ಅವಳ ಬದುಕಿನ ಬಗೆಗೆ ಕಿಂಚಿತ್ತೂ ಯೋಚಿಸದೆ, ತನ್ನ ಸ್ವಹಿತಾಸಕ್ತಿಗಾಗಿ ನಾನಾ ಕ್ರೂರ ಬಲೆ ಹೆಣೆಯುತ್ತಾನೆ. ಆರ್ಥಿಕವಾಗಿ

ಸ್ತ್ರೀಯಾದರೂ ಅದರ ಸ್ವಾನುಭವ ಗಂಡಸಿನದೇ ಆಗಿರುತ್ತದೆ.

ಹುಲಿಗೆವ್ವ ಶಾಸ್ತ್ರಿಯೊಂದಿಗೆ ಪರಾರಿಯಾಗಿ ಹೋದ ಮೇಲೆ ಜೀವನ ನಿರ್ವಹಣೆಗೆ ಫ್ಯಾಕ್ಟರಿ ಕೆಲಸಕ್ಕೆ ಸೇರಿಕೊಳ್ಳುತ್ತಾಳೆ. ಕೆಲಸಕ್ಕೆ ಬರುವ ಇತರ ಗಂಡಸರು ದೃಷ್ಟಿಸುವ ಇರಿತದ ನೋಟ ಹುಲಿಗೆವ್ವಳನ್ನು ಘಾಸಿಗೊಳಿಸುತ್ತದೆ. ಅಲ್ಲಿಯು ಗಂಡಸರು ನೋಡುವ ನೋಟ ಬರೀ ಕಾಮುಕತೆಯಿಂದ ಕೂಡಿದ್ದು. ಸಮಾಜ ಯಾವಾಗಲೂ ಹೆಣ್ಣನ್ನು ಈ ದೃಷ್ಟಿಯಿಂದಲೇ ಗಮನಿಸುವುದರಿಂದ ಸ್ತ್ರೀಯರು ಔದ್ಯೋಗಿಕ ರಂಗದಲ್ಲಿ ಮುಂದುವರೆಯಲು ಹಿಂದೇಟು ಹಾಕುತ್ತಾರೆನೋ ಎಂದು ಕಾಣುತ್ತದೆ. ಶಾಸ್ತ್ರಿ ಕೊಲೆಯಾದ ತರುವಾಯ ಹುಲಿಗೆವ್ವಳ ಬದುಕು ಮತ್ತೊಂದು ಜಾಡಿಗೆ ಎಳೆಯುತ್ತದೆ. ವೇಶ್ಯೆಯಾಗಿ ತನ್ನ ಬದುಕಿನ ನೊಗಹೊರಲು ಸಜ್ಜಾಗುತ್ತಾಳೆ. ಇಂಥ ಸಾವಿರಾರು ಘಟನೆಗಳ, ಸಾವಿರಾರು ಮಹಿಳೆಯರ ನೋವಿನ ಕಥೆಗಳ ಪ್ರತಿನಿಧಿಯಾಗಿ ಹುಲಿಗೆವ್ವ ನಿಲ್ಲುತ್ತಾಳೆ.

ಕೊಳಗೇರಿಯ ದೇವಿರಿ ಕೂಡಾ ಔದ್ಯೋಗಿಕ ಕ್ಷೇತ್ರದಲ್ಲಿನ ಶೋಷಣಾ ವರ್ತುಲದಿಂದ ಮುಕ್ತಳಾಗಲು ಶಕ್ತಳಾಗಲಾರಳು. ಕೂಲಿಯಿಂದ ಬರುವ ಅವಳ ಸಂಬಳವನ್ನು ಅವಳಿಗೆ ಸರಿಯಾಗಿ ಕೊಡದೆ ಅವಳ ಶ್ರಮದ ಫಲವನ್ನು ಮೇಸ್ತ್ರಿಯಂಥ ವ್ಯಕ್ತಿಗಳು ತಮ್ಮ ಕಬಂಧಬಾಹುಗಳಿಂದ ಬಿಗಿಗೊಳಿಸಿ ಶೋಷಣಾ ಚಕ್ರಕ್ಕೆ ಸಿಲುಕಿಸುತ್ತಾರೆ. ಕೂಲಿ ಕೊಡದೆ ಸತಾಯಿಸುವುದು, ಗುಡಿಸಲಿನ ಬಾಡಿಗೆ ವಿಪರೀತ ಹೆಚ್ಚಿಸುವುದರ ಮೂಲಕ ಅವಳು ಸದಾ ತನ್ನ ಬಳಿ ಬರುವಂತೆಯೂ ದೈನ್ಯದಿಂದ ಬೇಡುವಂತೆಯೂ ಮಾಡುತ್ತಾರೆ. ಕೊಳಗೇರಿಯ ಪೋಲಿಗಳು ದೇವಿರಿಗೆ ಯಾವುದೋ ಆಸೆ ತೋರಿಸಿ ಅವಳನ್ನು ಲೈಂಗಿಕವಾಗಿ ಶೋಷಿಸುತ್ತಾರೆ. ಹೀಗೆ ಔದ್ಯೋಗಿಕ ರಂಗದಲ್ಲಿ ಸ್ತ್ರೀ ಮುಂದುವರೆದಂತೆ ಅವಳ ಬಾಳು ಗೋಳಾಗುತ್ತದೆ. ಸ್ತ್ರೀ ಎಂದರೆ ಶೋಷಣೆ, ಶೋಷಣೆಗೆ ಎಂದರೆ ಸ್ತ್ರೀ ಎನ್ನುವಂಥಾ ಸ್ಥಿತಿ ನಿರ್ಮಾಣವಾಗುತ್ತದೆ.

೩. ಸಾಮಾಜಿಕ ಕ್ಷೇತ್ರ.

ಭಾರತೀಯ ಮಹಿಳೆಯು ವೇದಗಳ ಕಾಲದಲ್ಲಿ ಉನ್ನತವಾದ ಸಾಮಾಜಿಕ ಸ್ಥಾನ-ಮಾನಗಳನ್ನು ಪಡೆದುಕೊಂಡಿದ್ದಳು. ಆಗ ಅವಳು ಶಕ್ತಿ ಎಂದೂ, ದೇವತೆ ಎಂದೂ ಗೌರವಿಸಲ್ಪಡುತ್ತಿದ್ದಳು. ಅಂದು ಸ್ತ್ರೀಯು ಸಮಾಜದಲ್ಲಿ ಪುರುಷ ಸಮಾನ ಹಕ್ಕು-ಬಾಧ್ಯತೆಗಳನ್ನು ಹೊಂದಿದ್ದನ್ನು ಉಲ್ಲೇಖಗಳ ಮೂಲಕ ನಾವಿಂದು ಅರಿತು ಕೊಳ್ಳಬಹುದಾಗಿದೆ. ಸಾಮಾಜಿಕ, ಧಾರ್ಮಿಕ ಕಾರ್ಯಗಳಲ್ಲಿ ಅವಳಿಗೆ ಭಾಗವಹಿಸುವ ಅವಕಾಶವಿತ್ತು, ಹೀಗೆ ಪುರುಷನ ಸರಿಸಮಾನವಾಗಿ ಎಲ್ಲ ಸ್ವಾತಂತ್ರ್ಯವನ್ನು ಅನುಭವಿಸಿದ ಸ್ತ್ರೀ, ಕ್ರಮೇಣವಾಗಿ ಪಿತೃ ಪ್ರಧಾನ ವ್ಯವಸ್ಥೆ ಪ್ರಬಲವಾದಂತೆ ದೂರಸರಿದು ಪುರುಷನೊಂದಿಗೆ ಹೊಂದಿದ್ದ ಸಮಾನತೆಯಿಂದ ವಂಚಿತಳಾದಳು. ಆಸ್ತಿಯ ಕಲ್ಪನೆಯ ಸಂಗ್ರಹಣೆಗೆ ಪ್ರಾಮುಖ್ಯತೆ ಬಂದಂತೆಲ್ಲಾ ಅವಳು ಸ್ವಾತಂತ್ರ್ಯವನ್ನು ಕಳೆದುಕೊಳ್ಳತೊಡಗಿದಳು. ನಂತರ ಅವಳನ್ನು ದೈಹಿಕ ದೌರ್ಬಲ್ಯದ ಕಾರಣದಿಂದ ಅಸಹಾಯಕಳನ್ನಾಗಿಯೂ, ಪರಾವಲಂಬಿಯನ್ನಾಗಿಯೂ ಮಾಡಿ ಪುರುಷವರ್ಗ ಸಮಾಜದಲ್ಲಿ ಅವಳನ್ನು ಕೆಳಕ್ಕೆ ತುಳಿಯಲಾಯಿತು.

ವೇದಕಾಲದ ಆನಂತರ ಅಂದರೆ ಪುರಾಣಗಳ ಕಾಲದಲ್ಲಿ ಹಾಗೂ ಮಧ್ಯಕಾಲೀನ ಅವಧಿಯಲ್ಲಿ ಆರಂಭವಾದ ಮುಸ್ಲೀಮರ ಆಳ್ವಿಕೆಯಲ್ಲಿ ಮಹಿಳಾ ಸ್ಥಿತಿ ಅತ್ಯಂತ ಶೋಚನೀಯವಾಗಿತ್ತು. ಅಂದು ಜಾರಿಗೆ ಬಂದ ಘೋಷಾ ಪದ್ಧತಿಯು ಮಹಿಳೆಯನ್ನು ಸಾಮಾಜಿಕ ಜೀವನದಿಂದ ಹಿಂದೆ ಸರಿಸಿತು. ಜೊತೆಗೆ ಅವಳ ವ್ಯಕ್ತಿತ್ವವನ್ನೇ ನುಂಗಿ ಹಾಕಿತು. ಇದರಿಂದ ಪುರುಷ ಸಮಾಜ ಮಹಿಳೆಯನ್ನು ಗೃಹಬಂಧನದಲ್ಲಿರಿಸಿ ಅವಳ ಸರ್ವ ಸ್ವಾತಂತ್ರ್ಯವನ್ನೇ ಅಪಹರಿಸಿತು. ಹೀಗಾಗಿ ಸ್ತ್ರೀಯು ತನ್ನ ಬದುಕನ್ನು ಪುರುಷನ ನೆರಳಿನಲ್ಲಿ ನಡೆಸುವಂತಾಯಿತು. ಈ ಸಂದರ್ಭದಲ್ಲಿ ಸಾಮಾಜಿಕ ಅನಿಷ್ಟಗಳಾದಂಥ ಸತಿಸಹಗಮನ, ಬಾಲ್ಯವಿವಾಹ, ವೇಶ್ಯಾವೃತ್ತಿಗಳು ತಲೆ ಎತ್ತಿ ಮೆರೆಯ ತೊಡಗಿದವು.

ಸಂಕೀರ್ಣ ಸಾಮಾಜಿಕ ಸಂರಚನೆಯಲ್ಲಿ ಮಹಿಳೆ ಅನುಭವಿಸಿದ ನೋವು, ಸಂಕಷ್ಟಗಳು ಒಂದಲ್ಲ, ಎರಡಲ್ಲ!

ಪುರುಷ ವ್ಯವಸ್ಥೆಯ ಕರಾಳ ಕಪಿಮುಷ್ಟಿಯಲ್ಲಿ ಸಿಕ್ಕು ನರಳಿದಳು. ಅಜ್ಞಾನದ ಅಂಧಕಾರದಲ್ಲಿ ದಿನದೂಡಿದ ಭಾರತೀಯ ಮಹಿಳೆಯು ಎಚ್ಚರಗೊಂಡದ್ದು ಹನ್ನೆರಡನೆಯ ಶತಮಾನದಲ್ಲಿ ಎಂದು ಹೇಳಬಹುದು. ಬಹುಕಾಲದಿಂದ ಪರಾಧೀನಳಾದ ಸ್ತ್ರೀಯರನ್ನು ಅಜ್ಞಾನದ ಕೂಪದಿಂದ ಹೊರಗೆಳೆದು ಅವರನ್ನು ಮನುಷ್ಯರನ್ನಾಗಿ ಪರಿವರ್ತಿಸಿದ್ದು ಶಿವಶರಣರ ಒಂದು ಮಹಾನ ಕಾರ್ಯವೇ ಸರಿ! ಶರಣರು ಮೂಲತಃ ಧಾರ್ಮಿಕ ನೆಲೆಯಲ್ಲಿ ಇರುವವರಾದರೂ ಅವರು ವೈಚಾರಿಕತೆಯ ಬೆಳಕಿನಿಂದ ಸಮಾಜದಲ್ಲಿನ ಅಜ್ಞಾನದ ತಮಂಧವನ್ನು ಹೊಡೆದೋಡಿಸಿದರು, ತನ್ಮೂಲಕ ಸಮಾಜದ ಶೈಥಿಲ್ಯಕ್ಕೆ ಕಾರಣವಾದ ಲಿಂಗಭೇದ, ವರ್ಣಭೇದ , ವರ್ಗಭೇದಗಳನ್ನು ಹೊಡೆದುಹಾಕಲು ಪ್ರಯತ್ನ ಮಾಡಿದರು. ಮನುಷ್ಯನಲ್ಲಿದ್ದ ರಾಕ್ಷಸಿಗುಣಗಳನ್ನು ದಮನಿಸಿ ಮಾನವತೆಯ ಬೀಜ ಬಿತ್ತಿದ್ದರು.

ಹನ್ನೆರಡನೆಯ ಶತಮಾನದಲ್ಲಿ ಬಂದ ಶಿವಶರಣರು ಕರ್ನಾಟಕದ ಸ್ತ್ರೀ ಸಮುದಾಯದ ಇತಿಹಾಸದಲ್ಲಿ ಹೊಸಹೆಜ್ಜೆ ಗುರುತುಗಳನ್ನು ಮೂಡಿಸಿದರು. ಸ್ತ್ರೀ ಪುರುಷರ ಸಮಾನತೆಯನ್ನು ಪ್ರತಿಪಾದಿಸಿದರು. ಶರಣರು ಪಾರಮಾರ್ಥಿಕದ ಜೊತೆಗೆ ಲೌಕಿಕ ಬದುಕನ್ನು ಜೋಡಿಸಿಕೊಂಡ ಅವರು, ಎರಡರಲ್ಲೂ ಮಹಿಳಾ ಸಮಾನತೆಯನ್ನ ಒಪ್ಪಿಕೊಂಡರು. '' ಪುರುಷ ಪ್ರಭುತ್ವವನ್ನೇ ಸೂಚಿಸುತ್ತಿದ್ದ ಅನುಭವ ಮಂಟಪದಲ್ಲಿಯೂ ಅಕ್ಕಮಹಾದೇವಿಯ ಲೋಕವಿರೋಧಿ ವ್ಯಕ್ತಿತ್ವ ಸಾಧನೆಗಳು ಗೌರವಿಸಲ್ಪಟ್ಟದ್ದು ವಚನಕಾರರ ಸ್ತ್ರೀವಿಮೋಚನಾ ಪ್ರಯತ್ನದ ಒಂದು ಮಹತ್ವದ ಬೆಳವಣಿಗೆ'' (ವಿಜಾ ಶಾಂತೇಶ್ವರ (ಸಂ) ಮಹಿಳಾ ಅಧ್ಯಯನ ಪು: ೧೪೧)ಎಂಬುದು ನಾವು ಅಲಕ್ಷಿಸುವಂತಿಲ್ಲ . ಒಟ್ಟಿನಲ್ಲಿ ವಚನಕಾರರ ವೈಚಾರಿಕ ಕ್ರಾಂತಿಯು ಸಾಮಾಜಿಕ ಕ್ಷೇತ್ರದಲ್ಲಿ ಮೂಡಿಸಿದ ಹೊಸ ಚಿಂತನಾ ಅಲೆಯನ್ನು ಗುರುತಿಸಲಾಗಿದೆ.

ನಾವು ಸ್ವಾತಂತ್ರ್ಯ ಪಡೆದು, ಐವತ್ತು ವರ್ಷಗಳು ಸಂದುಹೋಗಿವೆ. ಸುವರ್ಣ ಮಹೋತ್ಸವ ಆಚರಿಸುವ ಸಂಭ್ರಮದಲ್ಲಿದ್ದೇವೆ. ಈ ಸಂದರ್ಭದಲ್ಲಿ ಮಹಿಳೆಯರ ಸ್ಥಾನಮಾನದ ಕಡೆಗೆ ಹೊರಳಿ ನೋಡಿದರೆ ಆಶ್ಚರ್ಯವಾಗದೇ ಇರಲಾರದು. ಯಾವ ಗುರಿ ಉದ್ದೇಶಗಳನ್ನು ಇಟ್ಟುಕೊಂಡು ನಮ್ಮ ನಾಯಕರು ಸ್ವಾತಂತ್ರ್ಯವನ್ನು ತಂದುಕೊಟ್ಟರೋ, ಅಂಥ ಗುರಿ-ಉದ್ದೇಶಗಳು ಗಾಳಿ ಪಾಲಾಗಿವೆ. ಭಾರತದ ಜನತೆಗೆ ಎಲ್ಲ ಕ್ಷೇತ್ರಗಳಲ್ಲೂ ನ್ಯಾಯ ದೊರಕಬೇಕೆಂದು ಗಾಂಧೀಜಿಯವರು ಭವ್ಯವಾದ ಕನಸು ಕಟ್ಟಿಕೊಂಡಿದ್ದರು. ಆದರೆ ಅವರ ಕನಸು ಕನಸಾಗಿಯೇ ಉಳಿದುಕೊಂಡಿದೆ. ''ಇಂಗ್ಲೀಷ ವಿದ್ಯಾಭ್ಯಾಸ ಪಡೆದ, ಪಾಶ್ಚಿಮಾತ್ಯ ಸಂಸ್ಕೃತಿಯ ನಾಗರೀಕತೆಗಳನ್ನು ಕಣ್ಣಾರೆ ಕಂಡ ಭಾರತದ ಹಲವಾರು

ನಾಯಕರು ನಮ್ಮ ದೇಶದ ಮಹಿಳೆಯರ ಹೀನ ಸ್ಥಿತಿಯ ಬಗ್ಗೆ ವಿಚಾರಮಾಡತೊಡಗಿದುದು ತೀರಾ ಸಹಜವಾಗಿತ್ತು. ಆದರಿಂದಾಗಿಯೇ ೧೯೪೯ ರ ನವೆಂಬರನಲ್ಲಿ ಲಿಂಗಭೇದದ ಆಧಾರದ ಮೇಲೆ ಪುರುಷ-ಸ್ತ್ರೀಯರ ನಡುವೆ ತಾರತಮ್ಯ ಭಾವನೆಯನ್ನು ರಾಜ್ಯ ತೋರಿಸುವುದಿಲ್ಲವೆಂದು ಆಶ್ವಾಸನೆ ನೀಡಲಾಯಿತು'' (ಅಂದನೂರು ಶೋಭಾ (ಸಂ)- ಮಹಿಳೆಯ ಮುನ್ನಡೆ. ಪು-೭೯)ಆದರಂತೂ ಇಂದು ಆದುದೇ ಬೇರೆ.ಮಹಿಳಾ ಸಮುದಾಯಕ್ಕೆ ಅನೇಕ ಸಮಸ್ಯೆಗಳು ತಲೆದೋರಿ, ಅವು ಪರಿಹಾರದ ಕಗ್ಗಂಟಾಗಿ ಪರಿಣಮಿಸಿವೆ. ಹೀಗಾಗಿ ಅವಳ ಬದುಕು ತೀರಾ ಶೋಚನೀಯವಾಗಿದೆ. ಪ್ರತಿಯೊಂದು ರಂಗದಲ್ಲೂ ಮಹಿಳೆಯನ್ನು ಎರಡನೇ ದರ್ಜೆಯ ಪ್ರಜೆಯನ್ನಾಗಿಯೇ ಗಮನಿಸಲಾಗುತ್ತದೆ. ಈ ಸಂಕೀರ್ಣ ಸ್ಥಿತಿಗೆ ನಮ್ಮ ಸಾಮಾಜಿಕ ಸ್ತರವಿನ್ಯಾಸವೇ ಕಾರಣವಾಗಿದೆ. ಪ್ರಸ್ತುತ ಸಂದರ್ಭದಲ್ಲಿ ಸಮಾಜ ಮಹಿಳೆಯರ ಬಗೆಗೆ ತೋರುವ ದ್ವಂದ್ವ ನೀತಿ ತುಂಬಾ ಸಂಕೀರ್ಣವಾದುದು ಮತ್ತು ಅಷ್ಟೇ ಜಟಿಲವಾದದ್ದು. ಶತಶತಮಾನಗಳಿಂದ ವ್ಯವಸ್ಥಿತವಾಗಿ ಎಲ್ಲ ಬಗೆಯಿಂದಲೂ ಸ್ತ್ರೀಯರು ಬಂಧನಕ್ಕೊಳಪಟ್ಟಿ- ರುವುದು ಸಾರ್ವತ್ರಿಕವಾದ ಸಂಗತಿಯೇ ಆಗಿದೆ. ಮಾನವ ಇತಿಹಾಸದಲ್ಲಿ ಆಕೆ ದಾಸ್ಯಕ್ಕೆ ಹೇಗೆ ಒಳಗಾದಳೆಂಬುದಕ್ಕೆ ಅನೇಕ ಆಧಾರಗಳಿವೆ. ಅದರ ಒಂದು ಕ್ಷಣದಲ್ಲಿ, ಒಂದು ದಿನದಲ್ಲಿ ಇತಿಹಾಸ ನಡೆದ ತಿರುವು ಇದಲ್ಲ. ಕ್ರಮೇಣವಾಗಿ ಈ ದಾಸ್ಯದ ಅಪಮಾನತೆಯು ಪರಂಪರೆ ಬೆಳೆಯಿತು. ಮಹಿಳೆ ಸಾಮಾಜಿಕ ಉತ್ಪಾದನಾ ಕ್ಷೇತ್ರದಿಂದ,ಸಾಮಾಜಿಕ, ಶೈಕ್ಷಣಿಕ, ಔದ್ಯೋಗಿಕ, ರಾಜಕೀಯ ಹಾಗೂ ಸಾಂಸ್ಕೃತಿಕ ವಲಯಗಳಂಥ ಮುಖ್ಯ ಪ್ರವಾಹದಿಂದ ಹೊರಗೆ ಹಾಕಲ್ಪಟ್ಟಳು. ಕೇವಲ ಕುಟುಂಬಕ್ಕೆ ಅವಳನ್ನು ಕಟ್ಟಿ ಹಾಕಿ 'ಮಾತೃತ್ವ', 'ಸ್ತ್ರೀತ್ವ', 'ಪತ್ನಿತ್ವ', ಎಂಬಆದರ್ಶಗಳನ್ನು ಆಕೆಯ ಮೇಲೆ ಹೇರಲಾಯಿತು. ಇಂಥ ಆದರ್ಶಗಳು ಸ್ತ್ರೀಯನ್ನು ಹಿಡಿತದಲ್ಲಿಟ್ಟುಕೊಳ್ಳಲು, ಅವಳನ್ನು ಆಳಲು ರೂಪಿತವಾದುವೇ ವಿನಃ ಅವಳ ಹಿತವನ್ನು ಲಕ್ಷ್ಯದಲ್ಲಿರಿಸಿಕೊಂಡು ರಚಿತವಾದುವಲ್ಲವೆಂದು ಹೇಳಬಹುದು .

ನಮ್ಮ ಸಮಾಜವು ಅನೇಕ ವೈರುಧ್ಯಗಳನ್ನು ತನ್ನೊಡಲಲ್ಲಿ ಹುದುಗಿಸಿಕೊಂಡೇ ಸಾಗುತ್ತಲಿದೆ. ಸಾಮಾಜಿಕ ವ್ಯವಸ್ಥೆಯಲ್ಲಿ ಮಹಿಳಾ ಶೋಷಣೆಗೆ ಗುರಿಪಡಿಸುವ ಹಲವು ಸಾಮಾನ್ಯ ಎಳೆಗಳಿವೆ. ಈ ಶೋಷಣೆಯ ಸ್ವರೂಪ ಮತ್ತು ತೀವ್ರತೆ ಹೆಚ್ಚು ವಸ್ತುನಿಷ್ಠವಾಗಿವೆ. ಶೋಷಣಾ ಪರಂಪರೆಯಿಂದ ಯಾವ ಕಾಲ ದೇಶ ಸ್ತ್ರೀಯರೂ ಮುಕ್ತರಾಗಿಲ್ಲ. ಭಾರತೀಯ ಸಮಾಜ ಸಂಪ್ರದಾಯನಿಷ್ಠವಾದುದು. ಪ್ರಪಂಚದ ವಿಚಾರವು ಅಷ್ಟೇ. ದೇವರು, ಧರ್ಮದ

ಕುರಿತು ಇಲ್ಲಿ ಬಂದಿರುವ ದೈವೀ ಭಾವನೆಗಳು ಸ್ತ್ರೀ ಶೋಷಣೆಗೆ ಪ್ರೇರಕ ಶಕ್ತಿಗಳಾಗಿ ಕೆಲಸ ಮಾಡುತ್ತವೆ. ಸಿಂಗಾರವ್ವ ಮತ್ತು ಅರಮನೆ ಕಾದಂಬರಿಯಲ್ಲಿ ಬರುವ ಕುಟ್ಟಯ್ಯ ದೈವೀ ಪುರುಷನೆಂದು ಹೇಳಿಕೊಂಡು, ಪವಾಡದ ನೆಪದಲ್ಲಿ ಸ್ತ್ರೀ ಲೈಂಗಿಕ ಶೋಷಣೆ ಮಾಡುತ್ತಾನೆ. '[illegible]' ಬರುವ [illegible]ನಲ್ಲಿ ಉಲ್ಲೇಖವಾದ ತಲಾಖ ಪ್ರಕರಣ ಅಂತ್ಯದಲ್ಲಿ ಸಾಬಿರಾಳ ಆತ್ಮಹತ್ಯೆಗೆ ಕಾರಣವಾಗುತ್ತದೆ. ಮಠಮಾನ್ಯಗಳಲ್ಲಿ ನಂಬಿಕೆ ಇಟ್ಟ ಸಮಾಜ ಅವರನ್ನು ದೈವತ್ವಕ್ಕೇರಿಸಿರುವುದರಿಂದ ಪ್ರಾರಂಭದಿಂದಲೂ ಹಾಗೇ ಸಾಗಿ ಬಂದಿದೆ. ಈ ಹಿನ್ನೆಲೆಯಲ್ಲಿ ನೋಡಿದಾಗ ಯಯಾತಿ ಮಾಧವಿಯನ್ನು ಗಾಲವನಿಗೆ ದಾನಕೊಡುವುದನ್ನು ಸ್ಮರಿಸಬಹುದು. ಒಂದು ವೇಳೆ ಗಾಲವನ ಬೇಡಿಕೆ ಈಡೇರಿಸದಿದ್ದರೆ ಶಾಪ ಕೊಡುವನೆಂಬ ಭಯ ಕಾಡುತ್ತದೆ. ಇದಲ್ಲಿ ಧಾರ್ಮಿಕ ಮತ್ತು ನಂಬಿಕೆಯ ಆವರಣದೊಳಗೆ ನಡೆಯುವ ಸ್ತ್ರೀ ಶೋಷಣೆಗೆ ಸಂಕೇತವಾಗಿದೆ. ಇಂಥ ಸಮಾಜೋಧಾರ್ಮಿಕ ನಂಬಿಕೆಗಳೇ ಇಡೀ ಸ್ತ್ರೀ ಸಮುದಾಯದ ಬದುಕನ್ನು ಅಸ್ತವ್ಯಸ್ತಗೊಳಿಸುತ್ತವೆ. ಹೀಗಾಗಿ ಧಾರ್ಮಿಕ ಕಟ್ಟುಪಾಡುಗಳೇ ಮಹಿಳಾ ಶೋಷಣೆಗೆ ಪುಷ್ಟಿ ನೀಡುತ್ತವೆ.

ಸಮಾಜದ ಮೂಲ ಘಟಕ ಕುಟುಂಬ. ಕುಟುಂಬದಲ್ಲಿಯೇ ಲಿಂಗಭೇದದ ಬೀಜ ಮೊಳಕೆಯೊಡೆಯುತ್ತದೆ. ಇಲ್ಲಿ ಗಂಡು ಮಗುವಿಗೆ ಪ್ರಾಮುಖ್ಯತೆ ನೀಡಲಾಗುತ್ತದೆ. ಹಿಂದೆ ಮನು ಕೂಡಾ ಇದನ್ನು 'ಅಪುತ್ರಸ್ಯಗತಿರ್ನಾಸ್ತಿ' ಎಂದು ಹೇಳುವುದರ ಮೂಲಕ ಪುರುಷ ವ್ಯವಸ್ಥೆಯನ್ನು ಗಟ್ಟಿಗೊಳಿಸಿದ್ದಾನೆ. ಗಂಡಿಗಿರುವಷ್ಟು ಸ್ಥಾನವನ್ನು ಹೆಣ್ಣಿಗೆ ಕೊಡದೇ ಇರುವುದು ಒಂದು ದುರಂತದ ಸಂಗತಿಯಾಗಿದೆ. 'ಹೆಣ್ಣು ಹುಟ್ಟಿದರೆ ಹುಣ್ಣು ಹುಟ್ಟಿದಂತೆ', 'ಹೆಣ್ಣು ಹಡೆಯಲಿಬ್ಯಾಡ, ಹೆರವರಿಗೆ ಕೊಡಬ್ಯಾಡ', 'ಬಾಲಕರಿಲ್ಲದ ಬಾಲ್ಯಾತರ ಜನುಮ' ಎನ್ನುವ ಜನಪದ ಹಾಡುಗಳು ಸಹ ಹೆಣ್ಣು ಕನಿಷ್ಟವೆಂದು ಪರಿಗಣಿಸಿ, ಗಂಡಿಗೆ ಮಹತ್ವನೀಡಿದ್ದು ಸಮಾಜ ತೋರುವ ಲಿಂಗಭೇದಕ್ಕೆ ಸ್ಪಷ್ಟ ನಿದರ್ಶನವಾಗಿದೆ. 'ಆರತಿಗೊಬ್ಬ ಮಗಳು ಕೀರ್ತಿಗೊಬ್ಬ ಮಗ' ಎಂಬ ಹೇಳಿಕೆಯು ಕೇವಲ ಗಂಡು ಅಷ್ಟೇ ಕೀರ್ತಿ ತರಬಲ್ಲನೆಂಬ ಭಾವನೆ ತೋರಿಸುತ್ತದೆ. ಅವಕಾಶ, ಪ್ರೋತ್ಸಾಹ ದೊರೆತರೆ ಹೆಣ್ಣು ಸಹ ಕೀರ್ತಿತರುವಳೆಂಬ ವಿಚಾರ ಇನ್ನೂ ಸಾರ್ವತ್ರಿಕವಾಗ ಬೇಕಾಗಿದೆ. ಅಕ್ಕಮಹಾದೇವಿಯಿಂದ ಹಿಡಿದು ಶ್ರೀಮತಿ ಇಂದಿರಾಗಾಂಧಿಯವರೆಗೆ ಹೆಣ್ಣು ಸಾಧಿಸಿರುವ ಸಾಧನೆಗಳು ಅಪಾರ. ಸಾಮಾಜಿಕ ಸಂರಚನೆಯಲ್ಲಿ ಬೇರೂರಿಟ್ಟ ಅನಿಷ್ಟ ಸಂಪ್ರದಾಯಗಳು ಮಹಿಳೆಯನ್ನು ಸಂಕಷ್ಟ-

ಕೊಲ್ಲುತ್ತಿವೆ. ಬಾಲ್ಯವಿವಾಹ, ಸತಿಸಹಗಮನ, ದೇವದಾಸಿ ಪದ್ಧತಿಗಳು ಇನ್ನೂ ಜೀವಂತವಾಗಿದ್ದು ಸ್ತ್ರೀ ಶೋಷಣೆಗೆ ಕಾರಣೀಭೂತವಾಗಿವೆ. ರೂಪಕನ್ವರಳನ್ನು ಬಲಿತೆಗೆದುಕೊಂಡ ಸತಿಸಹಗಮನ ಪದ್ಧತಿ, ಗ್ರಾಮೀಣ ಪ್ರದೇಶಗಳಲ್ಲಿ ಆಚರಣೆಯಲ್ಲಿರುವ ದೇವದಾಸಿ ಪದ್ಧತಿ, ಬಾಲ್ಯವಿವಾಹಗಳು, ನಗರ ಪ್ರದೇಶದಲ್ಲಿನ ವೇಶ್ಯಾವೃತ್ತಿ ಇಪ್ಪತ್ತೊಂದನೆಯ ಶತಮಾನಕ್ಕೆ ಪಾದಾರ್ಪಣೆ ಮಾಡುವ ಭಾರತೀಯ ಪ್ರಜೆಗಳಿಗೆ ಇದೊಂದು ಆತಂಕದ ಸಂಗತಿಯಾಗಿದೆ.

ಪ್ರಪಂಚಾದ್ಯಂತ ಇಂಥ ಅಂಶಗಳು ಬೇರೆ ಬೇರೆ ರೂಪದಲ್ಲಿ ಜಾರಿಯಲ್ಲಿವೆ. ನಿದರ್ಶನಕ್ಕೆ ಸಹ ಪತ್ನಿತ್ವ, ಕೂಡಾವಳಿ ಇಂಥವು. ನಿದರ್ಶನಕ್ಕೆ ಅರಬ ದೇಶಗಳ ಕೆಲವು ಶ್ರೀಮಂತರಿಗೆ ತಮಗೆ ಎಷ್ಟು ಹೆಂಡಿರಿದ್ದಾರೆ, ಎಷ್ಟು ಮನೆಗಳಿವೆ ಎಂಬುದೇ ತಿಳಿದಿಲ್ಲವೆಂದು ಪತ್ರಿಕೆಗಳಲ್ಲಿ ಪ್ರಕಟವಾದ ವಿಚಾರವನ್ನು ನೋಡಬಹುದು. ಇನ್ನು ಭಾರತದಂತಹ ಮೂರನೆಯ ಜಗತ್ತಿನ ರಾಷ್ಟ್ರಗಳಲ್ಲಿ ಇಂಥ ಶ್ರೀಮಂತರು ಬಡ ಹೆಣ್ಣುಮಕ್ಕಳನ್ನು ಹಣಕೊಟ್ಟು ಮದುವೆಯಾಗುವ ಸಂಗತಿ ಕಟ್ಪಾಡಿ, ಸಾರಾ, ಬೊಳುವಾರು ಮೊದಲಾದವರ ಕೃತಿಗಳಲ್ಲಿರುವುದನ್ನು ನೋಡಬಹುದು. ಮಾನವನ ಮೂಲಭೂತ ಪ್ರವೃತ್ತಿಗಳಾದ ಹಸಿವು, ನೀರಡಿಕೆ, ನಿದ್ರೆಗಳಂತೆ ಕಾಮವೂ ಪ್ರಮುಖವಾದದ್ದು. ಈ ಪ್ರವೃತ್ತಿ ಪೂರೈಸಲು ವಿವಾಹ ಪದ್ಧತಿ ಜಾರಿಗೆ ಬಂದಿತು. ನಮ್ಮ ಸಮಾಜ, ಸ್ತ್ರೀ ಲೈಂಗಿಕವಾಗಿ ಪರಿಶುದ್ಧಳಾಗಿರಬೇಕೆಂದು ಅಪೇಕ್ಷಿಸುತ್ತದೆ. 'ಪತಿವ್ರತೆ' ಎಂಬ ಮಾತು ಇದಕ್ಕೆ ನಿದರ್ಶನ. ಆದರೆ ಗಂಡಿಗೆ ಇಂಥ ಯಾವ ನಿರ್ಬಂಧನೆಗಳು ಇಲ್ಲ. 'ಗಂಡಸರು' ಕಾದಂಬರಿಯ ರಾಣಿ ಈ ಸಾಮಾಜಿಕ ಕಟ್ಟನ್ನು ಮುರಿದು ಲೈಂಗಿಕ ಸ್ವಾತಂತ್ರ್ಯವನ್ನು ಪಡೆಯುತ್ತಾಳೆ. ಆದರೆ ಹುಲಿಗೆವ್ವನಿಗೆ ಇದು ಸಾಧ್ಯವಾಗುವುದಿಲ್ಲ. ಆವಳು ಪುರುಷರ ದಬ್ಬಾಳಿಕೆಗೆ ಒಳಗಾಗುತ್ತಾಳೆ. ಸಾಮಾಜಿಕ ವ್ಯವಸ್ಥೆ, ಪಟ್ಟಭದ್ರ ಹಿತಾಸಕ್ತಿಯಿಂದ ಹೊರಬಂದು ಸಮಾನತೆ ಸಾಧ್ಯವಾಗದೆ ಸ್ತ್ರೀ ಸ್ವತಂತ್ರವಾಗಿ ಬದುಕಲಾರಳು.

ಮಾನವೀಯತೆಯನ್ನು ರೂಢಿಸಿಕೊಳ್ಳದ ಮನುಷ್ಯ ಜನಾಂಗ ಸ್ತ್ರೀಯನ್ನು ತಲತಲಾಂತರದಿಂದ ಇಂಥ ಹೀನ ಸ್ಥಿತಿಗೆ ತಂದು ಹಾಕಿದೆ. ಸಾಮಾಜಿಕ ಪಾಪಗಳನ್ನು ನಿರ್ಮೂಲನ ಮಾಡುವುದರಲ್ಲಿ ಮಹಿಳೆಯರ ಕೊಡುಗೆ ಮಹತ್ವದ್ದಾಗಿರುತ್ತದೆ. ''ವಿವಾಹವಾಗುವ ಪ್ರತಿಯೊಬ್ಬ ಮಹಿಳೆ ತನ್ನ ಗಂಡನ ಸ್ನೇಹಿತಳಂತೆ ಸಮಾನಹಕ್ಕು ಉಳ್ಳವಳಾಗಿರಬೇಕು. ಮತ್ತು ಆತನ ಗುಲಾಮಳಾಗುವುದನ್ನು ಧಿಕ್ಕರಿಸಬೇಕು.''(ಅಜಯ ಮಾ. ರ, ೧೯೯೩ ಪು-೧೯)

ಎಂಬ ಡಾ.ಬಿ.ಆರ್.ಅಂಬೇಡ್ಕರ್ ಅವರ ಈ ಹೇಳಿಕೆಯನ್ನು ನಮ್ಮ ನಾಗರಿಕರು ಅರಿತುಕೊಂಡಾಗ, ಹಾಗೂ ಪುರುಷರು ಸಹಕರಿಸಿದಾಗ ನಮ್ಮಲ್ಲಿಯೂ ಜೀವನ ನಡೆಸಬಹುದು, ಮತ್ತು ತಲೆಎತ್ತಿ ಬಾಳಬಹುದು. ಇಲ್ಲದಿದ್ದರೆ ಜಾತಿ ಆಧಾರಿತ ಸಂಘಟನೆಗಳ ಅಸ್ತಿತ್ವ, ಸಂಘಟನೆಗಳ ಹೋರಾಟಕ್ಕೆ ಅರ್ಥವಿರುವುದಿಲ್ಲ.

ಸಮಾರೋಪ

ಸಾಹಿತ್ಯ ಸಮಾಜದ ರನ್ನಗನ್ನಡಿ. ಇದು ಸಮಾಜದಲ್ಲಿನ ಎಲ್ಲ ಬಗೆಯ ಒಳ-ಹೊರಗಿನ ಮಾನವನ ನೈಜ ಗುಣಗಳನ್ನು ಚಿತ್ರಿಸುವತ್ತ ತುಡಿಯುತ್ತದೆ. ಅಧ್ಯಯನಕ್ಕೆ ತೆಗೆದುಕೊಂಡ ಕಾದಂಬರಿಗಳನ್ನು ವಾಸ್ತವ ನೆಲೆಯಿಂದ ಸೃಷ್ಟಿಸಲಾಗಿದೆ. ವಾಸ್ತವತೆಗೆ ಕಲಾತ್ಮಕತೆಯ ಲೇಪ ಕೃತಿಗಳಿಗೆ ಮತ್ತಷ್ಟು ಮೌಲಿಕತೆಯನ್ನು, ಸಹಜತೆಯನ್ನು ತಂದುಕೊಟ್ಟಿವೆ.

ಆರು ಕಾದಂಬರಿಗಳಲ್ಲೂ ಸ್ತ್ರೀಶೋಷಣೆ ಢಾಳಾಗಿ ಎದ್ದು ಕಾಣುತ್ತದೆ. ಮನುಷ್ಯನ ಮೂಲ ಪ್ರವೃತ್ತಿಗಳಲ್ಲೊಂದಾದ 'ಕಾಮ' ಎಲ್ಲ ಕಾದಂಬರಿಗಳ ಜೀವದ್ರವ್ಯವೇ ಆಗಿದೆ. "Love is much bigger than passion and a women much more than sex" ಎನ್ನುವ ಡಿ.ಎಚ್.ಲಾರೆನ್ಸನ ಮಾತು ಇಲ್ಲಿ ಉಲ್ಲೇಖಾರ್ಹವೆನಿಸುತ್ತದೆ. ಈ ಪುರುಷ ಸಮಾಜ ಹೆಣ್ಣನ್ನು ಕೇವಲ ಭೋಗದ ವಸ್ತುವೆಂದೇ ಪರಿಗಣಿಸಿದೆ. ಹೆಣ್ಣನ್ನು ನಾಗರಿಕಳಾಗಿ ಭಾವಿಸುವ ಸಮಾನತೆಯ ಧೋರಣೆಯನ್ನು ಕಾದಂಬರಿಗಳಲ್ಲಿ ಅಭಿವ್ಯಕ್ತಗೊಳ್ಳುವ ಬದುಕಿನ ಸ್ಪಷ್ಟ ಚಿತ್ರಣದ ಮೂಲಕ ಸೂಕ್ಷ್ಮವಾಗಿ ಧ್ವನಿಸುತ್ತವೆ.

ಸ್ವಾತಂತ್ರ್ಯೋತ್ತರ ಸಾಹಿತ್ಯದಲ್ಲಿ ಕೊಳಕು ರಾಜಕೀಯದ ಮಧ್ಯ, ಯಾವುದೇ ಪ್ರಾಮಾಣಿಕತೆ, ಆದರ್ಶಗಳ ಮೌಲ್ಯ ಎತ್ತಿ ಹಿಡಿಯಲಾಗದ ಅಸಹಾಯಕತೆಯಲ್ಲಿ ಕೆಳಗೆ ಬೀಳುವ ಪುರುಷನನ್ನು ಎತ್ತಿ ಹಿಡಿಯುವ ತಾಯ್ತನದ ಸಂಕೇತವಾಗಿ ಲೇಖಕರಾಗಲಿ ಲೇಖಕಿಯರ ಬರಹಗಳಲ್ಲಿ ಹೆಣ್ಣಿನ ಚಿತ್ರಣ ಮೂಡಿ ಬಂದಿದೆ. ಇದಕ್ಕೆ ಹೊರತಾಗಿ ಸ್ತ್ರೀ-ಸಂವೇದನೆಯ ವಿಶಿಷ್ಟತೆ, ಅನನ್ಯತೆಯಿಂದ ಯಾವ ವಿರೋಧಗಳ ಸಂಘರ್ಷಗಳಿಗೂ ತೆರೆದುಕೊಳ್ಳದೇ ವೈಯಕ್ತಿಕ ಕೌಟುಂಬಿಕ ನೆಲೆಯಲ್ಲಿ ತ್ಯಾಗ, ಪ್ರೀತಿ, ಪ್ರೇಮದಂತಹ ಮೌಲ್ಯಗಳನ್ನು ಒಡಮೂಡಿಸಿಕೊಂಡ ಪಾತ್ರಗಳನ್ನು ಲೇಖಕ-ಲೇಖಕಿಯರು ಚಿತ್ರಿಸಿರುವುದು ಕಂಡುಬರುತ್ತದೆ ಎಂದು ಕುಂ.ವೀರಭದ್ರಪ್ಪನವರು ಅಭಿಪ್ರಾಯ ಪಡುವುದರಲ್ಲಿ ಸತ್ಯಾಂಶವಿದೆ.

ಈ ಸಂದರ್ಭದ ಅಂದರೆ ಸ್ವಾತಂತ್ರ್ಯೋತ್ತರದ ತಾಯ್ತನದ ಚಿತ್ರಣವಾಗಲಿ, ಸ್ತ್ರೀ ವಿಶಿಷ್ಟತೆಯ ತ್ಯಾಗ, ಸಹನಾ ಮೂರ್ತಿಯ ಹೆಣ್ಣಿನ ಚಿತ್ರಣವಾಗಲೀ ಸ್ತ್ರೀವಾದಿಗಳು ಬಯಸುವ ರಕ್ತ, ಮಾಂಸ ತುಂಬಿದ ಹೆಣ್ಣಿನ ಆದರ್ಶ ಚಿತ್ರಗಳಲ್ಲಿ ಸ್ತ್ರೀಯ ಬದುಕಿನ ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ ಮತ್ತು ರಾಜಕೀಯ ಆಯಾಮಗಳಲ್ಲಿ ವಿರೋಧದ ಸಂಘರ್ಷವಿರುವ ವಾಸ್ತವ ನಮ್ಮ ಕಣ್ಣಮುಂದಿರುವ ಕಾದಂಬರಿಗಳಲ್ಲಿ ಅಧ್ಯಯನದಿಂದ ವ್ಯಕ್ತವಾಗುತ್ತದೆ.

ಹೀಗಿದ್ದಂತಹ ಎಲ್ಲ ವೈರುಧ್ಯಗಳ ಸಂಘರ್ಷಗಳ ನಡುವೆಯೂ ಹೆಣ್ಣಿನ ವ್ಯಕ್ತಿತ್ವದ ಸಮಗ್ರತೆಯ ವಿಷಯ ಸಾಹಿತ್ಯದಲ್ಲಿ ಮೂಡಿ ಬರಬೇಕಾಗಿದೆ. ಇಂದಿನ ಸ್ತ್ರೀವಾದಿಗಳೆಂದು ಕರೆಯಿಸಿಕೊಳ್ಳುವ ಲೇಖಕ-ಲೇಖಕಿಯರು ತಮ್ಮ ಗ್ರಹಿಕೆಗಳ ಮೂಸೆಯಲ್ಲಿಯೇ ಸಾಹಿತ್ಯದಲ್ಲಿ ಸ್ತ್ರೀವಾದವನ್ನು ಅರ್ಥೈಸಿಕೊಂಡಿದ್ದಾರೆ. ಸ್ತ್ರೀವಾದ ಎಂದು ಗುರುತಿಸಬಹುದಾದ ಹೆಜ್ಜೆಗಳು ಕನ್ನಡ ಸಾಹಿತ್ಯದಲ್ಲಿ ಮೂಡಿ ಬಂದಿವೆಯೇ ಹೊರತು, ಸ್ತ್ರೀವಾದದ ಮಹತ್ವದ ಹೆಜ್ಜೆ ಎಂದು ಗುರುತಿಸಬಹುದಾದಂತಹ ಸ್ತ್ರೀವಾದದ ಸಮಗ್ರತೆಯ ವಿಷಯವನ್ನೊಳಗೊಂಡ ಕಾದಂಬರಿ ಅಥವಾ ಸಾಹಿತ್ಯದಲ್ಲಿ ಸ್ತ್ರೀವಾದವೇ ಮುಖ್ಯವಾಗಿ ಚಿತ್ರಣವಾಗುವಂಥ ಕೃತಿಗಳು ಇಂದು ಹೊರಬರಬೇಕಾಗಿದೆ.

ಈ ಹಿನ್ನೆಲೆಯಲ್ಲಿ ಇವತ್ತಿನ ಲೇಖಕ-ಲೇಖಕಿಯರು ಎಚ್ಚರಿಕೆಯಿಂದ ಮುನ್ನಡೆಯಬೇಕು. ಅವರು ಜವಾಬ್ದಾರಿ ಗ್ರಹಿಕೆ, ಚಿಂತನೆಗಳೊಂದಿಗೆ, ಜವಾಬ್ದಾರಿಯುತ ಹೆಜ್ಜೆ ಇಡುವ ಬಹುದೊಡ್ಡ ಅಗತ್ಯವಿದೆ ಎಂದು ಅನಿಸುತ್ತದೆ.

ಪ್ರಸ್ತುತ ಸಂದರ್ಭದಲ್ಲಿ ಮಹಿಳಾ ವಿಮೋಚನೆಗಾಗಿ ಅನೇಕ ಜನಪರ ಸಂಘ-ಸಂಸ್ಥೆಗಳು ಹೋರಾಟ ಮಾಡುತ್ತಲಿವೆ. ಇಂಥ ಹೋರಾಟಗಳು ಕೇವಲ ಹೋರಾಟಗಳಾಗದೇ ನಿಜವಾದ ಮಾನವೀಯ ಮೌಲ್ಯಗಳನ್ನು ಬಿಂಬಿಸುವತ್ತ ದಿಟ್ಟ ಹೆಜ್ಜೆ ಇಡುವುದು ತೀರಾ ಅತ್ಯವಶ್ಯಕವಾಗಿದೆ.

ಇತ್ತೀಚೆಗೆ ಲಿಂಗಭೇದಕ್ಕೆ ಆರು ಕೋಟಿ ಮಹಿಳೆಯರು ಬಲಿಯಾಗಿರುವುದಾಗಿ ವಿಶ್ವಸಂಸ್ಥೆಯ ವರದಿಯೊಂದು ಹೊರಬಿದ್ದಿದೆ. 'ಹೆಣ್ಣಿಗಿಂತ ಗಂಡು ಶ್ರೇಷ್ಠ' ಎಂಬ ಅಮಾನುಷ ನಂಬಿಕೆಯೊಂದು ಹೆಣ್ಣು ಶಿಶುಗಳು ಹೊರ ಜಗತ್ತಿಗೆ ಕಣ್ಣುಬಿಡುವ ಮೊದಲು ಭ್ರೂಣಾವಸ್ಥೆಯಲ್ಲೆ ಗರ್ಭಪಾತದ ಮೂಲಕ ತೆಗೆದುಹಾಕಿದ್ದು ತುಂಬಾ ಅಮಾನವೀಯವಾದದ್ದು. ಇಂಥ ಲಿಂಗಭೇದ ಸಮಸ್ಯೆ ಭಾರತಕ್ಕಷ್ಟೇ ಸೀಮಿತವಾಗಿಲ್ಲ, ಇಡೀ ಜಗತ್ತೇ ಈ ಜಾಡ್ಯದಿಂದ ಜರ್ಝರಿತವಾಗಿದೆ.

ಮನುಷ್ಯ ಹಕ್ಕಿಯಂತೆ ಆಕಾಶದಲ್ಲಿ ಹಾರಾಡಲು ಕಲಿತ, ಮೀನಿನಂತೆ ನೀರಿನಲ್ಲಿ ಈಜಾಡಲು ಕಲಿತ, ಆದರೆ ಮನುಷ್ಯ ಮನುಷ್ಯನಾಗಿ, ಇನ್ನೊಬ್ಬರನ್ನು ಮನುಷ್ಯರಂತೆ ನೋಡುವ ಮನೋಭಾವ ಮೂಡದಿರುವುದು ಖೇದದ ಸಂಗತಿಯಾಗಿದೆ. 'ಬುದ್ಧಿ ಬ್ರಹ್ಮಾಂಡ; ಹೃದಯ ಬುಡಿಮೆಕಾಯಿ' ಎನ್ನುವ ಹಾಗೆ ನಾವು ಇಡೀ ವಿಶ್ವದ ಜ್ಞಾನವನ್ನೇ ತಲೆಯಲ್ಲಿ ತುಂಬಿ ಕೊಂಡು ಮಾನವೀಯತೆಯಿಂದ ಬಾಳದಿದ್ದರೆ ಅದು ನಿರರ್ಥಕವೆನಿಸುತ್ತದೆ. ನಾವು ಇಂದು ಅತ್ಯಂತ ಮುಂದುವರೆದಿದ್ದೇವೆ ಎಂದು ಹೇಳಿಕೊಳ್ಳುತ್ತೇವೆ. ಆದರೆ ಇಂಥ ಘಟನೆಗಳನ್ನು ಗಮನಿಸಿದಾಗ ಹಿಂದಕ್ಕೇ ಸರಿಯುತ್ತಿದ್ದೇವೇನೋ ಎಂದು ಭಾಸವಾಗುತ್ತದೆ.

ತಲತಲಾಂತರದಿಂದ ಬೆಳೆದು ಬಂದ ಈ ಲಿಂಗಭೇದ ನೀತಿಯನ್ನು ಸಾಮಾಜಿಕ, ಶೈಕ್ಷಣಿಕ, ಧಾರ್ಮಿಕ ಹಾಗೂ ರಾಜಕೀಯ ನೆಲೆಗಳಲ್ಲಿ ಬೇರು ಸಮೇತವಾಗಿ ಕಿತ್ತು ಹಾಕಬೇಕಾಗಿದೆ. ನಮ್ಮಲ್ಲಿ ಉದಾತ್ತಭಾವದ ಹೊಸ ಬೆಳಕು ಮೂಡಿ ಬರಬೇಕಾಗಿದೆ. ಪುರುಷ-ಮಹಿಳೆ ಎಂಬ ಲಿಂಗಭೇದವನ್ನು ಅಳಿಸಿ, ಪ್ರತಿಯೊಬ್ಬರನ್ನು ವ್ಯಕ್ತಿಯಾಗಿ ಗೌರವಿಸುವ ಮನೋಭಾವಿಕ ವಿಮೋಚನೆಯಾಗಬೇಕಿರುವುದು ಇಂದು ಜರೂರಾಗಿದೆ.

ಒಟ್ಟಿನಲ್ಲಿ ಸಮಾಜದಲ್ಲಿ ಹೆಣ್ಣಿಗಿರುವ ದುರವಸ್ಥೆ, ಎರಡನೆಯ ದರ್ಜೆಯ ಸ್ಥಾನ-ಮಾನ ಇಲ್ಲವಾಗ ಬೇಕು. “ಮಹಿಳೆಯ ಸ್ವಾತಂತ್ರ್ಯ ಪುರುಷನ ಸ್ವಾತಂತ್ರ್ಯಕ್ಕೆ ಪೂರಕವಾಗಿದೆ. ಆಕೆ ದುರಭಿಮಾನದಿಂದ ಕೂಡಿದ ಮೇಲರಿಮೆಯುಳ್ಳ ವರ್ತಿಸುತ್ತಿರುವ ಕಾರಣ ಸ್ವಾತಂತ್ರ್ಯವನ್ನು ಅನುಭವಿಸಲು ಅಸಮರ್ಥಳಾಗಿದ್ದಾಳೆ. ಸ್ತ್ರೀ ಸ್ವಾತಂತ್ರ್ಯ ಪಡೆದ ನಂತರವೇ ಪುರುಷ ತನ್ನ ಅಹಂಕಾರದಿಂದ ಮುಕ್ತನಾಗುವನು. ಮಹಿಳೆಯನ್ನು ಗೌರವಿಸುವ ಮೂಲಕ ಮಾತ್ರ ಆತನು ಗೌರವಕ್ಕೆ ಅರ್ಹನಾಗುವನು” ಎನ್ನುವ ರಂಜಾನ ದರ್ಗಾರವರ ಇಂತಹ ಮಾತುಗಳನ್ನು ಇಂದಿನ ಸ್ತ್ರೀ-ಪುರುಷರಿಬ್ಬರೂ ಅರ್ಥಮಾಡಿಕೊಂಡು ಸಮಾನತೆಯ ಸಮಾಜ ಕಟ್ಟಬೇಕಾಗಿದೆ. ಎಲ್ಲರೂ ಕೈಗೆ ಕೈಕೂಡಿಸಿ ಲಿಂಗಭೇದ ನಿವಾರಣೆ ಮಾಡಿ, ಸಮಾನತೆಯನ್ನು ನಿರ್ಮಾಣ ಮಾಡುವತ್ತ ಹೊಸ ಹೆಜ್ಜೆ ಇಡಬೇಕಾಗಿದೆ.

ಗ್ರಂಥಋಣ

=======

೧. ಅಂಥನೂರು ಶೋಭ
ಶ್ರೀಲಕ್ಷ್ಮಿ ಬಿ.ಜಿ. — ಮಹಿಳೆಯ ಮನ್ವಂತರ (೧೯೮೮) ವನಿಸಿ ಪ್ರಕಾಶನ ಬೆಂಗಳೂರು.

೨. ಆಮೂರ ಜಿ.ಎಸ್. — ಕನ್ನಡ ಕಥನ ಸಾಹಿತ್ಯ ಕಾದಂಬರಿ (೧೯೯೪) ಶ್ರೀಹರಿ ಪ್ರಕಾಶನ ಧಾರವಾಡ.

೩. ಅಶೋಕ ಟಿ.ಪಿ. — ಪುಸ್ತಕ ಪ್ರೀತಿ (೧೯೯೩) ಅಕ್ಷರ ಪ್ರಕಾಶನ ಹೆಗ್ಗೋಡು ಸಾಗರ

೪. ಇಂದಿರಾ ಆರ್ — ಸ್ತ್ರೀವಾದ ಚಿಕಿತ್ಸೆ (೧೯೯೫) ಮಹಿಳಾ ಅಧ್ಯಯನ ಕೇಂದ್ರ ಮೈಸೂರು.

೫. ಕಮಲಾ ಹಂಪನಾ — ಬಾಗಿನ (೧೯೮೫) ಸುಂದರ ಪ್ರಕಾಶನ ಮಾಳಮಡ್ಡಿ ಧಾರವಾಡ.

೬. ಚಕ್ರಕೋಡಿ ಈಶ್ವರಶಾಸ್ತ್ರಿ (ಅನು) — ಮನುಸ್ಮೃತಿ (೧೯೬೯) ಸಮಾಜ ಪುಸ್ತಕಾಲಯ ಧಾರವಾಡ.

೭. ಚಂದ್ರಶೇಖರ ಪಾಟೀಲ — ಸಂಕ್ರಮಣ ಸಾಹಿತ್ಯ ಸಂಪುಟ-೨ (೧೯೯೩) ಸಂಕ್ರಮಣ ಪ್ರಕಾಶನ ಧಾರವಾಡ.
(ಪ್ರಗತಿಶೀಲ, ನವ್ಯ-ದಲಿತ-ಬಂಡಾಯ.)

೮. ಜವರಯ್ಯ ಮ.ನ.(ಸಂ) — ಅಂಬೇಡ್ಕರ್ ಮತ್ತು ಸಾಮಾಜಿಕ ನ್ಯಾಯ (೧೯೯೬) ವಿದ್ಯಾರ್ಥಿ ಗ್ರಂಥಮಾಲೆ, ಮೈಸೂರು.

೯. ಜವರೇಗೌಡ. ದೇ (ಸಂ) — ಶ್ರೀ ಕೇವನಾವತಿ ಕುವೆಂಪು (೧೯೮೩) ಸಹ್ಯಾದ್ರಿ ಪ್ರಕಾಶನ ಮೈಸೂರು

೧೦. ಡಾ. ಜವಳಿ ಬಿ.ವಿ — ಹರಿಹರ ಕವಿಯ ಸ್ತ್ರೀಪಾತ್ರ ದರ್ಶನ (೧೯೮೩) ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ

೧೦. ನಾಗರಾಜ ಡಿ.ಆರ್. — ಸಾಹಿತ್ಯ ಕಥನ (೧೯೯೬) ಅಕ್ಷರ ಪ್ರಕಾಶನ ಹೆಗ್ಗೋಡು ಸಾಗರ.

೧೨. ನೇಮಿಚಂದ್ರ — ಲೇಖನ ಗೌರವ (೧೯೮೬) ಕರ್ನಾಟಕ ಲೇಖಕಿಯರ ಸಂಘ ಬೆಂಗಳೂರು.

೧೩. ಡಾ. ಬಸವರಾಜು. ಎಲ್. ದೇವರ ದಾಸಿಮಯ್ಯನ ವಚನಗಳು (೧೯೭೦) ಗೀತಾ ಬುಕ್ ಹೌಸ್, ಮೈಸೂರು.

೧೪. ಡಾ. ಬಸವರಾಜ ಸಬರದ ಕೆಂಡಸಂಪಿಗೆ (೧೯೯೦) ಪಲ್ಲವಿ ಪ್ರಕಾಶನ, ಬೀದರ.

೧೫. ಅದೆ ಬಸವೇಶ್ವರ ಮತ್ತು ಪುರಂದರದಾಸ ಒಂದು ಸಾಹಿತ್ಯಿಕ ಅಧ್ಯಯನ (೧೯೯೩) ತರಳಬಾಳು ಪ್ರಕಾಶನ, ಸಿರಿಗೆರೆ.

೧೬. ಅದೆ ಸಾಹಿತ್ಯ ಸಂವಾದ (೧೯೯೪) ಪಲ್ಲವಿ ಪ್ರಕಾಶನ, ಗುಲ್ಬರ್ಗಾ.

೧೭. ಬೋಸ್. ಎನ್. ಕೆ ಈಶ್ವರಚಂದ್ರ ವಿದ್ಯಾಸಾಗರ (೧೯೭೯) ನ್ಯಾಷನಲ್ ಬುಕ್ ಟ್ರಸ್ಟ್ ಇಂಡಿಯಾ, ದಿಹಲಿ.

೧೮. ಮನು ಚಕ್ರವರ್ತಿ. ಎನ್. (ಸಂ) ಭಾರತೀಯ ಸ್ತ್ರೀವಾದ.

೧೯. ಡಾ. ಮಂಗಲಾ ಆರ್ಯ ಸಾಹಿತ್ಯ ಸಿದ್ಧಾಂತ ಹೋರಾಟ ಮತ್ತು ಹೋರಾಟ

೨೦. ಮಂಗಲಾ ಆರ್ಯ ಸಾಹಿತ್ಯ: ಆಶಯ ಮತ್ತು ವಿನ್ಯಾಸ (೧೯೮೮) ಸಂಕ್ರಮಣ ಪ್ರಕಾಶನ, ಧಾರವಾಡ.

೨೧. ಡಾ. ಮಂಗವಾಲಿಸಿ. ಪಿ. ಕೆ. ಗ್ರಂಥ ಸಮೀಕ್ಷೆ (೧೯೯೬) ಕನ್ನಡ ವಿಭಾಗ, ಮುಂಬಯಿ ವಿಶ್ವವಿದ್ಯಾಲಯ

೨೨. ಡಾ. ಮಲ್ಲಿಕಾ ಘಂಟಿ ಕನ್ನಡದಲ್ಲಿ ಮಹಿಳಾ ಕಥಾಸಾಹಿತ್ಯ (೧೯೯೪) ಯುವ ಲೋಕ ಪ್ರಕಾಶನ, ಧಾರವಾಡ.

೨೩. ಮಹೇಶ ತಿಪ್ಪಶೆಟ್ಟಿ ಸಾಮಾಜಿಕ ಆಲೋಚನೆ (೧೯೯೫) ದಾಳಿಂಬ ಪ್ರಕಾಶನ, ಹುನಗುಂದ.

೨೪. ರಹಮತ ತರೀಕೆರೆ (ಸಂ) ಸಾಹಿತ್ಯ ವಿಮರ್ಶೆ (೧೯೯೩) ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೨೫. ರಾಮಚಂದ್ರಪ್ಪ ಬರಗೂರು (ಸಂ) ಅನಿಕೇತನ (೧೯೯೨) ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು

೧೬. ರಾಮಚಂದ್ರಪ್ಪ ಬರಗೂರು(ಡಾ)	ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ಸ್ವರೂಪ		ಕನ್ನಡ ಸಾಹಿತ್ಯ ಪುನರ್ಮೌಲ್ಯೀಕರಣ ವೇದಿಕೆ ಬೆಂಗಳೂರು
೧೭. ರಾಮಚಂದ್ರನ್ ಸಿ.ಎನ್	ಆಶಯ - ಆಕೃತಿ	೧೯೯೫	ಅಭಿನವ ಪ್ರಕಾಶನ ರಾಜಾಜಿ ನಗರ ಬೆಂಗಳೂರು
೧೮. ವಾಗೀಶ್ವರಿ ಶಾಸ್ತ್ರಿ	ಹಿಂದೂ ಸ್ತ್ರೀ ಚರಿತೆಯೊಂದು ಚಿಂತನೆ	೧೯೯೨	ತ್ಯಾಗರಾಜ ನಗರ
೧೯. ವಿಜಯಾ ದಬ್ಬೆ	ಮಹಿಳೆ ಸಾಹಿತ್ಯ ಸಮಾಜ	೧೯೮೯	ರಚನಾ ಪ್ರಕಾಶನ ಮೈಸೂರು
೨೦. ಡಾ. ವೀಣಾ ಶಾಂತೇಶ್ವರ	ಮಹಿಳಾ ಅಧ್ಯಯನ	೧೯೯೨	ಪ್ರೊ. ಎಚ್. ವಿ. ನಾಗೇಶ ಸ್ಮಾರಕ ಸಮಿತಿ ಧಾರವಾಡ
೨೧. ಅನು: ವೈದೇಹಿ	ಬೆಳ್ಳಿಯ ಸಂಕೋಲೆಗಳು	೧೯೮೫	ಅಕ್ಷರ ಪ್ರಕಾಶನ ಸಾಗರ ಬೆಂಗಳೂರು
೨೨. ಶರಬೇಂದ್ರಯ್ಯ ಬಿ.ಎಂ.	ಆನಂದ ಮತ್ತು ಅರಿವು	೧೯೯೨	ಮುರುಘಾ ರಾಜೇಂದ್ರ ಪ್ರಕಾಶನ ಮುರುಘಾರು-ಚಿತ್ರದುರ್ಗ
೨೩. ಶಶಿಕಲಾ ವೀರಯ್ಯ ಸ್ವಾಮಿ	ಸಂವೇದನೆ	೧೯೯೫	ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು
೨೪. ಡಾ. ಶಾಲಿನಿ ರಘುನಾಥ	ಸಮಸ್ಥಿತ	೧೯೯೪	ಅಕ್ಷರ ಪ್ರಕಾಶನ ಹೆಗ್ಗೋಡು ಸಾಗರ
೨೫. ಶಿವಪ್ರಕಾಶ ಎಚ್.ಎಸ್ (ಡಾ)	ಸಿರಿ ಸಂಪಿಗೆ ಕಂಬಾರ ೬೦	೧೯೯೬	ರಂಗ ನಿರಂತರ ಪ್ರಕಾಶನ ರಾಜಾಜಿ ನಗರ ಬೆಂಗಳೂರು
೨೬. ಶಿವರುದ್ರಪ್ಪ ಜಿ.ಎಸ್ (ಡಾ)	ಕನ್ನಡ ಸಾಹಿತ್ಯ ಸಂದರ್ಭ	೧೯೯೦	ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು
೨೭. ಡಾ. ಸುಮಿತ್ರಾಬಾಯಿ ಬಿ.ಎನ್ (ಡಾ)	ಸ್ತ್ರೀವಾದಿ ಪ್ರವೇಶಿಕೆ	೧೯೯೫	ಕರ್ನಾಟಕ ಲೇಖಕಿಯರ ಸಂಘ ಚಾಮರಾಜನಗರ ಬೆಂಗಳೂರು
೨೮. ಸುಮಿತ್ರಾ ಎಲ್.ಸಿ.	ವಿಭಾವ	೧೯೯೬	ಅಕ್ಷರ ಪ್ರಕಾಶನ ಹೆಗ್ಗೋಡು ಸಾಗರ

೩೯. ಡಾ. ಹಿರೇಮಠ ಅಜ್ಜಪ್ಪ — ಲೇಖಕಿಯರ ಕೃತಿಗಳಲ್ಲಿ ಸ್ತ್ರೀ ಪಾತ್ರಗಳು — ೧೯೯೪ — ಪ್ರಸಾರಾಂಗ ಗುಲ್ಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ

೪೦. ಡಾ. ಹಂಪಿ ಬಿ.ಬಿ.
ಡಾ. ಬಿರಾದಾರ ಎಂ.ಜಿ.
ಡಾ. ಲಕ್ಷ್ಮೀ ಎಂ.ಎಸ್ — ಹರದೇಶಿ- ನಾಗೇಶಿ(ಲಾವಣಿ) — ೧೯೮೩ — ಕನ್ನಡ ಅಧ್ಯಯನ ವಿಭಾಗ ಗುಲ್ಬರ್ಗಾ ವಿಶ್ವವಿದ್ಯಾಲಯ ಗುಲ್ಬರ್ಗಾ

೪೧. ಹೇಮಾ ಪಟ್ಟಣಶೆಟ್ಟಿ — ಮಯೂರಿದ ಮುಕುರದಲ್ಲಿ — ೧೯೯೨ — ಅವ್ವ ಪ್ರಕಾಶನ ವಿದ್ಯಾಗಿರಿ ಧಾರವಾಡ

೪೨. Crystal David — The Cambridge Enoyolopedia — 1990 — Cambridge University. Press

೪೩. Harabembas M
Heald R.M — Sooialogy Themes and Perspeotives — Delhi Oxford University Press, Bombay, Caloutta, Madras.

೪೪. DoranneJaoobson
Susan S.Hadley. — Women in India — 1995 — Manohar Publishers & 2/6, Ansari Road, Daryaganj New Delhi.

೪೫. Madhu Shastri — Status of Hindu Women — 1990 — Rajkumar Parmani, R8 BA Publishers, IMS Highway, JAIPUR (INDIA).

೪೬. Neera Desai and
Maithreyi Krishnaji. — Women and Society in India — 1990 — Ajanta Publioations Jawahar Nagar, Delhi.

೪೭. Azimsaukath — Muslim women emerging emerging identity — 1997 — Rawat publioations Jaipur and New Delhi.

೪೮. Simone De Beauvoir — The Second Sex — 1988 — Pan Books Ltd Cavaye Place, London.

೪೯. ಮಾನಸ — (ಮಾಸಿಕ ತಿಂಗಳ ಪತ್ರಿಕೆ) — 1992 — ಫೆಬ್ರವರಿ, ಮಾರ್ಚ್

೫೦. ಬಿ.ವಿ.ವೈಕುಂಠರಾಜು (ಸಂ) — ವಾರ ಪತ್ರಿಕೆ — 1997 — ಜೂನ್ ೨೯, ಜುಲೈ ೫.

೫೧. ಸುಧಾ — ಮಾಸಿಕ ಮಾನ ಪತ್ರಿಕೆ — 1985 — ಸಂಚಿಕೆ ೧೧-೧೨, ಆಗಸ್ಟ್, ಸೆಪ್ಟೆಂಬರ್.

೫೨. ಶ್ರೀವಾಣಿ — ಸುಧಾ ತಿಂಗಳ ಪತ್ರಿಕೆ — 1994 — ಸಂಚಿಕೆ-೧೦ ಸಂಪುಟ ೬.

AKSHARA GRANTHALAYA
ACCN NO:042161